(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೇ, "ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2000-ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್ : ಪ್ರಸ್ತಾವ ಏನೆಂದರೆ "ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 2000ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಛೇರ್ಮನ್ : ಸಭೆಯು ದಿನದ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಿ ಸೋಮವಾರ-2-00 ಗಂಟೆಗೆ ಪುನಃ ಸಮಾವೇಶಗೊಳಿಸುವುದು.

(ಸಭೆಯು ತನ್ನ ದಿನದ ಕಾರ್ಯಕಲಾಪಗಳನ್ನು ಎರಡು ಘಂಟೆ ಹದಿಮೂರು ನಿಮಿಷಗಳಿಗೆ ಮುಕ್ತಾಯಗೊಳಿಸಿ 27-3-2000 ನೇ ಸೋಮವಾರದಂದು ಮಧ್ಯಾಹ್ನ ಎರಡು ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ 27ನೇ ಮಾರ್ಚ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ : 2 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ಎಂ.ವಿ. ವೆಂಕಟಪ್ಪ)** ಅವರು ಪೀಠವನ್ನು ಅಲಂಕರಿಸಿದ್ದರು.

ಆಯವ್ಯಯ ಮಂಡನೆ 2000-2001

ಅಧ್ಯಕ್ಷರು : ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) ಅವರು 2000-2001ನೇ ಸಾಲಿನ ಆಯವ್ಯಯವನ್ನು ಮಂಡಿಸುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು ಮತ್ತು ಅರ್ಥ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ,

ನಾನು 2000-2001ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಮಂಡಿಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೆ,

1. ನಾನು ಕರ್ನಾಟಕ ಸರ್ಕಾರದ 2000-2001ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ. ಇದು 21 ನೇ ಶತಮಾನದ ಹಾಗೂ ಮೂರನೆ ಸಹಸ್ರಮಾನದ ಪ್ರಪ್ರಥಮ ಮುಂಗಡ ಪತ್ರ.

ಕೇವಲ ಐದು ತಿಂಗಳ ಹಿಂದಷ್ಟೇ, ಕರ್ನಾಟಕದ ಬುದ್ಧಿವಂತ ಜನರು ಎಲ್ಲ ಚುನಾವಣಾ ಸಮೀಕ್ಷೆಗಳನ್ನು ಹುಸಿಗೊಳಿಸಿ ಕಾಂಗ್ರೆಸ್ ಪಕ್ಷಕ್ಕೂ ಅತ್ಯುತ್ಸಾಹದ ಜನಾದೇಶ ನೀಡಿದರು.

ಈ ರಾಜ್ಯದ ಜನತೆ ನಮ್ಮ ಮೇಲಿಟ್ಟಿರುವ ನಂಬಿಕೆ, ವಿಶ್ವಾಸಗಳಿಗೆ ನಾವು ಋಣಿಯಾಗಿದ್ದೇವೆ. ಹಾಗೆಯೆ ಅವರು ನಮ್ಮ ಮೇಲೆ ಹೊರಿಸಿರುವ ಮಹತ್ತರ ಜವಾಬ್ದಾರಿಯ ಬಗ್ಗೆಯೂ ಎಚ್ಚರದಿಂದ ಇದ್ದೇವೆ.

ಕರ್ನಾಟಕದ ಸಮಸ್ತ ಜನತೆಯ ನಂಬಿಕೆ, ಆಶಯ, ನಿರೀಕ್ಷೆ ಮತ್ತು ಕನಸುಗಳನ್ನು ನಾವೀಗ ನನಸುಗೊಳಿಸಬೇಕಾಗಿದೆ.

2. ಜನತೆಯ ಆಶೋತ್ತರಗಳನ್ನು ಈಡೇರಿಸಲು ನಾವು ಶಕ್ತಿಮೀರಿ ಶ್ರಮಿಸುತ್ತೇವೆ.

ಇದು ನಮ್ಮ ಪವಿತ್ರ ಪ್ರತಿಜ್ಞೆ. ಇದು ನಮ್ಮ ದೃಢ ಸಂಕಲ್ಪ.

ಭರವಸೆ ಆಶ್ವಾಸನೆಗಳನ್ನು ನೀಡುವ ಕಾಲ ಮುಗಿಯಿತು. ಈಗ ಅನುಷ್ಠಾನದ ಕಾಲ ಪ್ರಾರಂಭ.

3. ಮಾನ್ಯರೆ, ಮುಂಗಡ ಪತ್ರ ಕೇವಲ ಲೆಕ್ಕಾಚಾರಗಳ ವ್ಯಾಖ್ಯಾನವಲ್ಲ, ಹಾಗೆಯೆ ಆದಾಯ ಮತ್ತು ವೆಚ್ಚಗಳ ಮಾಮೂಲಿ ವಾರ್ಷಿಕ ವರದಿಯೂ ಅಲ್ಲ. ಅದು ಇವೆಲ್ಲಕ್ಕಿಂತ ಮಿಗಿಲಾದದ್ದು. ಮುಂಗಡ ಪತ್ರವೆಂದರೆ; ಅಧಿಕಾರದಲ್ಲಿರುವ ಸರ್ಕಾರಕ್ಕೆ ತನ್ನ ಆರ್ಥಿಕಸೂಚಿ, ಸಾಮಾಜಿಕ ಆದ್ಯತೆ ಮತ್ತು ಒಳನೋಟಗಳನ್ನು ನಿಚ್ಚಳಗೊಳಿಸಲು ಸಿಕ್ಕಿರುವ ಅಪೂರ್ವ ಅವಕಾಶ. ಅದನ್ನೇ ನಾನು ಇಲ್ಲಿ ಸಂಕ್ಷಿಪ್ತವಾಗಿ ಹೇಳಲು ಉದ್ದೇಶಿಸಿದ್ದೇನೆ.

ಈ ಮುಂಗಡ ಪತ್ರವು ಭವಿಷ್ಯದಲ್ಲಿ ನೆಲೆ ನಿಂತು ವರ್ತಮಾನದ ಆದ್ಯತೆಗಳು ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಸಾಕಾರಗೊಳಿಸುತ್ತಿದೆ.

ಈ ದಿನ ಮುಗಿದಿದೆ.

ಆದರೆ ನಾಳೆಯನ್ನು ರೂಪಿಸಬಹುದು.

ಆದ್ದರಿಂದ, ಈ ಮುಂಗಡ ಪತ್ರವು ಕರ್ನಾಟಕದ ನಾಳಿನ ನೋಟವಾಗಿದೆ. ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿರುವ ಕರ್ನಾಟಕದ ಬಗ್ಗೆ ನಮ್ಮ ವಿಶ್ವಾಸವನ್ನು ಪುನರ್ ದೃಢೀಕರಿಸುವ ದಾಖಲೆಯಾಗಿದೆ.

4. ಕರ್ನಾಟಕ ಹಲವು ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ. ಇದರ ಸಾಧನೆಗಳು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಮಾನ್ಯತೆಗಳಿಸಿವೆ.

ಆದರೂ ಇನ್ನೂ ಹಲವಾರು ಸವಾಲುಗಳು ನಮ್ಮ ಮುಂದಿವೆ. ಪೂರ್ಣವಾಗದಿರುವ ಕಾರ್ಯಗಳು ನಮ್ಮ ಗಮನ ಸೆಳೆಯುತ್ತಿವೆ.

ಕನ್ನಡದ ಹೆಮ್ಮೆಯ ಕವಿ ಕುವೆಂಪು *"ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು"* ಎಂದಿದ್ದಾರೆ. ಇದು ನಮ್ಮ ಮಾರ್ಗದರ್ಶಿ.

ಭವಿಷ್ಯದ ಸವಾಲುಗಳು

5. ಮೊದಲನೆಯದಾಗಿ, ಬಡತನ ನಿರ್ಮೂಲನೆ, ಮಹಿಳಾ ಜಾಗೃತಿ, ಸಮಾಜದ ದುರ್ಬಲ ವರ್ಗದವರಿಗೆ ಆಹಾರ ಮತ್ತು ಪೌಷ್ಟಿಕತೆ ಒದಗಿಸುವುದು ನನ್ನ ಸರ್ಕಾರದ ಅಗ್ರ ಪ್ರಾಶಸ್ತ್ಯವಾಗಿದೆ. ಸರ್ಕಾರ, ಕಳೆದ ಎರಡು ದಶಕದಿಂದಲೂ ಹಲವಾರು ಬಡತನ ನಿವಾರಣಾ ಯೋಜನೆಗಳನ್ನು ಜಾರಿಗೊಳಿಸುತ್ತಲೇ ಬಂದಿದೆ. ಇವುಗಳ ಪರಿಣಾಮಕಾರಿ ಅನುಷ್ಠಾನ ಈಗ ನಮ್ಮ ಮುಂದಿರುವ ಸವಾಲು. ಬಡತನದ ಮೇಲೆ ನೇರ ಹೋರಾಟ ಮಾಡಿ ಜನರ ಜೀವನಸುಧಾರಣೆಗೆ ನಾವು ಶ್ರಮಿಸಬೇಕಾಗಿದೆ.

6. ಎರಡನೆಯದಾಗಿ, 1990ರ ದಶಕದಲ್ಲಿ ಕರ್ನಾಟಕದ ಆರ್ಥಿಕ ಬೆಳವಣಿಗೆಯ ಸರಾಸರಿ ವಾರ್ಷಿಕ ಪ್ರಮಾಣ ಶೇಕಡ 5.8 ರಷ್ಟಿತ್ತು. 1980ರ ದಶಕದಲ್ಲಿದ್ದ ಶೇಕಡಾ 5 ರ ವಾರ್ಷಿಕ ಪ್ರಮಾಣಕ್ಕೆ ಹೋಲಿಸಿದರೆ ಇದು ಸುಧಾರಣೆಯೇ ಸರಿ. ಆದರೆ ವಾಸ್ತವವಾಗಿ ಶೇಕಡಾ 5.8 ಒಳ್ಳೆಯ ಬೆಳವಣಿಗೆಯೇನಲ್ಲ. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಮುಂದಿನ ಹತ್ತು ವರ್ಷಗಳಲ್ಲಿ ಶೇಕಡಾ 7 ರಿಂದ 8 ರಷ್ಟು ವಾರ್ಷಿಕ ಬೆಳವಣಿಗೆ ಸಾಧಿಸಲು ನಾವು ನಮ್ಮ ನೀತಿ ಮತ್ತು ಕಾರ್ಯಕ್ರಮಗಳನ್ನು ಚುರುಕುಗೊಳಿಸಬೇಕು. ಹೆಚ್ಚಿನ ಆರ್ಥಿಕ ಬೆಳವಣಿಗೆಯಿಂದ ಮಾತ್ರ ನಮ್ಮ ಸಾಮಾಜಿಕ ಪ್ರಗತಿ ಸಾಧ್ಯ.

7. ಮೂರನೆಯದಾಗಿ, ಕರ್ನಾಟಕವು ಕೈಗಾರಿಕೆ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತನ್ನ ಅಪೂರ್ವ ಸಾಧನೆಯಿಂದಾಗಿ ಮಾನ್ಯತೆ ಪಡೆದಿದೆ. ಆದರೂ ನಮ್ಮ ಆರ್ಥಿಕ ತಳಹದಿಗೆ ಕೃಷಿ ವಲಯವೇ ಪ್ರಧಾನ ಎನ್ನುವುದನ್ನು ನಾವು ಇಲ್ಲಿ ಮರೆಯಲಾಗದು. ಕರ್ನಾಟಕದ ರೈತರಿಗೆ ಈಗ ಉತ್ತಮ ಬೀಜ ಮತ್ತು ರಸ ಗೊಬ್ಬರಗಳು ಬೇಕು. ಹೆಚ್ಚು ಸಾಲದ ನೆರವು ಬೇಕು. ನಿರಂತರ ಲಭ್ಯತೆಯ ವಿದ್ಯುತ್ ಬೇಕು, ಅವರ ಬೆಳೆಗಳಿಗೆ ಉತ್ತಮ ಬೆಲೆ ಬೇಕು, ಪ್ರಾಕೃತಿಕ ವಿಕೋಪದ ಸಮಯದಲ್ಲಿ ಅವರಿಗೆ ವಿಮೆ ಸೌಲಭ್ಯ ಬೇಕು. ಸಾಂಪ್ರದಾಯಿಕ ಕೃಷಿಗೆ ನಾವು ಹೊಸ ಚೇತನವನ್ನು ನೀಡುತ್ತಿರುವ ಈ ಸಮಯದಲ್ಲೇ; ತೋಟಗಾರಿಕೆ, ಪುಷ್ಪ ಕೃಷಿ, ಮೀನುಗಾರಿಕೆ ಮತ್ತು ಪಶು ಸಂಗೋಪನೆಗಳ ಬೆಳವಣಿಗೆಗೆ ಕೂಡ ಚಾಲನೆ ನೀಡಬೇಕಾಗಿದೆ. ನಮ್ಮದು ರೈತರಿಂದ ; ರೈತರಿಗಾಗಿ ; ರೈತರೇ ನಡೆಸುತ್ತಿರುವ ಸರ್ಕಾರ.

8. ನಾಲ್ಕನೆಯಾದಗಿ, ಗ್ರಾಮೀಣ ಸಂಪತ್ತಿನ ಅಭಿವೃದ್ಧಿಗೆ ನೀರಾವರಿಯನ್ನು ಬಿಟ್ಟರೆ ಪರ್ಯಾಯ ಮಾರ್ಗವೇ ಇಲ್ಲ. ನಾವು ಈಗಾಗಲೇ ಹಲವರು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇವೆ. ಇವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ, ನಮ್ಮ ನೀರಾವರಿ ಸಾಮರ್ಥ್ಯದ ಸಂಪೂರ್ಣ ಬಳಕೆ ಮಾಡಿಕೊಳ್ಳಬೇಕು. ನಮ್ಮ ನೀರಾವರಿ ವ್ಯವಸ್ಥೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿರುವಂತೆ ನೋಡಿಕೊಳ್ಳಬೇಕು. ನೀರಾವರಿ ನಿರ್ವಹಣೆಯಲ್ಲಿ ರೈತರು ಅರ್ಥಪೂರ್ಣವಾಗಿ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಉತ್ತೇಜಿಸಬೇಕು.

9. ಐದನೆಯದಾಗಿ, ರಾಜ್ಯದ ಮೂಲ ಸೌಲಭ್ಯಗಳಲ್ಲಿ ಗಣನೀಯ ವಿಸ್ತರಣೆಯಾಗಬೇಕು. ನಗರ ಮತ್ತು ಗ್ರಾಮೀಣ ಮೂಲ ಸೌಲಭ್ಯಗಳೆರಡೂ ಸುಧಾರಿಸಬೇಕು. ವಿದ್ಯುತ್, ರಸ್ತೆ, ನೀರು ಪೂರೈಕೆ ಮತ್ತು ನೈರ್ಮಲ್ಯ ಕ್ಷೇತ್ರಗಳು ಹೊಸ ಬಂಡವಾಳ ಹೂಡಿಕೆ ಮತ್ತು ಉತ್ತಮ ನಿರ್ವಹಣೆಗಾಗಿ ಹಾತೊರೆಯುತ್ತಿವೆ. ಈ ಕ್ಷೇತ್ರಗಳಲ್ಲಿ ಹೊಸ ಬಂಡವಾಳ ಹೂಡಿಕೆಯ ಅಗತ್ಯವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಈಗಾಗಲೆ ಹೂಡಿರುವ ಬಂಡವಾಳದ ದಕ್ಷ ಬಳಕೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಬೇಕು ಎನ್ನುವುದೂ ಇಲ್ಲಿ ಅಷ್ಟೇ ಮುಖ್ಯ. ನಮ್ಮ ಮೂಲಸೌಲಭ್ಯ ಯೋಜನೆಗಳು ಹೂಡಿಕೆಗೆ ತಕ್ಕಷ್ಟು ಪ್ರತಿಫಲ ನೀಡುವಂತೆ ಪ್ರಯತ್ನಿಸಬೇಕು. ಇದರಿಂದ ದೊರಕುವ ಆದಾಯವನ್ನು ಯೋಜನೆಗಳ ಪುನರ್ ವಿಸ್ತರಣೆಗೆ ಬಳಸಿಕೊಳ್ಳಬಹುದು. ಮೂಲಸೌಲಭ್ಯ ಯೋಜನೆಗಳನ್ನು ಚುರುಕುಗೊಳಿಸಲು ನಾವು ಹೊಸ ತಂತ್ರಗಳನ್ನು ಸೂಕ್ತವಾಗಿ ಅಳವಡಿಸಬೇಕಾಗಿದೆ.

10. ಆರನೆಯದಾಗಿ, ಸಾಮಾಜಿಕ ಹಿನ್ನಡೆಯನ್ನು ತೊಡೆದುಹಾಕಲು ನಾವು ದಿಟ್ಟ ಪ್ರಹಾರವನ್ನೇ ಮಾಡಬೇಕು. ರಾಜ್ಯದ ಹಲವಾರು ಪ್ರದೇಶಗಳಲ್ಲಿ ಮಹಿಳಾ ಸಾಕ್ಷರತೆ ಬಹಳ ಕಡಿಮೆ ಇದೆ. ಇತ್ತೀಚಿನ ವರ್ಷಗಳಲ್ಲಿ ಆರೋಗ್ಯ ವ್ಯವಸ್ಥೆ ಸಾಕಷ್ಟು ವಿಸ್ತರಣೆಯಾಗಿದ್ದರೂ, ಸಮಾಜದ ದುರ್ಬಲವರ್ಗದ ಮತ್ತು ಹಿಂದುಳಿದ ಪ್ರದೇಶಗಳ ಜನರ ಪ್ರಾಥಮಿಕ ಆರೋಗ್ಯ ರಕ್ಷಣೆಯಲ್ಲಿ ಇನ್ನೂ ಗಣನೀಯ ಸುಧಾರಣೆಯಾಗಬೇಕು. ರಾಜ್ಯದ ಯುವಸಮುದಾಯಕ್ಕೆ, ಅದರಲ್ಲೂ ವೃತ್ತಿಶಿಕ್ಷಣ ಪದವೀಧರರಿಗೆ ನಾವು ಹೆಚ್ಚು ಫಲಪ್ರದ ಉದ್ಯೋಗಾವಕಾಶಗಳನ್ನು ಒದಗಿಸಬೇಕು.

11. ಏಳನೆಯದಾಗಿ, ಕರ್ನಾಟಕವು ಕೈಗಾರಿಕಾ ಕ್ಷೇತ್ರದ ಬಂಡವಾಳ ಹೂಡಿಕೆಗೆ ಈಗ ಒದಗಿಸುತ್ತಿರುವ ಉತ್ತಮ ವಾತಾವರಣವನ್ನು ಮುಂದುವರಿಸಬೇಕು. ಸಾಂಪ್ರದಾಯಿಕ ವಲಯಗಳಾದ ಎಂಜಿನಿಯರಿಂಗ್, ಜವಳಿ, ಹಾಗೂ ಉತ್ಪಾದನಾ ಕ್ಷೇತ್ರಕ್ಕೆ ಮತ್ತು ನೂತನ ಕ್ಷೇತ್ರಗಳಾದ ಮಾಹಿತಿ ತಂತ್ರಜ್ಞಾನ, ಔಷಧಿ ತಯಾರಿಕೆ, ಜೈವಿಕ ತಂತ್ರಜ್ಞಾನ, ಮತ್ತು ಜ್ಞಾನಾಧಾರಿತ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು.

12. ಎಂಟನೆಯದಾಗಿ, ಕರ್ನಾಟಕದ ಜನತೆಗೆ ಜವಾಬ್ದಾರಿಯುತ, ಪಾರದರ್ಶಕ ಹಾಗೂ ಸ್ಪಂದಿಸುವ ಆಡಳಿತವನ್ನು ನೀಡಲು ನಾವು ಬದ್ಧರಾಗಿದ್ದೇವೆ. ಸರ್ಕಾರವು ತನ್ನ ಶಕ್ತಿ ಮತ್ತು ಪೋಷಣೆಯನ್ನು ರಾಜ್ಯದ ಜನರಿಂದಗಳಿಸುತ್ತದೆ. ಕರ್ನಾಟಕವು ಪ್ರಜಾಪ್ರಭುತ್ವ ವಿಕೇಂದ್ರೀಕರಣದಲ್ಲಿ ಮಾರ್ಗದರ್ಶಿ ರಾಜ್ಯವೆಂದು ಹೆಸರಾಗಿದೆ. ನನ್ನ ಹಿಂದಿನ ಗೌರವಾನ್ವಿತ ಗಣ್ಯರು ಈ ನಿಟ್ಟಿನಲ್ಲಿ ನೀಡಿರುವ ಕೊಡುಗೆಯನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ಪಂಚಾಯತ್ ಮತ್ತು ನಗರಪಾಲಿಕೆಗಳು ಅಭಿವೃದ್ಧಿಯ ಮೂರನೆ ಹಂತವಲ್ಲ. ಅವು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಥಮ ಹಂತವೇ ಸರಿ. ಇವುಗಳಿಗೆ ನಾವೀಗ ಹೊಸ ಚೈತನ್ಯವನ್ನು ತುಂಬಬೇಕು.

13. ಒಂಭತ್ತನೆಯದಾಗಿ, ಕರ್ನಾಟಕವೆಂದರೆ ಬೆಂಗಳೂರಲ್ಲ. ಕರ್ನಾಟಕ ಬೆಂಗಳೂರಿಗಿಂತ ವಿಶಾಲವಾದದ್ದು. ಬೆಂಗಳೂರನ್ನು ಜಗತ್ತಿನ ಹತ್ತು ಅಗ್ರಗಣ್ಯ ನಗರಗಳಲ್ಲಿ ಒಂದು ಎಂದೇ ಗುರುತಿಸಲಾಗುತ್ತದೆ. ನಾವು ರಾಜ್ಯದ ಎಲ್ಲ ಪ್ರಾಂತ್ಯಗಳನ್ನು ಅಭಿವೃದ್ಧಿಗೊಳಿಸಬೇಕು. ಅದರಲ್ಲೂ ವಿಶೇಷವಾಗಿ ನಮ್ಮೆಲ್ಲ ಸಂಪನ್ಮೂಲ ಬಳಸಿ ಉತ್ತರ ಕರ್ನಾಟಕವನ್ನು ಸಮಗ್ರವಾಗಿ ಪೋಷಿಸಿ ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕು.

14. ಅಂತಿಮವಾಗಿ, ನಾವು ನಮ್ಮ ಬಡಜನತೆಯ ಅಗತ್ಯಗಳನ್ನು ಪೂರೈಸುವ ಆರ್ಥಿಕ ವ್ಯವಸ್ಥೆಯನ್ನು ರೂಢಿಸಬೇಕು. ಹಾಗೆಯೆ ನಮ್ಮ ಸಾಮಾಜಿಕ - ಆರ್ಥಿಕ ಕಾಳಜಿಗಳನ್ನು ಬೆಂಬಲಿಸುವ ಆದರ್ಶಪ್ರಾಯ ಸಾರ್ವಜನಿಕವೆಚ್ಚದ ಶೈಲಿಯನ್ನು ರೂಪಿಸಬೇಕು. ಇದೇ ಸಮಯದಲ್ಲಿ ರಾಜ್ಯವನ್ನು ಸಾಲದ ಸುಳಿಯಿಂದ ದೂರವಿಡುವ ಆರ್ಥಿಕ ನೀತಿಯನ್ನು ಹಮ್ಮಿಕೊಳ್ಳಬೇಕು.

15. ನನ್ನ ಈ ಪ್ರಥಮ ಮುಂಗಡ ಪತ್ರವು ನಾನು ಮೇಲೆ ಹೇಳಿದ ಧ್ಯೇಯೋದ್ದೇಶಗಳಿಗೆ ಪೂರಕವಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಿದೆ. ನಮ್ಮ ಸುಧೀರ್ಘ ಪಯಣದಲ್ಲಿ ಇದು ಮೊದಲನೆ ಮೈಲಿಗಲ್ಲು. ಮುಂಗಡ ಪತ್ರವು ಪವಾಡಗಳನ್ನು ಮಾಡುವುದಿಲ್ಲ. ಅದು ನಮ್ಮ

ಕಾರ್ಯಗಳಿಗೆ ದಿಕ್ಕು, ಚಾಲನೆ ಮತ್ತು ಒತ್ತನ್ನು ನೀಡುತ್ತದೆ. ನಾನಿಲ್ಲಿ ಸಾಧಿಸಲಾಗದ ಘೋಷಣೆಗಳನ್ನು ಮಾಡುವುದಿಲ್ಲ. ಬದಲಿಗೆ, ನನ್ನ ಜನತೆಗೆ ವಿಶ್ವಾಸಾರ್ಹ ನೀತಿ ಮತ್ತು ಕಾರ್ಯಕ್ರಮಗಳನ್ನು ನೀಡುತ್ತಿದ್ದೇನೆ.

ಹೊಸ ಹೂಡಿಕೆಗಳು

16. ಮಾನ್ಯರೆ, ನಾವು ಕಳೆದ ಐದು ತಿಂಗಳಲ್ಲಿ ರಾಜ್ಯದ ಅಭಿವೃದ್ಧಿಗೆ ಬಂಡವಾಳ ಆಕರ್ಷಿಸಲು ಅನೇಕ ಸಂಸ್ಥೆಗಳ ಜೊತೆ ಮಾತುಕತೆ ನಡೆಸಿದ್ದೇವೆ. ನಮ್ಮ ಈ ಪ್ರಯತ್ನಗಳು ಫಲ ನೀಡಿವೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಲು ನಾನು ಸಂತಸಪಡುತ್ತೇನೆ.

17. ಮೊದಲನೆಯದಾಗಿ, ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದ ಜೊತೆ ಆಗೊಮ್ಮೆ ಈಗೊಮ್ಮೆ ಮಾತುಕತೆ ನಡೆಸಿದ್ದ ವಿಶ್ವಬ್ಯಾಂಕ್ ಈಗ ನಮ್ಮೊಡನೆ ಸವಿವರವಾದ ಚರ್ಚೆ ನಡೆಸಿದೆ. ಇದರ ಫಲಶ್ರುತಿಯಾಗಿ ಕರ್ನಾಟಕವನ್ನು ***"ಗಮನ ಸೆಳೆವ ರಾಜ್ಯ"*** ಎಂದು ವಿಶ್ವಬ್ಯಾಂಕ್ ಪರಿಗಣಿಸಿದ್ದು, ಮುಂದಿನ ಐದು ವರ್ಷಗಳಲ್ಲಿ 12,000 ಕೋಟಿ ರೂಗಳನ್ನು ನೀಡುವ ದೃಢವಾದ ನಿಲುವನ್ನು ವ್ಯಕ್ತಪಡಿಸಿದೆ. ಈ ಹಣವನ್ನು ಜಲಾನಯನ ಅಭಿವೃದ್ಧಿ, ಕೃಷಿ, ನೀರಾವರಿ, ವಿದ್ಯುತ್, ರಸ್ತೆ, ಕುಡಿಯುವ ನೀರು ಪೂರೈಕೆ, ಪ್ರಾಥಮಿಕ ಶಿಕ್ಷಣ, ಪುರಸಭೆಗಳ ಸೇವೆ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಉಪಯೋಗಿಸಲಾಗುವುದು. ಪ್ರಸ್ತುತ ಈ ಯೋಜನೆಗಳು ಸಿದ್ದತೆಯ ಹಂತದಲ್ಲಿವೆ. ವಿಶ್ವ ಬ್ಯಾಂಕ್ ನೆರವಿನ ಹಣವು ಶೇಕಡಾ 70 ರಷ್ಟು ಸಾಲದ ರೂಪ ಮತ್ತು ಶೇಕಡಾ 30 ರಷ್ಟು ಕೊಡುಗೆಯ ರೂಪದಲ್ಲಿರುತ್ತದೆ. ಈ ಸಾಲದ ಹಣವನ್ನು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಶೇಕಡಾ 12 ರಷ್ಟು ಬಡ್ಡಿ ಆಧಾರದ ಮೇಲೆ ಮರುಪಾವತಿ ಮಾಡಬಹುದು. ಆರಂಭದ ಐದು ವರ್ಷಗಳು ಸಾಲ ಮರುಪಾವತಿಯಿಂದ ವಿನಾಯಿತಿ ಹೊಂದಿರುತ್ತವೆ. ವಿಶ್ವ ಬ್ಯಾಂಕ್‌ನ ಷರತ್ತುಗಳು ಬಹಳ ಉದಾರವಾಗಿದ್ದು ನಮ್ಮನ್ನು ಸಾಲದ ಸುಳಿಯಿಂದ ದೂರವಿಡುತ್ತವೆ.

18. ಎರಡನೆಯದಾಗಿ, ಹುಡ್ಕೋ ಸಂಸ್ಥೆಯ ಜೊತೆ ಈಗಾಗಲೇ ದೀರ್ಘ ಒಪ್ಪಂದವೊಂದಕ್ಕೆ ನಾವು ಸಹಿ ಹಾಕಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ ಹುಡ್ಕೋದವರು ವಸತಿ, ಕುಡಿಯುವ ನೀರು, ನೈರ್ಮಲ್ಯ ಮತ್ತು ರಸ್ತೆ ಅಭಿವೃದ್ಧಿಗೆ 1,580 ಕೋಟಿ ರೂ.ಗಳ ನೆರವನ್ನು ಒದಗಿಸಲಿದ್ದಾರೆ.

19. ಮೂರನೆಯದಾಗಿ, ಕಳೆದ ಫೆಬ್ರವರಿ 6 ರಂದು ಧಾರವಾಡದಲ್ಲಿ ಕೃಷಿ ಶೃಂಗಸಭೆ ನಡೆಯಿತು. ಇದಾದ ನಂತರ ನಾನು ಮತ್ತು ನನ್ನ ಕೆಲವು ಸಚಿವ ಸಹೋದ್ಯೋಗಿಗಳು ಗುಜರಾತ್ ರಾಜ್ಯದ ಆನಂದ್‌ಗೆ ಭೇಟಿ ನೀಡಿದ್ದೇವು. ಇದರ ಪರಿಣಾಮವಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು (ಎನ್‌ಡಿಡಿಬಿ) ರಾಜ್ಯದಲ್ಲಿ ಡೈರಿ ಅಭಿವೃದ್ಧಿ, ತೋಟಗಾರಿಕೆ, ಪಶುಸಂಗೋಪನೆ, ಸಾಮಾಜಿಕ ಅರಣ್ಯ, ಎಣ್ಣೆಬೀಜ, ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಅಭಿವೃದ್ಧಿಗಾಗಿ 505 ಕೋಟಿ ರೂ.ಗಳ ಬಂಡವಾಳವನ್ನು ಹೂಡಲು ಮುಂದೆ ಬಂದಿದೆ.

20. ನಾಲ್ಕನೆಯದಾಗಿ, ಜಪಾನ್ ಸರ್ಕಾರವು ರಾಜ್ಯದ ವಿವಿಧ ಯೋಜನೆಗಳಿಗೆ 3,600 ಕೋಟಿ ರೂ.ಗಳ ಹೂಡಿಕೆಗೆ ಒಪ್ಪಿದೆ. ಜಪಾನ್ ನೆರವಿನ ಕಾರ್ಯಕ್ರಮಗಳಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಕಾವೇರಿ ನಾಲ್ಕನೆ ಹಂತದ ಯೋಜನೆಯೂ ಸೇರಿದೆ.

21. ಐದನೆಯದಾಗಿ, ವಿದ್ಯುತ್ ಸುಧಾರಣೆಗಾಗಿ ಕೇಂದ್ರ ಸರ್ಕಾರದ ಜೊತೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿದ ಮೊದಲ ರಾಜ್ಯ- ಕರ್ನಾಟಕ. ಈ ಒಪ್ಪಂದದಿಂದ ರಾಜ್ಯದಲ್ಲಿನ ವಿದ್ಯುತ್ ಪ್ರಸರಣೆ ಮತ್ತು ವಿತರಣೆ ಕಾರ್ಯಕ್ರಮಗಳಿಗೆ 3,500 ಕೋಟಿ ರೂ.ಗಳ ಹೊಸ ಬಂಡವಾಳ ಮುಂದಿನ ಐದು ವರ್ಷಗಳಲ್ಲಿ ರಾಜ್ಯಕ್ಕೆ ಹರಿದು ಬರಲಿದೆ.

22. ಆರನೆಯದಾಗಿ, ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ಕಂಪನಿ (ಐಡಿಎಫ್‌ಸಿ) ಮತ್ತು ಐಸಿಐಸಿಐ ಕಂಪನಿಗಳ ಜೊತೆ ಕರ್ನಾಟಕವು ಉತ್ತಮ ಕಾರ್ಯಸಂಬಂಧ ಹೊಂದಿದೆ. ಈ ಎರಡು ಸಂಸ್ಥೆಗಳ ಸಹಕಾರದೊಂದಿಗೆ ಕೈಗೆತ್ತಿಕೊಳ್ಳಲಿರುವ ನಿರ್ದಿಷ್ಟ ಯೋಜನೆಗಳ ಬಗ್ಗೆ ನನ್ನ ಭಾಷಣದ ಮುಂದಿನ ಭಾಗದಲ್ಲಿ ಹೇಳುತ್ತೇನೆ. ನಬಾರ್ಡ್ ಮತ್ತು ಗ್ರಾಮೀಣ ವಿದ್ಯುತ್ ನಿಗಮಗಳ ಜೊತೆ ಕೂಡ ಸೂಕ್ತ ಒಪ್ಪಂದಕ್ಕಾಗಿ ನಾವು ಪ್ರಯತ್ನಿಸುತ್ತಿದ್ದೇವೆ.

23. ಮಾನ್ಯರೆ, ನಾನೀಗ ಪ್ರಮುಖ ವಲಯಗಳ ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪಿಸುವುದಕ್ಕೆ ಮುನ್ನ ಕೆಲವು ಅಂಶಗಳನ್ನು ನಿಮ್ಮ ಮುಂದಿಡಲು ಇಚ್ಛಿಸುತ್ತೇನೆ. ಕಾನೂನು ಮತ್ತು ಶಿಸ್ತುಪಾಲನೆ ಸರಿಯಾಗಿದ್ದಾಗ ಮಾತ್ರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧ್ಯ. ಕರ್ನಾಟಕವು ರಾಷ್ಟ್ರದಲ್ಲಿಯೆ ಅತ್ಯಂತ ಶಾಂತಿಪ್ರಿಯ ರಾಜ್ಯವೆನ್ನುವ ಖ್ಯಾತಿಗಳಿಸಿದೆ. ಇದು ಹೀಗೆಯೇ ಮುಂದುವರಿಯಲಿ ಎನ್ನುವುದು ನನ್ನ ಆಶಯ. ನಾವು ರಾಜ್ಯದಲ್ಲಿ ಎಲ್ಲ ರೀತಿಯ ಹಿಂಸಾಕೃತ್ಯಗಳನ್ನು ದಮನ ಮಾಡಿದ್ದೇವೆ ಹಾಗೂ ದಮನ ಮಾಡಲೂ ಸಿದ್ದರಿದ್ದೇವೆ. ನಾವು ಕರ್ನಾಟಕದಲ್ಲಿ ಗೂಂಡಾಗಳು ಮತ್ತು ಮಾಫಿಯಾಗಳು ತಲೆ ಎತ್ತಲು ಬಿಡುವುದಿಲ್ಲ. ಇದಕ್ಕಾಗಿ ವ್ಯವಸ್ಥಿತ ಅಪರಾಧಗಳನ್ನು ಹತ್ತಿಕ್ಕಲು ಕಾಯಿದೆಯೊಂದನ್ನು ಮಂಡಿಸಲು ನಾವು ಮುಂದಾಗಿದ್ದೇವೆ. ಕರ್ನಾಟಕದಲ್ಲಿ ವಾಸಿಸುವ ಎಲ್ಲ ಕನ್ನಡಿಗರ ಹಾಗೂ ಹೊರ ರಾಜ್ಯ ಮತ್ತು ಹೊರದೇಶಗಳಿಂದ ಬಂದು ಇಲ್ಲಿ ನೆಲಸಿರುವವರ ಜೀವ ಮತ್ತು ಆಸ್ತಿರಕ್ಷಣೆ ನಮ್ಮ ಪ್ರಥಮ ಹೊಣೆಗಾರಿಕೆಯಾಗಿದೆ.

ಮಹಿಳೆ

24. ಮಾನ್ಯರೆ, ಕಾಂಗ್ರೆಸ್ ಪಕ್ಷವು ಮಹಿಳೆಯರನ್ನು ಸಶಕ್ತಗೊಳಿಸುವುದರಲ್ಲಿ ಸದಾ ನಂಬಿಕೆಯಿಟ್ಟುಕೊಂಡು ಬಂದಿದೆ. ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮೂರನೆ ಒಂದು ಭಾಗದಷ್ಟು ಮೀಸಲಾತಿಯನ್ನು ಜಾರಿಗೊಳಿಸಿದ್ದು ಕಾಂಗ್ರೆಸ್ ಪಕ್ಷವೆ ಎನ್ನುವುದನ್ನು ಇಲ್ಲಿ ನಾನು ನಿಮಗೆ ನೆನಪು ಮಾಡಿಕೊಡುತ್ತೇನೆ. ಮಹಿಳೆಯರಿಗೆ ನ್ಯಾಯಬದ್ದ ಹಕ್ಕು, ಶಿಕ್ಷಣ, ಪೌಷ್ಟಿಕತೆ, ಆರ್ಥಿಕ ಹಾಗೂ ರಾಜಕೀಯ ಸಮಾನತೆ ನೀಡುವ ಬಗ್ಗೆ ನಾವು ಅಚಲವಾದ ಬದ್ಧತೆಯನ್ನು ಹೊಂದಿದ್ದೇವೆ.

25. ಈ ಸಂಕಲ್ಪದ ಪ್ರತೀಕವಾಗಿ ನಾನು ಸ್ವಸಹಾಯ ಗುಂಪು ಯೋಜನೆಯಡಿ ಮಹಿಳೆಯರಿಗೆ ಸಾಲ ಸೌಲಭ್ಯ ಒದಗಿಸುವ ***'ಸ್ತ್ರೀ ಶಕ್ತಿ'*** ಎನ್ನುವ ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇನೆ. ಯೋಜನೆಯ ಮೂದಲ ವರ್ಷದಲ್ಲಿ ನಾವು 1,00,000 ಮಹಿಳಾ ಸ್ವಸಹಾಯ ತಂಡಗಳಿಗೆ ಸಾಲ ಒದಗಿಸಲಿದ್ದೇವೆ. ಇದಕ್ಕಾಗಿ ಪ್ರಥಮ ವರ್ಷವೇ ಸುಮಾರು 50 ಕೋಟಿ ರೂ.ಗಳಿಗೂ

ಹೆಚ್ಚು ಹಣವನ್ನು ಆವರ್ತ ನಿಧಿಯನ್ನಾಗಿ ನೀಡಲಿದ್ದೇವೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ ಉನ್ನತ ಸಮಿತಿಯು ಈ ಯೋಜನೆಯ ವಿಶಾಲ ಮಾರ್ಗದರ್ಶಿ ಸೂತ್ರಗಳನ್ನು ಮಂಡಿಸಲಿದೆ. ಜಿಲ್ಲಾಧಿಕಾರಿಗಳ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಅಂಗನವಾಡಿ ಕಾರ್ಯಕರ್ತೆಯರು ಮೂಲತಃ ಈ ತಂಡಗಳ ಸಂಚಾಲಕರಾಗಿರುತ್ತಾರೆ. ಸ್ವಯಂ ಉದ್ಯೋಗ ಆಯುಕ್ತರು ರಾಜ್ಯಮಟ್ಟದಲ್ಲಿ ಈ ಯೋಜನೆಯ ಉಸ್ತುವಾರಿ ವಹಿಸುತ್ತಾರೆ. ಎಲ್ಲಾ ಸ್ವಸಹಾಯ ತಂಡದ ದಾಖಲೆಗಳನ್ನು ಕಂಪ್ಯೂಟರೀಕರಿಸಿ ಗ್ರಾಮೀಣ ಬ್ಯಾಂಕುಗಳ ಶಾಖೆಗಳಲ್ಲಿ ಸಂಗ್ರಹಿಸಿಡಲಾಗುವುದು.

26. ವಸತಿ, ನಿವೇಶನ ವಿತರಣೆ, ಕೊಳವೆ ಬಾವಿ ನಿರ್ಮಾಣಗಳಂತಹ ಸರಕಾರಿ ಯೋಜನೆಗಳಲ್ಲಿ ಮಹಿಳೆಯರನ್ನೇ ಮೊದಲ ಮಾಲೀಕರನ್ನಾಗಿ ಮಾಡಲಾಗುವುದು. ಆಶ್ರಯ, ಅಂಬೇಡ್ಕರ್, ಮತ್ತು ಇತರೆ ವಸತಿ ಯೋಜನೆಗಳಲ್ಲಿ ಮನೆಗಳನ್ನು ಮಹಿಳೆಯರ ಹೆಸರಿಗೇ ನೀಡಲಾಗುವುದು.

ಶಿಕ್ಷಣ

27. ***"ಬಾಲನೊಬ್ಬ ಕಲಿತರೆ ಅವನೊಬ್ಬ ಕಲಿತಂತೆ. ಬಾಲೆಯೊಬ್ಬಳು ಕಲಿತರೆ ಕುಟುಂಬವೆ ಕಲಿತಂತೆ"*** ಎನ್ನುವುದು ಅನುಭವದ ಮಾತು. ನಾವು ಈ ಮಾತಿನಲ್ಲಿ ಬರೀ ನಂಬಿಕೆಯನ್ನಷ್ಟೇ ಇಟ್ಟಿಲ್ಲ. ಕಾರ್ಯತಃ ಮಾಡಿ ತೋರಿಸಲು ಉದ್ದೇಶಿಸಿದ್ದೇವೆ. ಈ ನಿಟ್ಟಿನಲ್ಲಿ ನಾವು ಎಲ್ಲ ಹೆಣ್ಣುಮಕ್ಕಳಿಗೆ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಪಿಯುಸಿವರೆಗೆ ಉಚಿತ ಶಿಕ್ಷಣ ನೀಡಲಿದ್ದೇವೆ.

28. ರಾಜ್ಯದಲ್ಲಿ ಸುಮಾರು 11,000 ಅಪೂರ್ಣ ಶಾಲಾ ಕೊಠಡಿಗಳಿವೆ. ಇವುಗಳನ್ನು ಮಾರ್ಚ್ 2001ರ ಅಂತ್ಯದೊಳಗಾಗಿ ಪೂರ್ಣಗೊಳಿಸಲಾಗುವುದು ಇದಕ್ಕಾಗಿ 45 ಕೋಟಿ ರೂ.ಗಳನ್ನು ಹೊಂದಿಸಲಾಗುತ್ತಿದೆ.

29. ಸರ್ಕಾರಿ ಶಾಲೆಗಳಲ್ಲಿನ 1 ರಿಂದ 4 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ 5 ರಿಂದ 7ನೇ ತರಗತಿಯ ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ವಿತರಿಸುವ ಯೋಜನೆ ಜಾರಿಯಲ್ಲಿದೆ. ಈ ಯೋಜನೆಯನ್ನು ಏಳನೆ ತರಗತಿವರೆಗಿನ ಎಲ್ಲ ವಿದ್ಯರ್ಥಿಗಳಿಗೂ ವಿಸ್ತರಿಸಲಾಗುವುದು. ಇದರಿಂದ ಹೆಚ್ಚುವರಿಯಾಗಿ 16 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದ್ದು ಸರ್ಕಾರ ಇದಕ್ಕಾಗಿ ವಾರ್ಷಿಕ 5.3 ಕೋಟಿ ರೂಗಳನ್ನು ವೆಚ್ಚ ಮಾಡಲಿದೆ.

30. ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಸುಧಾರಿಸಲು ನನ್ನ ಸರ್ಕಾರ ಸಂಕಲ್ಪ ತೊಟ್ಟಿದೆ. ಇತರರು ಮಾಹಿತಿ ತಂತ್ರಜ್ಞಾನ ಶಿಕ್ಷಣದ ಬಗ್ಗೆ ಮಾತನಾಡುತ್ತಿರುವಾಗ ನಾವು ಮಾಹಿತಿ ತಂತ್ರಜ್ಞಾನ ಆಧಾರಿತ ಶಿಕ್ಷಣದ ಬಗ್ಗೆಯೂ ಗಮನಹರಿಸಿದ್ದೇವೆ. ಮಾಹಿತಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು 1000 ಶಾಲೆಗಳಲ್ಲಿ ಆರಂಭಿಸಲಾಗುವುದು.

31. ರಾಜ್ಯದಲ್ಲಿನ ಎಲ್ಲ 77 ಎಂಜಿನಿಯರಿಂಗ್ ಕಾಲೇಜುಗಳನ್ನು ಮುಂದಿನ ಹನ್ನೆರಡು ತಿಂಗಳಲ್ಲಿ ನೆಟ್‌ವರ್ಕ್‌ಗೆ ಅಳವಡಿಸಲಾಗುವುದು. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವು ಜಗತ್ತಿನಾದ್ಯಂತ

ಇರುವ ಖ್ಯಾತ ಶಿಕ್ಷಣ ಸಂಸ್ಥೆಗಳ ಒಕ್ಕೂಟಕ್ಕೆ ಸೇರಿ ಇಂಟರ್‌ನೆಟ್ ಮೂಲಕ ದೂರ ಶಿಕ್ಷಣವನ್ನು ನೀಡಲು ಕ್ರಮ ಕೈಗೊಳ್ಳುತ್ತಿದೆ.

32. ಸರ್ಕಾರ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಒದಗಿಸುತ್ತಿದೆ. ಈಗ ಬಹುಪಾಲು ಅನುದಾನಿತ ಸಂಸ್ಥೆಗಳು ಸದೃಢವಾಗಿದ್ದು ತಮ್ಮ ಸ್ವಂತ ಸಂಪನ್ಮೂಲಗಳನ್ನು ಸಂಗ್ರಹಿಸುವ ಶಕ್ತಿ ಹೊಂದಿವೆ. ಆದ್ದರಿಂದ ನಾನು ಉನ್ನತ ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇಕಡಾ 15 ರಷ್ಟುನ್ನು ಕಡಿತ ಮಾಡಲು ಉದ್ದೇಶಿಸಿದ್ದೇನೆ. ಆದರೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನೀಡುತ್ತಿರುವ ಅನುದಾನ ಎಂದಿನಂತೆಯೇ ಮುಂದುವರಿಯುತ್ತದೆ. ಈ ಕಡಿತದಿಂದ ಉಳಿತಾಯವಾಗುವ ಸಂಪನ್ಮೂಲವನ್ನು ರಾಜ್ಯದಲ್ಲಿ ಶೈಕ್ಷಣಿಕವಾಗಿ ವಂಚಿತವಾಗಿರುವ ಪ್ರದೇಶಗಳ ಪ್ರಾಥಮಿಕ ಶಿಕ್ಷಣದ ವಿಸ್ತರಣೆಗಾಗಿ ಬಳಸಿಕೊಳ್ಳಲಾಗುವುದು.

33. ಸರ್ಕಾರಿ ಕಾಲೇಜುಗಳಲ್ಲಿನ ಶಿಕ್ಷಣ ಶುಲ್ಕವನ್ನು ಹೆಚ್ಚಿಸಲೇ ಬೇಕಾಗಿರುವ ಅಗತ್ಯ ಈಗ ಕಂಡು ಬರುತ್ತಿದೆ. ಉದಾಹರಣೆಗೆ, ನಮ್ಮ ರಾಜ್ಯದಲ್ಲಿ ಬಿ.ಕಾಂ.ನ ಶಿಕ್ಷಣಶುಲ್ಕ ವಾರ್ಷಿಕ 180 ರೂ. ಗಳಾಗಿದ್ದರೆ, ಇದೇ ಶಿಕ್ಷಣಕ್ಕೆ ಮಹಾರಾಷ್ಟ್ರದಲ್ಲಿ 800 ರೂಗಳು ಮತ್ತು ಆಂಧ್ರ ಪ್ರದೇಶದಲ್ಲಿ 360 ರೂಗಳನ್ನು ನಿಗದಿ ಮಾಡಲಾಗಿದೆ. ಶಿಕ್ಷಣ ಶುಲ್ಕದ ಪರಿಸ್ಥಿತಿ ಹೀಗೆಯೇ ಹೆಚ್ಚು ದಿನ ಮುಂದುವರಿಯಲಾಗದು. ಶುಲ್ಕ ಪರಿಷ್ಕರಣೆಯ ನಂತರ ಅರ್ಹ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ನಿಲುಕದಂತಾಗಬಾರದು ಎನ್ನುವ ಕಾರಣದಿಂದ ಕಾಲೇಜು ಶಿಕ್ಷಣಕ್ಕೆ ಸಾಲ ನೀಡುವ ಯೋಜನೆಯನ್ನು ರೂಪಿಸಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಜೊತೆ ನಾನು ಮಾತುಕತೆ ಆರಂಭಿಸಿದ್ದೇನೆ.

ಆರೋಗ್ಯ

34. ರಾಜ್ಯದಲ್ಲಿ ಆರೋಗ್ಯ ಕಾರ್ಯಪಡೆಯನ್ನು (ಟಾಸ್ಕ್ ಫೋರ್ಸ್) ರಚಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. ರಾಜ್ಯದ ಆರೋಗ್ಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪುನರ್‌ರಚಿಸುವ ಬಗ್ಗೆ ಈ ಕಾರ್ಯಪಡೆಯು ಮುಂದಿನ ಮೂರು ತಿಂಗಳಿನೊಳಗೆ ಸಮಗ್ರ ವರದಿ ನೀಡಲಿದೆ. ಗ್ರಾಮೀಣ ಆರೋಗ್ಯ ರಕ್ಷಣೆಯ ಗುಣಮಟ್ಟ ಸುಧಾರಿಸಲು ತಕ್ಷಣವೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಮಿತಿಯು ಈಗಾಗಲೆ ಪ್ರಮುಖ ಸಲಹೆಗಳನ್ನು ನೀಡಿದೆ.

35. ಅನೈರ್ಮಲ್ಯ ವಿಧಾನದಲ್ಲಿ ಹೆರಿಗೆ ಮಾಡಿಸುವುದು ಹಳ್ಳಿಗಳಲ್ಲಿನ ಶಿಶುಮರಣ ಸಂಖ್ಯೆ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಆದ್ದರಿಂದ ಇದನ್ನು ತಡೆಗಟ್ಟಲು ನಾನು ಗ್ರಾಮೀಣ ಮಹಿಳೆಯರಿಗೆ ಸೋಂಕುರಹಿತ ಹೆರಿಗೆ ಕಿಟ್‌ಗಳನ್ನು ಉಚಿತವಾಗಿ ವಿತರಿಸುವ ***'ಸುರಕ್ಷ ಹೆರಿಗೆ'*** ಎನ್ನುವ ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದ್ದೇನೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಎಲ್ಲ ಮಿಡ್ ವೈಫ್‌ಗಳಿಗೆ ಈ ಹೆರಿಗೆ ಕಿಟ್‌ಗಳನ್ನು ಒದಗಿಸಲಾಗುವುದು. ಈ ಯೋಜನೆಗಾಗಿ ವಾರ್ಷಿಕ ಒಂದು ಕೋಟಿ ರೂ.ಗಳ ಸಹಾಯಧನವನ್ನು ನೀಡಲಾಗುತ್ತದೆ.

36. ಗ್ರಾಮೀಣ ಬಡ ಮಹಿಳೆಯರಿಗೆ ವೈಯಕ್ತಿಕ ಆರೋಗ್ಯ ಕಿಟ್‌ಗಳ ಅಗತ್ಯವಿದೆ. ನಮ್ಮ ಗ್ರಾಮೀಣ ಪ್ರದೇಶದ ಹಲವಾರು ಭಾಗಗಳಲ್ಲಿ ಮಹಿಳೆಯರು ಋತುಸ್ರಾವ ಸಮಯದಲ್ಲಿ ಅನೈರ್ಮಲ್ಯ ರೂಢಿಯಿಂದಾಗಿ ಯಾತನೆ ಅನುಭವಿಸುತ್ತಾರೆ. ಸೂಕ್ತ ಸೌಲಭ್ಯದ ಕೊರತೆಯಿಂದಾಗಿ ಅವರು ಸೋಂಕಿಗೆ ಒಳಗಾಗುವ ಸಂಭವವೇ ಹೆಚ್ಚು. ಇದನ್ನು ಸಾಮಾಜಿಕ ಪ್ರಜ್ಞೆಗೆ ಅಂಟಿದ ಕಳಂಕವೆಂದೇ ನಾನು ಭಾವಿಸುತ್ತೇನೆ. ಇದನ್ನು ನಿವಾರಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ವೈಯಕ್ತಿಕ ಆರೋಗ್ಯದ ಕಿಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಈ ಯೋಜನೆಗಾಗಿ 18 ಕೋಟಿ ರೂ.ಗಳ ವಾರ್ಷಿಕ ಸಹಾಯಧನವನ್ನು ನಿಗದಿಗೊಳಿಸಲಾಗಿದೆ.

37. ನಾವು ನೀಡುತ್ತಿರುವ ಈ ಎರಡು ಸಹಾಯಧನಗಳು ಸಾಮಾಜಿಕವಾಗಿ ಅಪೇಕ್ಷಿತವಾಗಿವೆ ಮತ್ತು ಸಮರ್ಥನೀಯವಾಗಿವೆ ಎಂಬುದು ನನ್ನ ಸರ್ಕಾರದ ನಂಬಿಕೆ.

38. ನಮ್ಮ ಸರ್ಕಾರವು ಆರಂಭಿಕವಾಗಿ 1000 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸುಧಾರಿಸಲು ಕ್ರಮ ಕೈಗೊಳ್ಳುತ್ತಿದೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳು; ಪ್ರಯೋಗಾಲಯ, ವೈದ್ಯಕೀಯ ಉಪಕರಣಗಳು ಮತ್ತು ಸಿಬ್ಬಂದಿಯಿಂದ ಸಜ್ಜುಗೊಂಡಿರುತ್ತವೆ. ಪ್ರಯೋಗಾಲಯ ತಂತ್ರಜ್ಞರ ಜಿಲ್ಲಾವಾರು ನೇಮಕಾತಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

39. ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನ ಮಾದರಿ ಎಂದು ವಿಶ್ವಬ್ಯಾಂಕ್ ಮೆಚ್ಚುಗೆ ವ್ಯಕ್ತಪಡಿಸಿದೆ. ಈ ವಿಷಯವನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಹರುಷವಾಗುತ್ತಿದೆ. ಈ ಯೋಜನೆಯಡಿ ಕನಿಷ್ಟ 100 ಸೆಕೆಂಡರಿ ಆಸ್ಪತ್ರೆಗಳನ್ನು ವರ್ಷಾಂತ್ಯದ ವೇಳೆಗೆ ಸಜ್ಜುಗೊಳಿಸಲಾಗುವುದು.

40. ಬೆಂಗಳೂರು ನಗರದ ಜೊತೆಗೆ ಮೈಸೂರು, ಹುಬ್ಬಳ್ಳಿ-ಧಾರವಾಡ, ರಾಯಚೂರು, ಗುಲ್ಬರ್ಗಾ, ಬೆಳಗಾವಿ, ಬಿಜಾಪುರ, ತುಮಕೂರು, ದಾವಣಗೆರೆ ಶಿವಮೊಗ್ಗ, ಭದ್ರಾವತಿ ಮತ್ತು ಬಳ್ಳಾರಿ ಈ 11 ನಗರಗಳಲ್ಲಿನ ಕೊಳಚೆ ಪ್ರದೇಶದ ನಿವಾಸಿಗಳಿಗೂ ಆರೋಗ್ಯ ರಕ್ಷಣೆ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ. ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆ -VII ರ ಅಡಿಯಲ್ಲಿ 26 ಕೋಟಿ ರೂ.ಗಳ ವೆಚ್ಚದಲ್ಲಿ ಈ ವರ್ಷ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು.

41. ರಾಜ್ಯದಲ್ಲಿ ತಲೆದೋರಬಹುದಾದ ಸಾಂಕ್ರಾಮಿಕ ರೋಗಗಳ ಉಸ್ತುವಾರಿ ವಹಿಸಲು ಆರೋಗ್ಯ ಮಾಹಿತಿ ವ್ಯವಸ್ಥೆಯನ್ನು ಮುಂದಿನ ಮೂರು ತಿಂಗಳೊಳಗಾಗಿ ಸಿದ್ಧಪಡಿಸಲಾಗುವುದು. ಈ ಯೋಜನೆಗೆ ಖಾಸಗಿ ವಲಯದ ನೆರವು ಅಗತ್ಯವಾಗಿದೆ. ಉತ್ತಮ ಉಸ್ತುವಾರಿಗಾಗಿ ಎಲ್ಲ ಜಿಲ್ಲಾ ಆಸ್ಪತ್ರೆಗಳನ್ನು ಬೆಂಗಳೂರಿನಲ್ಲಿರುವ ಆರೋಗ್ಯ ಸಚಿವಾಲಯದೊಡನೆ ಸಂಪರ್ಕ ಜಾಲಕ್ಕೆ ಒಳಪಡಿಸಲಾಗುವುದು. ಬೆಂಗಳೂರು ಮೂಲದ ಖಾಸಗಿ ಕಂಪನಿಯೊಂದು ಇದನ್ನು ಸಾರ್ವಜನಿಕ ಸೇವೆಯೆಂದು ಪರಿಗಣಿಸಿ ನೆರವು ನೀಡುತ್ತಿದೆ.

ಕೃಷಿ

42. ಕಳೆದ ಫೆಬ್ರವರಿಯಲ್ಲಿ ಧಾರವಾಡದಲ್ಲಿ ನಡೆದ ಕೃಷಿ ಶೃಂಗಸಭೆಯ ಬಗ್ಗೆ ನಾನು ಈ ಮುಂಚೆಯೆ ಹೇಳಿದ್ದೇನೆ. ರಾಷ್ಟ್ರದ ಹಲವಾರು ಪ್ರತಿಷ್ಠಿತ ತಜ್ಞರು ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯ ಫಲಶೃತಿಯಾಗಿ ರಾಜ್ಯದ ಕೃಷಿ ಅಭಿವೃದ್ಧಿಗಾಗಿ 'ಕೃಷಿ ಆಯೋಗ' ವನ್ನು ಸ್ಥಾಪಿಸಲಾಗುವುದು. ಇದು ರಾಜ್ಯದಲ್ಲಿರುವ ವಿವಿಧ ಕೃಷಿ- ಹವಾಮಾನ ವಲಯಗಳಲ್ಲಿನ ಬೆಳಗಳ ಸದ್ಯದ ಉತ್ಪಾದಕತೆ ಹಾಗೂ ಉತ್ಪಾದಕತಾ ಸಾಮರ್ಥ್ಯದ ನಡುವೆ ಇರುವ ಕಂದಕವನ್ನು ನಿವಾರಿಸಲು ಕಾರ್ಯತಂತ್ರವನ್ನು ರೂಪಿಸಲಿದೆ.

43. ನಾವು ಈಗಾಗಲೇ ಬಹುಶಿಸ್ತು (ಮಲ್ಟಿ ಡಿಸಿಪ್ಲಿನರಿ) ಜಲಾನಯನ ಅಭಿವೃದ್ಧಿ ನಿರ್ದೇಶನಾ-ಲಯವನ್ನು ಸ್ಥಾಪಿಸಿದ್ದೇವೆ. ಇದು ರಾಜ್ಯದ ಒಣಭೂಮಿ ಪ್ರದೇಶದ ಜಲಾನಯನ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಿದೆ. ರಾಜಸ್ಥಾನವನ್ನು ಬಿಟ್ಟರೆ ಕರ್ನಾಟಕವು ರಾಷ್ಟ್ರದಲ್ಲಿ ಹೆಚ್ಚು ಒಣಭೂಮಿ ಪ್ರದೇಶವನ್ನು ಹೊಂದಿರುವ ಎರಡನೆ ರಾಜ್ಯವಾಗಿದೆ. ಆದ್ದರಿಂದ ನನ್ನ ಸರ್ಕಾರವು ಜಲಾನಯನ ಆಧರಿಸಿದ ಯೋಜನೆಗಳಿಗೆ ಅಗ್ರ ಪ್ರಾಶಸ್ತ್ಯವನ್ನು ನೀಡುತ್ತದೆ. ಈ ಕ್ಷೇತ್ರದಲ್ಲಿ ಹಿಂದೊಮ್ಮೆ ಮಾರ್ಗದರ್ಶಿ ರಾಜ್ಯವೆಂದು ಹೆಸರಾಗಿದ್ದ ಕರ್ನಾಟಕದ ಖ್ಯಾತಿ ಈಗ ದುರಾದೃಷ್ಟವಶಾತ್ ಸ್ಥಗಿತಗೊಂಡಿದೆ.

44. ಕೇಂದ್ರ ಸರ್ಕಾರವು ರೂಪಿಸಿರುವ ರಾಷ್ಟ್ರೀಯ ಕೃಷಿ ವಿಮೆ ಯೋಜನೆಯಲ್ಲಿ ಪಾಲ್ಗೊಳ್ಳಲು ನಾವು ನಿರ್ಧರಿಸಿದ್ದೇವೆ. ಸಾಲಗಾರ ಮತ್ತು ಸಾಲಗಾರರಲ್ಲದ ರೈತ ಸಮುದಾಯವನ್ನು ಹಾಗೂ ಹೆಚ್ಚು ಬೆಳೆಗಳನ್ನು ಈ ಯೋಜನೆಯು ಒಳಗೊಳ್ಳುತ್ತದೆ. ಕೇಂದ್ರ ಸರ್ಕಾರವು ಈ ಯೋಜನೆಯನ್ನು ರೂಪಿಸಿರುವ ವಿಧಾನ ನಮಗೆ ಒಪ್ಪಿಗೆಯಾಗುತ್ತಿಲ್ಲ. ಆದರೂ ರಾಜ್ಯದ ರೈತರ ಹಿತದೃಷ್ಟಿಯಿಂದ ನಾವು ಇದರಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಈ ಯೋಜನೆಗೆ ಆರಂಭಿಕ ಮೊತ್ತವಾಗಿ ನಾನು ಈ ವರ್ಷ 100 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ. ಕಳೆದ ವರ್ಷ ಬೆಳೆ ವಿಮೆ ಯೋಜನೆಗೆ ರಾಜ್ಯವು ವೆಚ್ಚ ಮಾಡಿದ್ದ 6 ಕೋಟಿ ರೂಪಾಯಿಗಳಿಗೆ ಹೋಲಿಸಿದರೆ ನಮ್ಮ ಈ ಸಾಧನೆ ಎದ್ದು ಕಾಣುತ್ತದೆ.

45. ರಾಜ್ಯದ ಎಲ್ಲ 745 ಹೋಬಳಿ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸುವ **'ರೈತ ಮಿತ್ರ'** ನೂತನ ಯೋಜನೆಯನ್ನು ನಾವು ಆರಂಭಿಸಲಿದ್ದೇವೆ. ಈ ಕೇಂದ್ರಗಳು ರೈತರ ಮನೆ ಬಾಗಿಲಿಗೆ ಕೃಷಿಗೆ ಸಂಬಂಧಿಸಿದ ವೈಜ್ಞಾನಿಕ ತಾಂತ್ರಿಕ ಸಲಹೆಗಳನ್ನು ತಲುಪಿಸುತ್ತವೆ.

46. ಖಾಸಗಿ ವಲಯದ ಸಹಕಾರದೊಡನೆ ರಾಜ್ಯದಲ್ಲಿ 100 ಶೈತ್ಯಾಗಾರಗಳ ಜಾಲವನ್ನು ಸ್ಥಾಪಿಸಲಾಗುತ್ತಿದ್ದು ಇದು ತೋಟಗಾರಿಕೆ ಅಭಿವೃದ್ಧಿಗೆ ಹೊಸ ಚೈತನ್ಯ ನೀಡಲಿದೆ. ಹಾಲಿ ಇರುವ ಮತ್ತು ಉದ್ದೇಶಿತ ಶೈತ್ಯಾಗಾರಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಒದಗಿಸಲಾಗುವುದು. ಈಗ ಶೈತ್ಯಾಗಾರಗಳಿಗೆ ವಾಣಿಜ್ಯ ದರದಲ್ಲಿ ವಿದ್ಯುತ್ ಶುಲ್ಕ ವಿಧಿಸುತ್ತಿದ್ದು ಇನ್ನು ಮುಂದೆ ಕೈಗಾರಿಕಾ ದರದಲ್ಲಿ ಶುಲ್ಕ ನಿಗದಿಗೊಳಿಸಲಾಗುವುದು. ಇದರ ಜೊತೆಗೆ ಸರ್ಕಾರವು ಕಿಲೋವ್ಯಾಟ್‌ಗೆ 1 ರೂ.ಗಳ ಸಹಾಯಧನವನ್ನು ನೀಡಲಿದೆ. ಈ ಸಂಬಂಧ ರೂಪಿಸಲಾಗುತ್ತಿರುವ ನೀತಿ ಮುಂದಿನ ಐದು ವರ್ಷಗಳ ಕಾಲ ಜಾರಿಯಲ್ಲಿರುತ್ತದೆ.

47. ರಾಜ್ಯದಲ್ಲಿನ ಬಂಜರು ಭೂಮಿ ಅಭಿವೃದ್ಧಿ ಮತ್ತು ಕೃಷಿ ವಾಣಿಜ್ಯ ಚಟುವಟಿಕೆಗಳಿಗೆ ಖಾಸಗಿ ಬಂಡವಾಳವನ್ನು ಆಕರ್ಷಿಸಲು ನಾನು ಹೊಸ ನೀತಿಯೊಂದನ್ನು ರೂಪಿಸಲು ಉದ್ದೇಶಿಸಿದ್ದೇನೆ. ಸ್ಥಳೀಯ ಜನಸಮುದಾಯವನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಕಾರ್ಯ ನಿರ್ವಹಿಸಲಿರುವ ಈ ನೀತಿಯ ವಿವರಗಳನ್ನು ಮುಂದಿನ 60 ದಿನಗಳಲ್ಲಿ ಘೋಷಿಸಲಾಗುವುದು.

48. ರಾಜ್ಯ ಸರ್ಕಾರಿ ಒಡೆತನದಲ್ಲಿ 415 ತೋಟಗಾರಿಕೆ ಕ್ಷೇತ್ರಗಳಿದ್ದು ಇವುಗಳಿಂದ ತೀರಾ ಅಲ್ಪ ಆದಾಯ ಬರುತ್ತಿದೆ. ಇವುಗಳ ಉತ್ಪಾದಕತೆಯನ್ನು ಹೆಚ್ಚಿಸಿ ಮಾದರಿ ಉತ್ಪಾದನಾ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಯೋಜಿಸಿದೆ. ಕೆಲ ತೋಟಗಾರಿಕಾ ಕ್ಷೇತ್ರಗಳನ್ನು ಖಾಸಗೀಕರಣ ಮಾಡಲಾಗುವುದು.

49. ಕೃಷಿ ಚಟುವಟಿಕೆಗಳಿಗಾಗಿ ಸಹಕಾರಿ ಸಂಸ್ಥೆಗಳು ನೀಡುತ್ತಿರುವ ಸಾಲದ ಮೊತ್ತ ಈಗ ಸುಮಾರು 1,010 ಕೋಟಿ ರೂಗಳಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಮೊತ್ತವನ್ನು ದುಪ್ಪಟ್ಟುಗೊಳಿಸಲಾಗುವುದು. ಸಣ್ಣ ಮತ್ತು ಅತಿಸಣ್ಣ ರೈತರನ್ನು ಈ ಸಾಲ ಸೌಲಭ್ಯದ ವ್ಯಾಪ್ತಿಗೆ ತರುವುದು ನನ್ನ ವಿಶೇಷ ಗುರಿಯಾಗಿದೆ. ಸಹಕಾರಿ ಸಂಘಗಳನ್ನು ಸದೃಢಗೊಳಿಸುವ ಭಾರತೀಯ ರಿಸರ್ವ್ ಬ್ಯಾಂಕ್‌ನ ನೂತನ ಯೋಜನೆಯನ್ನು ಇದಕ್ಕಾಗಿ ಬಳಸಿಕೊಳ್ಳಲಾಗುವುದು. ನಬಾರ್ಡ್ ಸಂಸ್ಥೆಯ ಪುನರ್ ಸಾಲ ಸೌಲಭ್ಯದ ಮೇಲಿನ ಬಡ್ಡಿಯ ದರವನ್ನು ಹೆಚ್ಚಿಸಿದೆ. ಈ ಹೆಚ್ಚುವರಿ ಬಡ್ಡಿಯ ಹೊರೆಯು 15 ಕೋಟಿ ರೂ.ಗಳಾಗಿದ್ದು ಇದನ್ನು ಸಹಕಾರಿ ಸಂಸ್ಥೆಗಳೆ ಭರಿಸಲಿವೆ.

50. ಮಾನ್ಯರೆ, ತೆಂಗಿನ ಬೆಳೆಗೆ ತಗುಲಿರುವ ನುಸಿಕೀಟ ವ್ಯಾಪಕವಾಗಿ ಹರುಡುತ್ತಿರುವ ಬಗ್ಗೆ ಸದನದಲ್ಲಿ ಸಾಕಷ್ಟು ಕಾಳಜಿ ವ್ಯಕ್ತವಾಗಿದೆ. ಮಾನ್ಯ ಸದಸ್ಯರುಗಳ ಈ ಕಳಕಳಿಯಲ್ಲಿ ನಾನೂ ಭಾಗಿಯಾಗಿದ್ದೇನೆ. ಈ ರೋಗ ನಿಯಂತ್ರಣಕ್ಕಾಗಿ ರಾಷ್ಟ್ರದಲ್ಲಿ ಲಭ್ಯವಿರುವ ಅತ್ಯುತ್ತಮ ತಾಂತ್ರಿಕ ಪರಿಣಿತಿಯ ನೆರವನ್ನು ಪಡೆಯಲು ಭಾರತೀಯ ಕೃಷಿ ಸಂಶೋಧನಾ ಒಕ್ಕೂಟದ ಮೂಲಕ ಪ್ರಯತ್ನ ನಡೆಸಿದ್ದೇವೆ. ಇದಕ್ಕೆ ಅಗತ್ಯವಿರುವ ಹಣವನ್ನು ಒದಗಿಸಲಾಗುವುದು.

51. ರೈತರಿಗೆ ಒದಗಿಸಿರುವ ರಿಯಾಯಿತಿಗಳ ಬಗ್ಗೆ ನಾನು ಮುಂಗಡ ಪತ್ರದ ಭಾಗ 2 ರಲ್ಲಿ ಮತ್ತಷ್ಟು ಘೋಷಣೆಗಳನ್ನು ಮಾಡಲಿದ್ದೇನೆ. ಕರ್ನಾಟಕದ ರೈತ ಸಮುದಾಯದ ಬಗ್ಗೆ ನಮಗಿರುವ ಕಾಳಜಿಗೆ ಇದು ಸಾಕ್ಷಿಯಾಗಿದೆ.

ನೀರಾವರಿ

52. ಈ ವರ್ಷ ನಾವು ರಾಜ್ಯದಲ್ಲಿ ಹೆಚ್ಚುವರಿಯಾಗಿ 2 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸುತ್ತಿದ್ದೇವೆ. ಇದರಲ್ಲಿ ಒಂದು ಲಕ್ಷ ಹೆಕ್ಟೇರ್ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿದ್ದರೆ ಇನ್ನೊಂದು ಲಕ್ಷ ಹೆಕ್ಟೇರ್ ಇತರೆ ಯೋಜನೆಗಳಲ್ಲಿದೆ. ಈ ವರ್ಷ ನಾವು ಕೃಷ್ಣಾ ಮೇಲ್ದಂಡೆ, ಮಲಪ್ರಭಾ, ಹಿರೇಹಳ್ಳ, ಕಾರಂಜಾ ಯೋಜನೆಗಳಿಗೆ ಕೇಂದ್ರದ ನೆರವಿನಲ್ಲಿ ಗಣನೀಯ ಪ್ರಮಾಣದ ಹೆಚ್ಚಳವನ್ನು ನಿರೀಕ್ಷಿಸುತ್ತಿದ್ದೇವೆ.

53. ನಬಾರ್ಡ್ ನೆರವಿನ ವಾಟೆಹೊಳೆ ಮತ್ತು ಮಂಚನಬೆಲೆ ನೀರಾವರಿ ಯೋಜನೆಗಳನ್ನು ಈ ತಿಂಗಳು ಪೂರ್ಣಗೊಳಿಸಿದ್ದೇವೆ. ಬೆಣ್ಣೆತೊರೆ, ತಾರಕಾ, ಚುಲ್ಕಿನಾಲಾ, ಕೆಳಮುಲ್ಲಾಮರಿ, ಅಮರ್ಜಾ, ದೇವರಾಜ ಅರಸು ನಾಲಾ (ವರುಣಾ ನಾಲೆ) ಮತ್ತು ಮಸ್ಕಿನಾಲಾ ಯೋಜನೆಗಳು ಮಾರ್ಚ್ 2001ರ ವೇಳೆಗೆ ಕಾರ್ಯಾರಂಭ ಮಾಡಲಿವೆ.

54. ನೀರಾವರಿ ಯೋಜನೆಗಳ ಸಂಪೂರ್ಣ ಸದುಪಯೋಗ ಪಡೆಯಲು ಎಲ್ಲ ರೈತರ ಸಕ್ರಿಯ ಸಹಕಾರ ಅಗತ್ಯವಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ನೀರಾವರಿ ಬಳಕೆದಾರರ ಸಹಕಾರ ಸಂಘಗಳಿಗೆ ಹೆಚ್ಚಿನ ಶಕ್ತಿ ನೀಡಲು ಮಸೂದೆಯೊಂದನ್ನು ನಾನು ಮಂಡಿಸಲಿದ್ದೇನೆ. ಈ ಮಸೂದೆಯು ನೀರಾವರಿ ವಸೂಲಿ ಮಾಡುವ ಅಧಿಕಾರವನ್ನು ಸಂಘಗಳಿಗೆ ನೀಡುತ್ತದೆ ಹಾಗೂ ತಮ್ಮ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದ ಉಸ್ತುವಾರಿ ಮತ್ತು ನಿರ್ವಹಣೆಯಲ್ಲಿ ಬಳಕೆದಾರರನ್ನು ತೊಡಗಿಸಿಕೊಳ್ಳಲು ನೆರವು ನೀಡುತ್ತದೆ.

55. ಕಳೆದ ಹದಿನೈದು ವರ್ಷಗಳಲ್ಲಿ ನೀರಾವರಿ ದರಗಳನ್ನು ಹೆಚ್ಚಿಸಿಯೇ ಇಲ್ಲ. ನಮ್ಮ ನೀರಾವರಿ ಯೋಜನೆಗಳ ನಿರ್ವಹಣಾ ಗುಣಮಟ್ಟ ಕಡಿಮೆಯಾಗಲು ಇದು ಮುಖ್ಯ ಕಾರಣವಾಗಿದೆ. ವಿಶ್ವಾಸಾರ್ಹ, ಸಕಾಲಿಕ ಮತ್ತು ಸಮರ್ಪಕ ನೀರಿನ ಸೌಲಭ್ಯವನ್ನು ಒದಗಿಸಿದರೆ ನಮ್ಮ ರೈತರು ಹೆಚ್ಚು ತೆರಿಗೆ ನೀಡುತ್ತಾರೆ ಎಂದು ನಾನು ನಂಬಿದ್ದೇನೆ. ಈ ಸಮಸ್ಯೆಯ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳುವ ಮುನ್ನ ಒಮ್ಮತ ಮೂಡಿಸಲಾಗುವುದು.

ಸಣ್ಣ ನೀರಾವರಿ

56. ನಮ್ಮ ಕೆರೆಗಳು ನೂರಾರು ವರ್ಷಗಳಿಂದ ರೈತರಿಗೆ ನೀರಾವರಿ ಸೌಲಭ್ಯದ ಜೊತೆಗೆ ಉದ್ಯೋಗವಕಾಶಗಳನ್ನು ಒದಗಿಸುತ್ತಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಇಂತಹ 50,000 ಕ್ಕೂ ಹೆಚ್ಚು ಕೆರೆಗಳು ನಮ್ಮಲ್ಲಿವೆ. ಆದರೆ ದುರುದೃಷ್ಟವಶಾತ್ ಅಸಮರ್ಪಕ ನಿರ್ವಹಣೆಗಳಿಂದಾಗಿ ಈ ಕೆರೆಗಳಲ್ಲಿ ಹೂಳು ತುಂಬಿಕೊಂಡಿದ್ದು ಇವು ನಿರುಪಯುಕ್ತವಾಗಿವೆ. ವಿಶ್ವಬ್ಯಾಂಕ್ ನೆರವಿನಿಂದ, ಬಡತನ ನಿರ್ಮೂಲನಾ ಕಾರ್ಯಕ್ರಮದ ಭಾಗವಾಗಿ *"ಜಲ ಸಂವರ್ಧನ"* ಎನ್ನುವ ಯೋಜನೆಯನ್ನು ರೂಪಿಸಲಾಗಿದೆ. ಆರಂಭಿಕವಾಗಿ ಈ ಯೋಜನೆಯಡಿ 25,000 ಕೆರೆಗಳ ಹೂಳು ತೆಗೆದು ಮುಂದಿನ ಐದು ವರ್ಷಗಳಲ್ಲಿ ಪುನರುಜ್ಜೀವನಗೊಳಿಸಲಾಗುವುದು.

57. ರಾಜ್ಯದ ಪಶ್ಚಿಮ ಕರಾವಳಿಯಲ್ಲಿನ ಕಡಲು ಕೊರೆತವನ್ನು ತಡೆಗಟ್ಟಲು ಸಮಗ್ರ ಯೋಜನೆಯೊಂದನ್ನು ಸಿದ್ಧಪಡಿಸಲಾಗುತ್ತಿದ್ದು ಈ ಯೋಜನೆಗೆ ಭಾರತ ಸರ್ಕಾರದ ನೆರವನ್ನು ಕೋರಲಾಗುತ್ತಿದೆ.

ಸಹಕಾರ

58. ರಾಜ್ಯಮಟ್ಟದ ಸಹಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ / ಪಂಗಡದ ಸದಸ್ಯರುಗಳ ನೋಂದಣಿಗೆ

ನೆರವು ನೀಡುತ್ತಿದ್ದ ಯೋಜನೆಯು ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿತ್ತು. ಈ ಯೋಜನೆಯನ್ನು ನಾವು ತಕ್ಷಣದಿಂದಲೆ ಪುನಶ್ಚೇತನಗೊಳಿಸಿ ಅಲ್ಪಸಂಖ್ಯಾತ ಜನಸಮುದಾಯಕ್ಕೂ ಅನ್ವಯಿಸುವಂತೆ ಇದನ್ನು ವಿಸ್ತರಿಸುತ್ತಿದ್ದೇವೆ.

59. ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಈರುಳ್ಳಿ ಮತ್ತು ಆಲೂಗೆಡ್ಡೆ ಬೆಳೆಗಾರರಿಗೆ ನೆರವು ನೀಡಲು ಸರ್ಕಾರವು ಕಳೆದ ಮೂರು ತಿಂಗಳಿನಿಂದ ಮಾರುಕಟ್ಟೆ ಪ್ರವೇಶಿಸಿ ಉತ್ತಮದರ್ಜೆಯ ಈರುಳ್ಳಿಯನ್ನು ಕ್ವಿಂಟಾಲ್‌ಗೆ 300 ರೂಗಳಂತೆ ಖರೀದಿಸುತ್ತಿದೆ.

ವಸತಿ

60. ಸಮಾಜದ ದುರ್ಬಲ ವರ್ಗದವರಿಗೆ ವಸತಿ ಸೌಲಭ್ಯ ಕಲ್ಪಿಸಲು ನಮ್ಮ ಸರ್ಕಾರ ಅಗ್ರ ಪ್ರಾಶಸ್ತ್ಯ ನೀಡಿದೆ. ಸಾಮಾಜಿಕ ವಸತಿಗಾಗಿ ಅಗತ್ಯ ಸಂಪನ್ಮೂಲ ಸಂಗ್ರಹಿಸಲು ನಾವು ***'ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ'*** ವನ್ನು ಸ್ಥಾಪಿಸುತ್ತಿದ್ದೇವೆ. ಈ ನಿಗಮದ ಮೂಲಕ ಆಶ್ರಯ, ಅಂಬೇಡ್ಕರ್, ಯೋಜನೆಯಡಿ ಮುಂದಿನ ಹನ್ನೆರಡು ತಿಂಗಳಲ್ಲಿ ನಾವು 2 ಲಕ್ಷ ಮನೆಗಳನ್ನು ನಿರ್ಮಿಸಲಿದ್ದೇವೆ. ಇಂದಿರಾ ಆವಾಸ್ ಯೋಜನೆಯನ್ನು ಜಿಲ್ಲಾ ಪಂಚಾಯತ್ ಮುಂದುವರಿಸುತ್ತದೆ.

61. ಕರ್ನಾಟಕ ಗೃಹ ಮಂಡಳಿಯನ್ನು ಸಂಪೂರ್ಣವಾಗಿ ಬದಲಾಯಿಸಿ ಪುನರ್‌ರಚಿಸಲಾಗುವುದು. ಇನ್ನು ಮುಂದೆ ಮಂಡಳಿಯು ಮಧ್ಯಮ ಹಾಗೂ ಕೆಳವರ್ಗದ ಆದಾಯದವರಿಗೆ ವಸತಿ ಕಲ್ಪಿಸಲು ತನ್ನ ಗಮನ ಕೇಂದ್ರೀಕರಿಸಲಿದೆ. ಗೃಹಮಂಡಳಿಯು ಖಾಸಗಿ ವಲಯದ ಸಂಸ್ಥೆಗಳ ಜೊತೆ ಜಂಟಿ ಉದ್ಯಮದಲ್ಲಿ ಪಾಲ್ಗೊಳ್ಳಲಿದ್ದು ಮಂಡಳಿಯ ಜಮೀನನ್ನು ಈಕ್ವಿಟಿಯನ್ನಾಗಿ ಬಳಸಿಕೊಳ್ಳಲಾಗುವುದು.

62. ಕೊಳೆಗೇರಿಗಳ ಪುನರ್‌ವಸತಿ ಹಾಗೂ ಅಲ್ಲಿನ ಜೀವನ ಮಟ್ಟವನ್ನು ನಾವು ಸುಧಾರಿಸಬೇಕಿದೆ. ಈ ವರ್ಷ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ನಿಧಿಗೆ 'ಹುಡ್ಕೊ' ಸಂಸ್ಥೆಯ ನೆರವಿನ ಮೂಲಕ ಹೆಚ್ಚುವರಿಯಾಗಿ 24 ಕೋಟಿ ರೂಗಳನ್ನು ಒದಗಿಸಲಾಗುವುದು.

ಕುಡಿಯುವ ನೀರು

63. ನಮ್ಮ ಸರ್ಕಾರವು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಪೂರೈಕೆಯ ಮಾನದಂಡವನ್ನು ಮುಂದಿನ ಮೂರು ವರ್ಷಗಳಲ್ಲಿ ಪ್ರತಿವ್ಯಕ್ತಿಗೆ ದಿನವೊಂದಕ್ಕೆ 55 ಲೀಟರುಗಳಿಗೆ ಹೆಚ್ಚಿಸಬೇಕೆಂದು ಸಂಕಲ್ಪ ತೊಟ್ಟಿದೆ. ಹುಡ್ಕೊ ಮತ್ತು ವಿಶ್ವಬ್ಯಾಂಕ್ ನೆರವಿನಿಂದ ನಾವು ನಮ್ಮ ಸಂಪನ್ಮೂಲವನ್ನು ವೃದ್ಧಿಸಿಕೊಳ್ಳಲಿದ್ದೇವೆ. ರಾಜ್ಯದ 16 ಜಿಲ್ಲೆಗಳ 1,110 ಹಳ್ಳಿಗಳನ್ನು ಒಳಗೊಳ್ಳುವ ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯು ಸೆಪ್ಟೆಂಬರ್ 2000ದ ವೇಳೆಗೆ ಪೂರ್ಣಗೊಳ್ಳಲಿದೆ. ಧಾರವಾಡ, ಗದಗ, ಹಾವೇರಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯ 200 ಸಮಸ್ಯಾತ್ಮಕ ಗ್ರಾಮಗಳಲ್ಲಿ ಕೈಗೆತ್ತಿಕೊಂಡಿರುವ ಡಚ್ ನೆರವಿನ ಯೋಜನೆಯು ಇನ್ನು ಕೆಲವೇ ದಿನಗಳಲ್ಲಿ ಪೂರ್ಣವಾಗಲಿದೆ.

64. ಕುಡಿಯುವ ನೀರು ಪೂರೈಕೆ ಮತ್ತು ನೈರ್ಮಲ್ಯಕ್ಕಾಗಿ ರಚಿಸಿರುವ ತಾಂತ್ರಿಕ ನಿಯೋಗವು ಈಗಾಗಲೆ ಅಸ್ತಿತ್ವದಲ್ಲಿದೆ. ಇದು ಕುಡಿಯುವ ನೀರು ಪೂರೈಕೆ ಯೋಜನೆಗಳಿಗೆ ಹೊಸ ಪ್ರೋತ್ಸಾಹ ನೀಡುವುದರ ಜೊತೆಗೆ ಅಂತರ್ಜಲದಲ್ಲಿರುವ ಉಪ್ಪು ನೀರು ಮತ್ತು ಅಧಿಕ ಕ್ಲೋರೈಡ್‌ಯುಕ್ತ ನೀರಿನ ತೊಂದರೆ ನಿವಾರಣೆಗೆ ಕೂಡ ವೇಗವರ್ಧಕವಾಗಿ ಕಾರ್ಯ ನಿರ್ವಹಿಸಲಿದೆ.

65. ರಾಜ್ಯದ 47 ಸಣ್ಣ ಮತ್ತು ಮಧ್ಯಮ ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುವ 321 ಕೋಟಿ ರೂ.ಗಳ ಅಂದಾಜು ವೆಚ್ಚದ ಕ್ರಿಯಾ ಯೋಜನೆ ಸಿದ್ದವಾಗಿದೆ. ಹುಡ್ಕೊ ಸಂಸ್ಥೆಯ ನೆರವಿನ ಈ ಯೋಜನೆಯನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

66. ಹಳ್ಳಿಗಳ ಸಂಪೂರ್ಣ ನೈರ್ಮಲ್ಯಕ್ಕೆ ಒತ್ತು ನೀಡುವ *"ಸ್ವಚ್ಛ ಗ್ರಾಮ"* ಯೋಜನೆಯನ್ನು ನಾನು ಜಾರಿಗೊಳಿಸುತ್ತಿದ್ದೇನೆ. ಇದರಲ್ಲಿ ಹಳ್ಳಿಗಳ ಒಳರಸ್ತೆ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಸಮುದಾಯ ಗೊಬ್ಬರ ಗುಂಡಿಗಳ ನಿರ್ಮಾಣ, ಹಾಗೂ ಕುಟುಂಬ ಶೌಚಾಲಯಗಳು ಸೇರಿವೆ. ಈ ಯೋಜನೆಗೆ ಮುಂಗಡಪತ್ರದಲ್ಲಿ 20 ಕೋಟಿ ರೂಗಳ ಅನುದಾನವನ್ನು ನಿಗದಿಗೊಳಿಸಿದ್ದು 'ಹುಡ್ಕೊ' ಸಂಸ್ಥೆಯ ವಸತಿಯಿಂದ 160 ಕೋಟಿ ರೂಗಳ ಸಾಲದ ನೆರವು ಇದಕ್ಕೆ ಲಭ್ಯವಾಗಲಿದೆ. ಯೋಜನೆಯ ಆರಂಭಿಕ ವರ್ಷದಲ್ಲಿ 1000 ಗ್ರಾಮಗಳನ್ನು ಒಲಪಡಿಸಲಾಗುವುದು.

ಪಂಚಾಯತ್

67. ಗ್ರಾಮಪಂಚಾಯತಿಗಳಿಗೆ ನೀಡುತ್ತಿರುವ ವಾರ್ಷಿಕ ಅನುದಾನವನ್ನು ಒಂದು ಲಕ್ಷ ರೂಗಳಿಂದ ಎರಡು ಲಕ್ಷ ರೂಗಳಿಗೆ ಹೆಚ್ಚಿಸುವುದಾಗಿ ನಾನು ಈಗಾಗಲೆ ಘೋಷಿಸಿದ್ದೆ. ಈ ಮಾತಿಗೆ ಅನುಗುಣವಾಗಿ ಹೆಚ್ಚಿಸಿರುವ ಈ ವಾರ್ಷಿಕ ಅನುದಾನದ ಮೊದಲ ಕಂತನ್ನು ರಾಜ್ಯದ ಎಲ್ಲ 5675 ಗ್ರಾಮ ಪಂಚಾಯತಿಗಳಿಗೆ ಈಗಾಗಲೆ ಬಿಡುಗಡೆ ಮಾಡಲಾಗಿದೆ. ನಾವು ಜನತೆಗೆ ನೀಡಿದ್ದ ಭರವಸೆಯನ್ನು ಈಡೇರಿಸಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಲು ನನಗೆ ಸಂತಸವೆನಿಸುತ್ತದೆ.

68. ಮೈಸೂರಿನಲ್ಲಿರುವ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಸುಮಾರು 80,000 ಮಂದಿ ಪಂಚಾಯತ್ ಸದಸ್ಯರಿಗೆ ಪಂಚಾಯತ್ ವ್ಯವಸ್ಥೆಯ ಬಗ್ಗೆ ತಿಳಿವಳಿಕೆ ಮೂಡಿಸುವ ಮಾರ್ಗದರ್ಶಿ ಶಿಕ್ಷಣ ಶಿಬಿರಗಳನ್ನು ಸಂಘಟಿಸುವ ಬೃಹತ್ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಈ ಶಿಬರಗಳನ್ನು ಡಿಸೆಂಬರ್ 2000ದ ವೇಳೆಗೆ ಪೂರ್ಣಗೊಳ್ಳಲಿವೆ. ಈ ಉದ್ದೇಶಕ್ಕಾಗಿ ನಾವು ಉಪಗ್ರಹ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿದ್ದೇವೆ. ಇದು ಉನ್ನತ ತಂತ್ರಜ್ಞಾನದ ಬಳಕೆಯನ್ನು ಬಳಕೆಯನ್ನು ಸಾಮಾಜಿಕ ಸ್ತರಗಳಿಗೆ ಅನ್ವಯಿಸುವ ಬಗ್ಗೆ ನಮಗಿರುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಸಮಾಜ ಕಲ್ಯಾಣ

69. ಪರಿಶಿಷ್ಟ ಜಾತಿ/ಪಂಗಡದ ಜನರ ಮನೆ ನಿರ್ಮಾಣದ ವಾರ್ಷಿಕ ಗುರಿಯನ್ನು 50,000 ದಿಂದ 1,00,000 ಕ್ಕೆ ದ್ವಿಗುಣಗೊಳಿಸಿರುವ ವಿಷಯದಿಂದ ಮಾನ್ಯ ಸದಸ್ಯರಿಗೆ ಸಂತಸವಾಗಬಹುದೆಂದು ನಾನು ಭಾವಿಸುತ್ತೇನೆ. ಎರಡು ದಿನಗಳ ಹಿಂದಷ್ಟೇ, ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರದವರು 1988 ನೇ ಇಸವಿಯಿಂದ ಇತ್ಯರ್ಥವಾಗದೇ ಉಳಿದಿದ್ದ 2,500 ಮೀಸಲಾತಿ ನಿವೇಶನಗಳನ್ನು ಪರಿಶಿಷ್ಟಜಾತಿ/ಪಂಗಡದ ಕುಟುಂಬಗಳಿಗೆ ವಿತರಿಸಿದ್ದಾರೆ.

70. ಹೊಸ ವಸತಿ ನಿಲಯಗಳ ನಿರ್ಮಾಣದ ಬಗ್ಗೆ ಈ ಹಿಂದೆ ಹಲವಾರು ಘೋಷಣೆಗಳನ್ನು ಮಾಡಲಾಗಿದೆ. ನಾವು ಈ ವರ್ಷ ಮತ್ತೆ ಇದನ್ನು ಘೋಷಣೆ ಮಾಡಿ ನಿಲ್ಲುವುದಿಲ್ಲ. ಎಷ್ಟೇ ವೆಚ್ಚವಾದರೂ ಇವುಗಳನ್ನು ನಿಸ್ಸಂದೇಹವಾಗಿ ನಿರ್ಮಿಸುತ್ತೇವೆ. ಇದರ ಪ್ರಗತಿಯ ಬಗ್ಗೆ ನಾನೇ ಖುದ್ದು ವೈಯಕ್ತಿಕ ಗಮನ ಹರಿಸುತ್ತೇನೆ. ರಾಜ್ಯದಲ್ಲಿ ಈ ವರ್ಷ ಪರಿಶಿಷ್ಟ ಜಾತಿ/ಪಂಗಡದ ಬಾಲಕರಿಗಾಗಿ 50 ಹೊಸ ವಿದ್ಯಾರ್ಥಿ ನಿಲಯಗಳನ್ನು ಮತ್ತು ಬಾಲಕಿಯರಿಗಾಗಿ 20 ವಸತಿ ನಿಲಯಗಳನ್ನು ನಿರ್ಮಿಸಲಿದ್ದೇವೆ. ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿನಿಯರಿಗಾಗಿ 20 ಹೊಸ ಮೆಟ್ರಿಕ್ ನಂತರದ ವಸತಿನಿಲಯಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ನಿರ್ಮಿಸಲಾಗುವುದು.

71. ಐ.ಐ.ಟಿ, ಐ.ಐ.ಎಮ್, ಐ,ಐ,ಎಸ್‌ಸಿ, ಐ,ಐ,ಐ,ಟಿ. ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ರಾಜ್ಯದ ಪರಿಶಿಷ್ಟ ಜಾತಿ/ಪಂಗಡದವರಿಗೆ ಒಂದು ಅವಧಿಯ ವಿದ್ಯಾರ್ಥಿ ವೇತನವಾಗಿ ತಲಾ 50,000 ರೂಗಳನ್ನು ನೀಡಲಾಗುವುದು.

72. ಕೃಷಿ ಭೂಮಿ ಖರೀದಿ ಯೋಜನೆಯಡಿ ಕರ್ನಾಟಕ ಪರಿಶಿಷ್ಟ ಜಾತಿ ಪಂಗಡ ಅಭಿವೃದ್ಧಿ ನಿಗಮಕ್ಕೆ ಸರ್ಕಾರವು ನೀಡುತ್ತಿದ್ದ ಸಹಾಯಧನದ ಮಿತಿಯನ್ನು ಪ್ರತಿ ಫಲಾನುಭವಿಗೆ 50,000 ರೂಗಳಿಂದ 60,000 ರೂ.ಗಳಿಗೆ ಹೆಚ್ಚಿಸಲಾಗಿದೆ.

73. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ನೀಡುವ ಷೇರು ಬಂಡವಾಳವನ್ನು 1 ಕೋಟಿ ರೂಗಳಿಗೆ ಏರಿಸಲಾಗಿದೆ.

74. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಆಯವ್ಯಯ ಅನುದಾನವನ್ನು ಈ ವರ್ಷ ಶೇ 25 ರಷ್ಟು ಹೆಚ್ಚಿಸಲಾಗಿದೆ. ಅಲ್ಪಸಂಖ್ಯಾತ ಸಮುದಾಯದ 1,700 ಮಂದಿ ಫಲಾನುಭವಿಗಳಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲಾಗುವುದು. ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗಾಗಿ 5 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳನ್ನು ಈ ವರ್ಷ ತೆರೆಯಲಾಗುವುದು. ಹಾಗೆಯೆ ಈ ವರ್ಗಕ್ಕಾಗಿ 5 ಸಮುದಾಯ ಭವನಗಳನ್ನು ನಿರ್ಮಿಸಲಾಗುವುದು.

ಗ್ರಾಮೀಣ ಯುವಜನತೆ

75. ನಾವೀಗ **"ಯುವ.ಕಾಮ್"** ಎಂಬ ಹೊಸ ಯೋಜನೆಯೊಂದನ್ನು ಆರಂಭಿಸುತ್ತಿರುವುದು ಮಾನ್ಯ ಸದಸ್ಯರಿಗೆ ಹರ್ಷವನ್ನುಂಟು ಮಾಡಲಿದೆ. ಈ ಯೋಜನೆಯಡಿಯಲ್ಲಿ ಮುಂದಿನ ಹನ್ನೆರಡು ತಿಂಗಳಲ್ಲಿ 225 ವಿಧಾನ ಸಭಾ ಕ್ಷೇತ್ರಗಳಲ್ಲಿ ತಲಾ ಒಂದು ತರಬೇತಿ ಕೇಂದ್ರ ಸ್ಥಾಪಿಸಲಿದ್ದೇವೆ. ಈ ಕೇಂದ್ರಗಳು ಸುಮಾರು ಒಂದು ಲಕ್ಷ ವಿದ್ಯಾವಂತ ಯುವಕರನ್ನು ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವೆಗಳಲ್ಲಿ ತರಬೇತುಗೊಳಿಸುತ್ತವೆ. ಈ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ

ಖಾಸಗಿ ವಲಯವು ಭಾಗಿಯಾಗಲಿದೆ. ಮೊದಲ ನಾಲ್ಕು ಈ 'ಯುವ.ಕಾಮ್' ಕೇಂದ್ರಗಳು ಜುಲೈ ಒಂದರಂದು ಬೆಳಗಾವಿ, ಬೀದರ್, ಚಿತ್ರದುರ್ಗ ಮತ್ತು ಮಂಡ್ಯಗಳಲ್ಲಿ ಆರಂಭವಾಗಲಿವೆ.

76. ರಾಜ್ಯದಲ್ಲಿ 90 ಸರ್ಕಾರಿ ಐ.ಟಿ.ಐ.ಗಳಿವೆ ಖಾಸಗಿ ವಲಯದ ಸಹಕಾರದೊಡನೆ ಇವುಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಇವುಗಳನ್ನು ಗ್ರಾಮೀಣ ಯುವಜನತೆಯ ಹೆಚ್ಚಿನ ತರಬೇತಿಗಾಗಿ ಬಳಸಿಕೊಳ್ಳಲಾಗುವುದು.

ರೇಷ್ಮೆ

77. ಮಾನ್ಯರೆ, ರಾಜ್ಯಕ್ಕೆ ರೇಷ್ಮೆ ಉದ್ಯಮವು ಎಷ್ಟು ಪ್ರಮುಖವಾಗಿದೆ ಎಂಬುದು ನಮಗೆಲ್ಲ ತಿಳಿದೇ ಇದೆ. ಇದು ಸುಮಾರು 25 ಲಕ್ಷ ಜನರಿಗೆ ಉದ್ಯೋಗ ಒದಗಿಸುತ್ತದೆ. ಇದರಲ್ಲಿ ಬಹುತೇಕ ಮಂದಿ ಮಹಿಳೆಯರು. ಈ ಉದ್ಯಮದಲ್ಲಿ ಮತ್ತಷ್ಟು ಉದ್ಯೋಗವಕಾಶ ಒದಗಿಸಲು ಮತ್ತು ಉತ್ತಮ ಗುಣಮಟ್ಟದ ರೇಷ್ಮೆಗೂಡಿನ ಉತ್ಪಾದನೆಯನ್ನು ಹೆಚ್ಚಿಸಲು ನಾನು ರೇಷ್ಮೆ ಸಂಪತ್ತು ಯೋಜನೆಯನ್ನು ಜಾರಿಗೆ ತರುತ್ತಿದ್ದೇನೆ. ಈ ಯೋಜನೆಯು ರಾಜ್ಯದ 27 ಜಿಲ್ಲೆಗಳಲ್ಲಿನ ಪರಿಶಿಷ್ಟ ಜಾತಿ/ಪಂಗಡದವರು, ಸಣ್ಣ ಮತ್ತು ಅತಿ ಸಣ್ಣ ರೈತರು ಹಾಗೂ ಅಂಗವಿಕಲರಿಗೆ ನೆರವು ನೀಡುವ ಗುರಿ ಇಟ್ಟುಕೊಂಡಿದೆ. ಈ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು, ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುವುದು; ಉತ್ತಮ ತಳಿಯ ಹಿಪ್ಪು ನೇರಳೆ ಬೆಳೆಯನ್ನು ನೆಡಲಾಗುವುದು ಹಾಗೂ ಉತ್ತಮ ಗುಣಮಟ್ಟದ ಬೈವೋಲ್ಟೀನ್ ರೇಷ್ಮೆ ಹುಳುಗಳನ್ನು ಸಾಕಲು ಅವಕಾಶ ಕಲ್ಪಿಸಲಾಗುವುದು. ಈ ಯೋಜನೆ ಆರಂಭಿಸಲು ವಿವಿಧ ಸಂಸ್ಥೆಗಳಿಂದ ಧನ ಸಹಾಯಕ್ಕಾಗಿ ಪ್ರಯತ್ನಿಸುತ್ತಿದ್ದೇವೆ.

ಸಕ್ಕರೆ

78. ಸಹಕಾರಿ ವಲಯದಲ್ಲಿ ನೂತನವಾಗಿ ಸ್ಥಾಪನೆಯಾಗುತ್ತಿರುವ 11 ಸಕ್ಕರೆ ಕಾರ್ಖಾನೆಗಳಿಗೆ ಕರ್ನಾಟಕ ಸರ್ಕಾರವು ಎಲ್ಲ ರೀತಿಯ ಮಂಜೂರಾತಿಗಳನ್ನು ನೀಡಿದೆ. ದಿನವೊಂದಕ್ಕೆ ತಲಾ 2,500 ಮೆಟ್ರಿಕ್ ಟನ್ ಸಾಮರ್ಥ್ಯದ ಕಬ್ಬು ಅರೆಯುವ ಸಾಮರ್ಥ್ಯವುಳ್ಳ ಈ ಕಾರ್ಖಾನೆಗಳಿಗೆ ಷೇರು ಬಂಡವಾಳ ಮತ್ತು ಅಗತ್ಯ ಸಾಲದ ಅಧಿಕಾರ ನೀಡಿಕೆಗೆ 'ನಬಾರ್ಡ್' ಮತ್ತು ಎನ್‌ಸಿಡಿಸಿ ಸಂಸ್ಥೆಗಳು ಒಪ್ಪಿಕೊಂಡಿವೆ.

79. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗಬಹುದಾದ ವಿದ್ಯುತ್ ಪ್ರಮಾಣ ಗಣನೀಯವಾಗಿದೆ. ಆದರೆ ಈವರೆಗೆ ನಿರೀಕ್ಷಿತ ಸಾಮರ್ಥ್ಯದ ನಾಲ್ಕನೆ ಒಂದು ಭಾಗಕ್ಕಿಂತಲೂ ಕಡಿಮೆ ಸಾರ್ಮರ್ಥ್ಯವನ್ನು ನಾವು ಬಳಸಿಕೊಂಡಿದ್ದು ಇದರ ಪೂರ್ಣ ಬಳಕೆಗಾಗಿ ಕಾಲಮಿತಿಯ ಕಾರ್ಯಕ್ರಮವನ್ನು ಕರ್ನಾಟಕ ರಿನ್ಯೂಬಲ್ ಎನರ್ಜಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ (ಕೆಆರ್‌ಇಡಿಎಲ್) ಹಮ್ಮಿಕೊಂಡಿದೆ.

80. ಸಕ್ಕರೆ ಉದ್ಯಮಗಳ ಸಹಯೋಗದೊಂದಿಗೆ ಕರ್ನಾಟಕ ಸಕ್ಕರೆ ಸಂಸ್ಥೆಯನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ನೆರವು ನೀಡುತ್ತದೆ. ಈ ಸಂಸ್ಥೆಯ ಬೆಳಗಾವಿಯಲ್ಲಿ ಕಾರ್ಯರಂಭ ಮಾಡಲಿರುವುದು ನನ್ನ ಸಹೋದ್ಯೋಗಿಗಳಿಗೆ ಸಂತಸ ತರಬಹುದೆಂದು ಭಾವಿಸುತ್ತೇನೆ.

ಮೀನುಗಾರಿಕೆ

81. ಮೀನುಗಾರಿಕಾ ಸಮುದಾಯದ ಹಿತರಕ್ಷಣೆಗೆ ಸರ್ಕಾರ ಸಂಪೂರ್ಣ ಬದ್ಧವಾಗಿದೆ. ಕಡಲ ಮೀನುಗಾರರಿಗೆ ರಿಯಾಯಿತಿ ದರದಲ್ಲಿ ಡೀಸೆಲ್ ಒದಗಿಸುತ್ತಿರುವ ಹಾಲಿ ಯೋಜನೆಯು ತೊಡಕಿನದಾಗಿದ್ದು ಸಾಕಷ್ಟು ಕಾಲವ್ಯಯಕ್ಕೆ ಕಾರಣವಾಗಿದೆ. ಈ ಯೋಜನೆಯನ್ನು ವಾಣಿಜ್ಯ ತೆರಿಗೆ ಇಲಾಖೆಯಿಂದ ಮೀನುಗಾರಿಕೆ ಇಲಾಖೆಗೆ ವರ್ಗಾಯಿಸಿ, ಮೀನುಗಾರರಿಗೆ ನೆರವಾಗುವಂತೆ ಸರಳೀಕರಿಸಲಾಗುವುದು.

ಅರಣ್ಯ ಪರಿಸರ ಮತ್ತು ಜೀವಿಪರಿಸ್ಥಿತಿ

82. ನಮ್ಮ ರಾಜ್ಯದಲ್ಲಿ ಶೇಕಡಾ 20 ರಷ್ಟು ಅರಣ್ಯಾವೃತ ಪ್ರದೇಶವಿದೆ. ಇದನ್ನು ಮುಂದಿನ ಐದು ವರ್ಷಗಳಲ್ಲಿ ಶೇ.22 ಕ್ಕೆ ಹೆಚ್ಚಿಸಲಾಗುವುದು.

83. ಇತ್ತೀಚಿನ ವರ್ಷಗಳಲ್ಲಿ ಉರುವಲು ಲಭ್ಯತೆ ಕಡಿಮೆಯಾಗುತ್ತಾ ಬಂದಿದೆ. ಗ್ರಾಮೀಣ ಬಡಜನತೆಗೆ, ವಿಶೇಷವಾಗಿ ಬುಡಕಟ್ಟು ಜನಾಂಗದವರಿಗೆ ಸೌದೆ ಒದಗಿಸಲು ಅರಣ್ಯಾಇಲಾಖೆಯು ಉರುವಲು ನೆಡು ತೋಪುಗಳನ್ನು ವಿಸ್ತಾರವಾಗಿ ಬೆಳೆಸಲು ಕ್ರಮ ಕೈಗೊಳ್ಳುವುದು.

ಆಹಾರ ಮತ್ತು ನಾಗರಿಕ ಸರಬರಾಜು

84. ಪಡಿತರ ಚೀಟಿದಾರರು ಕೊಳ್ಳುವ ಅಕ್ಕಿ ಮತ್ತು ಗೋಧಿಯ ದರವನ್ನು ಕೇಂದ್ರ ಸರ್ಕಾರವು ಇತ್ತೀಚಿಗೆ ತೀವ್ರವಾಗಿ ಏರಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಅಲ್ಲದೆ ಆಹಾರ ಧಾನ್ಯಗಳಿಗೆ ನೀಡುವ ಸಹಾಯಧನದ ಹೊರೆಯನ್ನು ರಾಜ್ಯ ಸರ್ಕಾರಗಳಿಗೆ ವರ್ಗಯಿಸಲು ಕೇಂದ್ರವು ಮುಂದಾಗಿದೆ. ಎಲ್ಲಾ ಅಧೀಕೃತ ಹಸಿರು ಕಾರ್ಡುದಾರರ ಆಹಾರ ಲಭ್ಯತೆಗೆ ನನ್ನ ಸರ್ಕಾರ ಬದ್ಧವಾಗಿದೆ.

85. ಉದಾಹರಣೆಗೆ, ಹಸಿರು ಕಾರ್ಡುದಾರರು, ಖರೀದಿಸುತ್ತಿರುವ ಅಕ್ಕಿಯ ಬೆಲೆಯನ್ನು ಪ್ರತಿ ಕೇಜಿಗೆ 3-50 ರೂ.ಗಳಿಂದ 6-60 ರೂ.ಗಳಿಗೆ ಏರಿಸಲಾಗಿದೆ. ಭಾರತ ಸರ್ಕಾರದ ಈ ಏಕಪಕ್ಷೀಯ ಹಾಗೂ ಅಸೂಕ್ಷ್ಮ ಧೋರಣೆಯ ವಿರುದ್ಧ ನಾವು ಈಗಾಗಲೆ ಪ್ರತಿಭಟನೆ ಸಲ್ಲಿಸಿದ್ದೇವೆ.

86. ನಾವು ಆಹಾರ ಧಾನ್ಯಗಳನ್ನು ಮೊದಲಿನ ಬೆಲೆಯಲ್ಲಿ ವಿತರಿಸಿದರೆ ರಾಜ್ಯಕ್ಕೆ 966 ಕೋಟಿ ರೂ.ಗಳ ಅನುದಾನ ಬೇಕಾಗುತ್ತದೆ. ಕಳೆದ ವರ್ಷದ ಆಹಾರ ಸಹಾಯಧನದ ಮೊತ್ತ 305 ಕೋಟಿ ರೂ.ಗಳಾಗಿತ್ತು. ಈ ಭಾರೀ ಗಾತ್ರದ ಅನುದಾನ ಬೆಂಬಲ ನೀಡಲು ರಾಜ್ಯದ ಹಣಕಾಸಿಗೆ ಸಾಧ್ಯವಾಗುದಿಲ್ಲ. ರಾಜ್ಯದಲ್ಲಿ ಹಲವಾರು ಅನರ್ಹ ಮಂದಿ ಹಸಿರು ಕಾರ್ಡುಗಳನ್ನು ಪಡೆದಿರುವ ವಿಷಯವನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಪಿಸುತ್ತೇನೆ. ಇಂತಹ

ಫಲಾನುಭವಿಗಳನ್ನು ಅನರ್ಹ ಪಟ್ಟಿಯಿಂದ ತೆಗೆದು ಹಾಕದಿದ್ದರೆ ನಿಜವಾದ ಬಡಜನರಿಗೆ ಆಹಾರ ಸಹಾಯಧನ ತಲುಪುವುದಿಲ್ಲ. ಈ ನಿಟ್ಟಿನಲ್ಲಿ ನಾನು ಅನರ್ಹ ರೇಷನ್ ಕಾರ್ಡುಗಳನ್ನು ತೆಗೆದು ಹಾಕಲು ಗೌರವಾನ್ವಿತ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಇದರಿಂದ, ಆಹಾರದ ಅಗತ್ಯವುಳ್ಳ ಬಡ ಜನರಿಗೆ ಹೆಚ್ಚು ಆಹಾರ ಒದಗಿಸಲು ಸಾಧ್ಯವಾಗುತ್ತದೆ. ಕೇಂದ್ರ ಸರ್ಕಾರದ ಘೋಷಣೆಯಿಂದ ಉದ್ಭವಿಸಿರುವ ಈ ಸಮಸ್ಯೆಯನ್ನು ಬಗೆಹರಿಸಲು ಸದ್ಯದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು.

87. ಪಡಿತರ ಚೀಟಿಗಳನ್ನು ಗಣಕೀರಣ ಮಾಡುವುದರಿಂದ ಅವುಗಳ ಉಸ್ತುವಾರಿ, ಮತ್ತು ತಪಾಸಣೆ ಸುಲಭವಾಗುತ್ತದೆ. ಈ ಪ್ರಕ್ರಿಯೆ 2001 ಮಾರ್ಚ್ 31ರೊಳಗೆ ಬೆಂಗಳೂರಿನಲ್ಲಿ ಸಂಪೂರ್ಣಗೊಳ್ಳುತ್ತದೆ. ಉಳಿದ ಪ್ರದೇಶಗಳಲ್ಲಿ ಗಣಕೀಕರಣ ಹಂತ ಹಂತವಾಗಿ ಮುಕ್ತಾಯಗೊಳ್ಳಲಿದೆ.

ಆಡಳಿತ ವಿಕೇಂದ್ರೀಕರಣ

88. ಸಮತೋಲನ ಪ್ರಾದೇಶಿಕ ಅಭಿವೃದ್ಧಿಗೆ ನನ್ನ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ನಾವು ಸರ್ಕಾರಿ ಕಚೇರಿಗಳನ್ನು ಸ್ಥಳಾಂತರಗೊಳಿಸುವ ಕ್ರಮ ಕೈಗೊಳ್ಳುತ್ತಿದ್ದೇವೆ. ಈ ಕ್ರಮವು ಇತರೆ ಆರ್ಥಿಕ ಚಟುವಟಿಕೆಗಳಿಗೆ ಚಾಲನೆ ನೀಡುತ್ತದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಈಗಾಗಲೇ ಸ್ಥಳಾಂತರಿಸಲಾಗಿದೆ. ನಾವೀಗ ಸಕ್ಕರೆ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಬೆಳಗಾವಿಗೆ; ಜವಳಿ ಆಯುಕ್ತರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ; ರೇಷ್ಮೆ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಮೈಸೂರಿಗೆ; ಕರ್ನಾಟಕ ಎಣ್ಣೆ ಬೀಜಗಳ ಮಾರುಕಟ್ಟೆ ಒಕ್ಕೂಟವನ್ನು ಬೆಂಗಳೂರಿನಿಂದ ರಾಯಚೂರಿಗೆ ಮತ್ತು ಕರ್ನಾಟಕ ನೀರಾವರಿ ನಿಗಮವನ್ನು ಬೆಂಗಳೂರಿನಿಂದ ಧಾರವಾಡಕ್ಕೆ ಸ್ಥಳಾಂತರಿಸಲು ನಿರ್ಧರಿಸಿದ್ದೇವೆ. ಕೃಷ್ಣಾ ಭಾಗ್ಯ ಜಲ ನಿಗಮವು ರಾಜ್ಯದ ಪ್ರತಿಷ್ಠಿತ ಸಂಸ್ಥೆಯಾಗಿದ್ದು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸುತ್ತದೆ. ಈ ನಿಗಮದ ಕಛೇರಿಯನ್ನು ಬೆಂಗಳೂರಿನಿಂದ ಗುಲ್ಬರ್ಗಾ ಜಿಲ್ಲೆಯ ಭೀಮರಾಯನಗುಡಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಇದು ಆರಂಭ ಮಾತ್ರ. ಇಂಥ ಮಹತ್ತರ ಕಾರ್ಯಕ್ಕೆ ನಾನು ಪ್ರತಿಯೊಬ್ಬ ಸದಸ್ಯರ ಬೆಂಬಲ ಮತ್ತು ಸಹಕಾರ ಕೋರುತ್ತೇನೆ.

ಸಾರ್ವಜನಿಕ ಉದ್ಯಮ ಕ್ಷೇತ್ರ

89. ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ಕಾರ್ಯ ನಿರ್ವಹಣೆ ವಿಷಾದಕರವಾಗಿದೆ. ನಷ್ಟವನ್ನುಂಟು ಮಾಡುವ; ಅಲ್ಪ ಆದಾಯ ಗಳಿಸುವ ಉದ್ದಿಮೆಗಳು ಸರ್ಕಾರಿ ಖಜಾನೆಗೆ ಒಂದು ಹೊರೆ. ಇದು ಅಗತ್ಯ ಸಾಮಾಜಿಕ ಮೂಲಸೌಲಭ್ಯಗಳ ಮೇಲೆ ಬಂಡವಾಳ ಹೂಡುವ ನಮ್ಮ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ನಮ್ಮ ಸಾರ್ವಜನಿಕ ಉದ್ದಿಮೆಗಳ ಕುರಿತು ಮುಂದೆ ಯಾವ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಸಲಹೆ-ಶಿಫಾರಸ್ಸು ನೀಡಲು ಒಂದು ***'ಸಾರ್ವಜನಿಕ ಉದ್ಯಮ ಸುಧಾರಣಾ ಆಯೋಗ'***ವನ್ನು ರಚಿಸಲಾಗಿದೆ. ಸಾರ್ವಜನಿಕ ವಲಯದ ಪುನರ್ ನಿರ್ಮಾಣ ಮಾಡುವಾಗ ಕಾರ್ಮಿಕ ವರ್ಗದ ನ್ಯಾಯಬದ್ಧ ಹಿತಾಸಕ್ತಿಗಳನ್ನು ಸಂಪೂರ್ಣವಾಗಿ ರಕ್ಷಿಸಲಾಗುವುದೆಂದು ಮಾನ್ಯ ಸದಸ್ಯರಿಗೆ ಭರವಸೆ ನೀಡಬಯಸುತ್ತೇನೆ.

90. ಸಣ್ಣ ಪ್ರಮಾಣದ ಉದ್ದಿಮೆಗಳ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಕರ್ನಾಟಕ ಸಣ್ಣ ಪ್ರಮಾಣ ಉದ್ದಿಮೆಗಳ ಮಾರುಕಟ್ಟೆ ನಿಗಮವನ್ನು ಸ್ಥಾಪಿಸಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅದರ ಕಾರ್ಯ ನಿರ್ವಹಣೆ ನಿರೀಕ್ಷಿತ ಮಟ್ಟವನ್ನು ಮುಟ್ಟಿಲ್ಲ. ನಿಗಮವು ಮಾಡಿರುವ ಖರೀದಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ನಡೆದ ಚರ್ಚೆಗೆ ಸದನವೇ ಸಾಕ್ಷಿಯಾಗಿದೆ. ಆದುದರಿಂದ ಕರ್ನಾಟಕ ಸಣ್ಣ ಪ್ರಮಾಣ ಉದ್ದಿಮೆಗಳ ಮಾರುಕಟ್ಟೆ ನಿಗಮದ ಪಾತ್ರವನ್ನು ಮರುಪರಿಶೀಲಿಸುವುದು ಅಗತ್ಯವಾಗಿದೆ.

91. ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಅದು ಕಾಮಗಾರಿ ಗುತ್ತಿಗೆದಾರರಿಗೆ ಒಂದು ಅನುಕರಣೀಯ ಸಂಸ್ಥೆಯಾಗಿರಲಿ ಎಂಬ ಉದ್ದೇಶದಿಂದ ಸ್ಥಾಪಿಸಲಾಗಿತ್ತು. ಆದರೆ ಈ ನಿಗಮವು ನಿರೀಕ್ಷೆಗೆ ತಕ್ಕಂತೆ ರೂಪುಗೊಳ್ಳಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ತಂತ್ರಜ್ಞಾನದಲ್ಲಿ ಹೆಚ್ಚಿನ ಪರಿಶ್ರಮ ಹೊಂದಿರುವ ಉತ್ತಮ ಖಾಸಗಿ ಗುತ್ತಿಗೆದಾರರು ರಾಜ್ಯದಲ್ಲಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಮುಚ್ಚಲು ತೀರ್ಮಾನಿಸಲಾಗಿದೆ. ಈ ನಿಗಮದ ಎಲ್ಲಾ ಸಂಪನ್ಮೂಲಗಳನ್ನು ಲೋಕೋಪಯೋಗಿ ಇಲಾಖೆ ಜೊತೆ ವಿಲೀನಗೊಳಿಸಲಾಗುವುದು.

ಅಸಂಘಟಿತ ಕಾರ್ಮಿಕರು

92. ನಮ್ಮ ದೇಶದಲ್ಲಿರುವ ಪರಿಸ್ಥಿತಿಯಂತೆಯೇ ಕರ್ನಾಟಕದಲ್ಲೂ ಸಹ ಕಾರ್ಮಿಕ ಶಕ್ತಿಯ ಶೇ. 90 ಭಾಗ ಅಸಂಘಟಿತ ವಲಯದಲ್ಲೇ ಇದೆ. ಅವರ ಹಿತಾಸಕ್ತಿ ಕಾಪಾಡಲು ಶೀಘ್ರದಲ್ಲಿಯೇ "ಕರ್ನಾಟಕ ಶ್ರಮ ಜೀವಿಗಳ (ಉದ್ಯೋಗ ನಿಯಂತ್ರಣ ಮತ್ತು ದುಡಿಮೆಯ ಕರಾರುಗಳು) ಮಸೂದೆ" ಯನ್ನು ಮಂಡಿಸಲಾಗುವುದು. ಈ ಮಸೂದೆಯು ಇಂಥ ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅನುವು ಮಾಡಿಕೊಡುವುದು.

ಚಿಟ್‌ಫಂಡ್

93. ತಮ್ಮ ಕಷ್ಟದ ದುಡಿಮೆಯ, ಜೀವನ ಪೂರ್ತಿ ಉಳಿತಾಯದ ಹಣವನ್ನು ಚಿಟ್‌ಫಂಡ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ತೊಡಗಿಸುವ ಸಣ್ಣ ಹೂಡಿಕೆದಾರರ ಹಿತವನ್ನು ಸಂರಕ್ಷಿಸಲು ನಾನು ಈ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲಿದ್ದೇನೆ.

ನಗರಾಭಿವೃದ್ಧಿ

94. ಕರ್ನಾಟಕದಲ್ಲಿ ನಗರೀಕರಣ ವೇಗದ ಗತಿಯಲ್ಲಿ ಸಾಗಿದೆ. ಇದು ನಾಗರಿಕ ಸೌಲಭ್ಯಗಳಿಗೆ ಹೆಚ್ಚಿನ ಬೇಡಿಕೆಯನ್ನು ಸೃಷ್ಟಿಸುತ್ತಿದೆ. ಆದುದರಿಂದ ಪಟ್ಟಣ-ನಗರಗಳ ಸ್ಥಳೀಯ ಸಂಸ್ಥೆಗಳ ಮೂಲವನ್ನು ಬಲಪಡಿಸುವ ತುರ್ತು ಅಗತ್ಯವಿದೆ. ಈಗ ಪುರಸಭಾ ವ್ಯಾಪ್ತಿಯಲ್ಲಿ ವಿಧಿಸುವ ಆಸ್ತಿ ತೆರಿಗೆಯು ವೈಜ್ಞಾನಿಕವಾಗಿ ನಿಗದಿಯಾಗಿಲ್ಲ. ಆದ್ದರಿಂದ ಇದನ್ನು ಎಲ್ಲರೂ ದುರ್ಬಳಕೆ ಮಾಡಲು ಅವಕಾಶವಿದೆ. ಆದುದರಿಂದ ಆಸ್ತಿ ತೆರಿಗೆ ನಿಗದಿಯನ್ನು ಸರಳಗೊಳಿಸಲು ನಾನು ಉದ್ದೇಶಿಸಿದ್ದೇನೆ. ಇದರಿಂದ ಆಸ್ತಿಯ ಪ್ರಮಾಣಾನುಸಾರವಾದ ತೆರಿಗೆ ಮೌಲ್ಯವನ್ನು ಸುಲಭವಾಗಿ ಲೆಕ್ಕ ಹಾಕಬಹುದು. ಈ

ವ್ಯವಸ್ಥೆಯಲ್ಲಿ ಆಸ್ತಿ ತೆರಿಗೆಯನ್ನು ಸ್ವಯಂ ಘೋಷಿಸಿಕೊಳ್ಳಲು ಅವಕಾಶವಿದೆ. ಈಗಾಗಲೇ ಈ ವ್ಯವಸ್ಥೆ ಬೆಂಗಳೂರಿನಲ್ಲಿ ಆರಂಭವಾಗಿದೆ. ಮುಂದಿನ ಮೂರು ತಿಂಗಳಲ್ಲಿ ಇತರೆ ನಗರಗಳಲ್ಲಿ ಇದು ಸುಧಾರಣೆ ಕಾಣಲಿದೆ.

95. ಹುಡ್ಕೊ ನೆರವಿನಿಂದ ನಾವು ಅನೇಕ ನಗರಾಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದೇವೆ. ವಿಶ್ವ ಬ್ಯಾಂಕ್ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್ ಜೊತೆ ಯೋಜನೆಗಳ ಬಗ್ಗೆ ಮಾತುಕತೆ ನಡೆಸಿ ಅಂತಿಮಗೊಳಿಸಲಾಗಿದೆ. ಈ ಎಲ್ಲಾ ಯೋಜನೆಗಳನ್ನು ಕರ್ನಾಟಕ ನಗರ ಮೂಲಸೌಲಭ್ಯ ಅಭಿವೃದ್ಧಿ ಹಣಕಾಸು ನಿಗಮವು ಜಾರಿಗೊಳಿಸುತ್ತದೆ.

ಪ್ರಾದೇಶಿಕ ಅಭಿವೃದ್ಧಿ

96. ವಿಶ್ವಬ್ಯಾಂಕ್, ಹುಡ್ಕೋ, ಎಡಿಬಿ ಮತ್ತು ದ್ವಿಪಕ್ಷೀಯ ಸಂಸ್ಥೆಗಳಂಥ ಹಣಕಾಸು ಸಂಸ್ಥೆಗಳೊಡನೆ ವ್ಯವಹರಿಸುವಾಗ, ರಾಜ್ಯದ ಹಿಂದುಳಿದ ಉತ್ತರ ಭಾಗದಲ್ಲಿ ಸಾಮಾಜಿಕ ಮತ್ತು ಭೌತಿಕ ಮೂಲಭೂತ ಸೌಲಭ್ಯದಲ್ಲಿ ಸಾಕಷ್ಟು ಹಣ ತೊಡಗಿರುವ ಬಗ್ಗೆ ನನ್ನ ಅರಿವು ಸದಾ ಜಾಗೃತವಾಗಿರುತ್ತದೆ. ಎನ್.ಡಿ.ಡಿ.ಬಿ. ಸಂಸ್ಥೆಯ ಜೊತೆ ವ್ಯವಹರಿಸುವಾಗಲೂ, ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆ ಬೆಳೆಗಳಿಗೆ ಇರುವ ಅವಕಾಶವನ್ನು ಮನಗಂಡು ತೋಟಗಾರಿಕೆಯನ್ನು ಪ್ರಜ್ಞಾಪೂರ್ವಕವಾಗಿ ಅದರಲ್ಲಿ ಸೇರಿಸಿದೆ. ಬೆಂಗಳೂರಿನಿಂದ ಅನೇಕ ಕಚೇರಿಗಳನ್ನು ಸ್ಥಳಾಂತರಿಸುವ ನನ್ನ ಉದ್ದೇಶವೂ, ಸಾಮಾಜಿಕ ಸಮತೋಲನೆ ಕಾಪಾಡುವ ನನ್ನ ಸರ್ಕಾರದ ಧ್ಯೇಯದ ಒಂದು ಭಾಗ. ಈ ಕಾರ್ಯಗಳ ಜೊತೆಗೆ, ಉತ್ತರ ಕರ್ನಾಟಕವನ್ನು ಅಭಿವೃದ್ಧಿಪಡಿಸಲು ಇತರೇ ಕ್ರಮಗಳನ್ನು ಮುಂದಿಡುತ್ತಿದ್ದೇನೆ.

97. ಖಾಸಗಿ ಬಂಡವಾಳ ಹೂಡಿಕೆದಾರರ ನೆರವಿನಿಂದ ತದಡಿ ಬಂದರನ್ನು ಅಭಿವೃದ್ಧಿ ಪಡಿಸಲಾಗುವುದು. ಇದಕ್ಕಾಗಿ ಶೀಘ್ರದಲ್ಲೇ ಗುತ್ತಿಗೆ ನೀಡಲಾಗುವುದು. ಇದಕ್ಕೆ ಸುಮಾರು 800 ಕೋಟಿ ರೂ. ಬಂಡವಾಳ ಹೂಡಿಕೆ ಅಗತ್ಯವಿದೆ.

98. ಮುಂದಿನ ಮೇ 31 ರೊಳಗೆ ಹುಬ್ಬಳಿಯಲ್ಲಿ ಒಂದು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆರಂಭಿಸಲಾಗುವುದು. ಇಲ್ಲಿಂದ ಬೆಳಗಾವಿಗೆ ಫೈಬರ್ ಆಪ್ಟಿಕ್ ಲಿಂಕ್ ಇರುತ್ತದೆ. ಅದೇ ರೀತಿ ಮುಂದಿನ ಎರಡು ತಿಂಗಳಲ್ಲಿ ಬಾಗಲಕೋಟೆಯಲ್ಲಿ ಒಂದು ಆಹಾರ ಸಂಸ್ಕರಣ ಪಾರ್ಕ್ ಆರಂಭಿಸಲಾಗುವುದು. ಗುಲ್ಬರ್ಗದಲ್ಲಿ ಈಶಾನ್ಯ ರಸ್ತೆ ಸಾರಿಗೆ ನಿಗಮವನ್ನು ಆರಂಭಿಸಲಾಗುವುದು. ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಕಾರ್ಯವನ್ನು ಪುನಶ್ಚೇತನಗೊಳಿಸಲು ಸಹ ಕ್ರಮ ಕೈಗೊಳ್ಳುತ್ತಿದ್ದೇವೆ. ರಾಜ್ಯದ ಉತ್ತರ ಭಾಗದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಯೋಜನೆಯನ್ನು ಸಿದ್ದಪಡಿಸಲಾಗುತ್ತಿದೆ.

ಗಣಿನೀತಿ

99. ಕರ್ನಾಟಕದಲ್ಲಿ ಅಪಾರ ಖನಿಜ ಸಂಪತ್ತಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ

ಸಂಪತ್ತನ್ನು ಆಧುನಿಕ ತಂತ್ರಜ್ಞಾನದ ನೆರವಿನಿಂದ ಕ್ರಮಬದ್ಧವಾಗಿ ಸಮೀಕ್ಷೆಗೊಳಪಡಿಸಿ ಪರಿಸರಕ್ಕೆ ಪೂರಕವಾದ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ. ಮುಂದಿನ ಆರವತ್ತು ದಿನಗಳಲ್ಲಿ ನಾವು ಹೊಸ ಗಣಿ ನೀತಿಯೊಂದನ್ನು ಘೋಷಿಸಲಿದ್ದೇವೆ.

ಮೂಲಭೂತ ಸೌಲಭ್ಯ

100. ಹಿಂದಿನ ಸರ್ಕಾರದ ಹಣಕಾಸು ಸಚಿವರು 1998-99ರಲ್ಲಿ ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಪರಿಕಲ್ಪನೆಯನ್ನು ಬಿತ್ತಿದ್ದರು. ಅವರ ದೂರದರ್ಶಿತ್ವವನ್ನು ಅಭಿನಂದಿಸುತ್ತಾ, ಈಗ ಈ ನಿಗಮ (ಐಡೆಕ್) ನನಸಾಗಿದೆಯೆಂದು ತಿಳಿಸಲು ಹರ್ಷಿಸುತ್ತೇನೆ. ಈ ನಿಗಮವನ್ನು ಖಾಸಗಿ ರಂಗದಲ್ಲಿ ಸ್ಥಾಪಿಸಲು ಸರ್ಕಾರ ಮತ್ತು ಐಡಿಎಫ್‌ಸಿ ಒಪ್ಪಂದ ಮಾಡಿಕೊಂಡಿವೆ. ಸರ್ಕಾರವು ಒಂದು ಬಾರಿಯ ಬೆಂಬಲವಾಗಿ 200 ಕೋಟಿ ರೂಪಾಯಿಗಳನ್ನು ಈ ನಿಗಮಕ್ಕೆ ನೀಡುತ್ತದೆ. ಐಡಿಎಫ್‌ಸಿ ಸಂಸ್ಥೆಯು ಶೇ. 51ರಷ್ಟು ಈಕ್ವಿಟಿ ಹೊಂದಿರುತ್ತದೆ. ನಿಗಮವು ರಾಜ್ಯದ್ಯಂತ ಅಧಿಕ ಸಂಖ್ಯೆಯಲ್ಲಿ ಸಣ್ಣ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು. ನಿಗಮವು, ಬಳಕೆದಾರರ ಕರ ಪಾವತಿ; ಸ್ಥಳೀಯ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು; ಸಮುದಾಯದ ಭಾಗವಹಿಸುವಿಕೆ ಮುಂತಾದ ಕಾರ್ಯಗಳಿಗೆ ಒತ್ತು ನೀಡುವುದು. ಮೊದಲನೇ ವರ್ಷದಲ್ಲೇ ಐಡೆಕ್ 600 ಕೋಟಿ ರೂಪಾಯಿ ವೆಚ್ಚ ಮಾಡುವ ಗುರಿ ಹಾಕಿಕೊಂಡಿದೆ.

101. ಗ್ರಾಮೀಣ ಮೂಲಸೌಲಭ್ಯಗಳಿಗೆ ಸಂಬಂಧಿಸಿದಂತೆ ಬೇಸರದ ಸಂಗತಿಯೊಂದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ. 1995-96 ರಿಂದ ನಬಾರ್ಡ್ ಸಂಸ್ಥೆಯು ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿಯ ಜವಾಬ್ದಾರಿ ಹೊತ್ತಿದೆ. ಕರ್ನಾಟಕಕ್ಕೆ ಇದರಿಂದ 744 ಕೋಟಿ ಮಂಜೂರಾಗಿದೆ. ದುರಾದೃಷ್ಟವಶಾತ್, ಈ ನಿಧಿಯ ಬಳಕೆಯಲ್ಲಿ ನಮ್ಮ ಸಾಧನೆ ನಿರಾಶಾದಾಯಕವಾಗಿದೆ. ನಾವು ಮಂಜೂರಾದ ಹಣದಲ್ಲಿ ಶೇ.48 ರಷ್ಟನ್ನು ಮಾತ್ರ ಬಳಸಿಕೊಂಡಿದ್ದೇವೆ. ಈ ಬಗ್ಗೆ ನನ್ನ ಸರ್ಕಾರ ಅತ್ಯಂತ ಕಾಳಜಿ ವ್ಯಕ್ತಪಡಿಸಿ, ಆ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಲಿದೆ. ಯೋಜನೆಗಳನ್ನು ಸಿದ್ಧಪಡಿಸುವ ವಿಧಾನದಲ್ಲಿ ಸುಧಾರಣೆ ತರಲಾಗುವುದು. ಯೋಜನಾ ಜಾರಿಯಲ್ಲಿ ಕರ್ನಾಟಕ ಭೂ ಸೇನಾ ನಿಗಮದಂತಹ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲಾಗುವುದು. ಇದು ಹೆಚ್ಚಿನ ವೃತ್ತಿಪರತೆ ಬೇಡುವ ವಲಯವಾಗಿದೆ.

102. ಮರಾಟ ತೆರಿಗೆ, ಅಬಕಾರಿ, ಲೈಸೆನ್ಸ್ ಫೀಸು, ಮೋಟಾರು ವಾಹನ ತೆರಿಗೆ, ಮತ್ತು ನ್ಯಾಯಾಂಗೇತರ ಸ್ಟಾಂಪುಗಳ ಮೇಲೆ ಮೂಲ ಸೌಲಭ್ಯಗಳ ಕರ ವಿಧಿಸಿದ್ದು ಮಾನ್ಯ ಸದಸ್ಯರಿಗೆ ತಿಳಿದಿದೆ. ಇದರಿಂದ ಸಂಗ್ರಹವಾಗಿರುವ ಹಣವನ್ನು ಐಡೆಕ್‌ಗೆ ಬಳಸಿಕೊಳ್ಳಲಾಗುವುದು. ಈ ಕರವನ್ನು ಮತ್ತೆ ಎರಡು ವರ್ಷಗಳವರೆಗೆ ವಿಸ್ತರಿಸಲಾಗುವುದು.

ರೈಲು ಯೋಜನೆಗಳು

103. ಈ ವರ್ಷದ ರೈಲ್ವೇ ಮುಂಗಡ ಪತ್ರದಿಂದ ಮಾನ್ಯ ಸದಸ್ಯರಿಗೆ ನಿಸ್ಸಂದೇಹವಾಗಿ

ನಿರಾಶೆಯಾಗಿದೆ. ರಾಜ್ಯದ ಅನೇಕ ಪ್ರಮುಖ ರೈಲು ಮಾರ್ಗಗಳಿಗೆ ಅತ್ಯಲ್ಪ ಅನುದಾನ ಒದಗಿಸಲಾಗಿದೆ. ಈಗ ಮಂಜೂರು ಮಾಡುತ್ತಿರುವ ಅನುದಾನದ ಪ್ರಮಾಣ ಹೀಗೇಯೇ ಮುಂದುವರಿದರೆ, ಈ ಮಾರ್ಗಗಳು ಪೂರ್ಣಗೊಳ್ಳಲು ಅನೇಕ ವರ್ಷಗಳೇ ಹಿಡಿಯುತ್ತವೆ. ರಾಜ್ಯದಲ್ಲಿ ರೈಲು ಜಾಲವನ್ನು ವಿಸ್ತರಿಸಲು ನಾವೀಗ ಧೈರ್ಯದಿಂದ ಮುನ್ನುಗ್ಗಬೇಕಾಗಿದೆ. ರಾಜ್ಯ ಸರ್ಕಾರವು ಐಡೆಕ್ ಮೂಲಕ ಶೇ. 26 ರಷ್ಟು ಈಕ್ವಿಟಿ ನೀಡಿ *'ಕರ್ನಾಟಕ ರೈಲು ಅಭಿವೃದ್ಧಿ ನಿಗಮ'* ಸ್ಥಾಪಿಸಲು ಉದ್ದೇಶಿಸಿದೆ. ಐ.ಡಿ.ಎಫ್.ಸಿ. ಮತ್ತು ಹುಡ್ಕೋ ಈ ಜಂಟೀ ಉದ್ಯಮದಲ್ಲಿ ಪಾಲುದಾರರಾಗಿರಲು ಒಪ್ಪಿಕೊಂಡಿವೆ. ಇದರಲ್ಲಿ ಭಾಗವಹಿಸಲು ರೈಲ್ವೆ ಇಲಾಖೆಗೆ ಕೂಡ ಪತ್ರ ಬರೆದು ಕೋರಿದ್ದೇನೆ. ಪ್ರಮುಖ ಮಾರ್ಗಗಳಾದ, ಹುಬ್ಬಳ್ಳಿ-ಅಂಕೋಲ, ಗದಗ್-ಶೋಲಾಪುರ, ಸಕಲೇಶಪುರ-ಮಂಗಳೂರು ಹಾಗೂ ಬೆಂಗಳೂರು ಮೈಸೂರು ಜೋಡಿಮಾರ್ಗಗಳನ್ನು ಸಂಪೂರ್ಣಗೊಳಿಸಲು ನಿಗಮವು ಸಂಪನ್ಮೂಲ ಕ್ರೋಢೀಕರಿಸುತ್ತದೆ. ಇದೊಂದು ಸಂಪೂರ್ಣವಾಗಿ ಹೊಸದಾದ ಪರಿಕಲ್ಪನೆ. ನಾವು ಈ ಕಾರ್ಯದಲ್ಲಿ ಯಶಸ್ವಿಯಾಗುತ್ತೇವೆಂಬ ದೃಢ ವಿಶ್ವಾಸ ನನ್ನದು.

ವಿದ್ಯುತ್

104. ಈ ವರ್ಷದ ಒಟ್ಟು ಆದಾಯ ಕೊರತೆಯಲ್ಲಿ ಶೇಕಡಾ 60 ಕ್ಕಿಂತ ಹೆಚ್ಚು ಭಾಗ ವಿದ್ಯುತ್ ಸಹಾಯಧನ ನೀಡಿಕೆಯಿಂದಲೇ ಉಂಟಾಗಿದೆ. ಇದು ಹೀಗೆಯೇ ಮುಂದುವರಿಯಲಾಗದು. ವಿದ್ಯುತ್ ವಲಯ, ವಾಣಿಜ್ಯವಾಗಿಯೂ ಯಶಸ್ವಿಯಾಗಬೇಕು. ಅದಕ್ಕಾಗಿ ಯಾರಿಗೆ ಸಹಾಯಧನ ನಿಜವಗಿಯೂ ಅಗತ್ಯವಾಗಿದೆಯೋ ಅಂಥ ಬಡಜನತೆಗೆ ಮಾತ್ರ ಸೇರಬೇಕು. ಸಹಾಯಧನಗಳನ್ನು ರಾಜ್ಯ ಮುಂಗಡ ಪತ್ರದ ಮೂಲಕ ಪಾರದರ್ಶಕವಾಗಿ, ಹಾಗೂ ವಿವರವಾಗಿ ನೀಡಬೇಕು. ರಾಜ್ಯದಲ್ಲಿ ಸರಬರಾಜು ಮಾಡುವ ಒಟ್ಟು ವಿದ್ಯುತ್‌ನಲ್ಲಿ ಶೇ. 37 ರಷ್ಟು ಭಾಗ ಮಾತ್ರ ಮೀಟರ್‌ಗೊಳಪಡಿಸಲಾಗಿದೆ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ. ವಿದ್ಯುತ್‌ನ್ನು ಹಂತ ಹಂತವಾಗಿ ಸಾರ್ವತ್ರಿಕವಾಗಿ ಮೀಟರ್‌ಗೆ ಅಳವಡಿಸುವ ಪ್ರಕ್ರಿಯೆಯತ್ತ ಸಾಗಬೇಕು. ಕರ್ನಾಟಕ ವಿದ್ಯುತ್ ನಿಗಮದ ಪ್ರಕಾರ ವಿದ್ಯುತ್ ಸಾಗಣೆಕೆ ಮತ್ತು ವಿತರಣೆಯಲ್ಲಾಗುತ್ತಿರುವ ಶೇ.34 ರಷ್ಟು ನಷ್ಟು ಹೊರಲಾಗದ ಹೊರೆಯಾಗಿದೆ.

105. ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಸರ್ಕಾರ ಈಗಾಗಲೇ ತನ್ನ ನಿರ್ಧಾರವನ್ನು ಘೋಷಿಸಿದೆ. ವಿದ್ಯುತ್ ಸಾಗಣೆ ಮತ್ತು ವಿತರಣೆಯನ್ನು ಅಭಿವೃದ್ಧಿಪಡಿಸಲು 6,500 ಕೋಟಿ ರೂ.ಗಳ ಬಂಡವಾಳದ ಯೋಜನೆ ರೂಪುಗೊಳ್ಳುತ್ತಿದೆ. ಕ್ರಿ.ಶ. 2005 ರ ವೇಳೆಗೆ ನಾವು 2500 ರಿಂದ 3000 ಮೆಗಾವ್ಯಾಟ್‌ವರೆಗೆ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯಗಳಿಸಲಿದ್ದೇವೆ. 210 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವಿರುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಏಳನೇ ಘಟಕದ ನಿರ್ಮಾಣ ಕಾರ್ಯ ಮುಂದಿನ ಜುಲೈ 31 ರಿಂದ ಆರಂಭವಾಗಲಿದೆ. ಜಂಟೀ ಉದ್ದಿಮೆ ವಲಯದಲ್ಲಿ 500 ಮೆಗಾವ್ಯಾಟ್ ಸಾಮರ್ಥ್ಯದ ವಿಜಯನಗರ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಲು ಹರ್ಷಿಸುತ್ತೇನೆ. ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಐಸಿಐಸಿಐ ಸಂಸ್ಥೆಯ ಜೊತೆ ಮಾತುಕತೆ ನಡೆಸಲಾಗುತ್ತಿದೆ.

106. ರಾಜ್ಯದ 16 ಲಕ್ಷ ಕುಟುಂಬಗಳಿಗೆ ಭಾಗ್ಯಜ್ಯೋತಿ ಯೋಜನೆ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇವೆ. 2001-01ನೇ ಸಾಲಿನಲ್ಲಿ ಈ ಯೋಜನೆಯಡಿ ಈ ಸೌಲಭ್ಯವನ್ನು ಇನ್ನೂ ಎರಡು ಲಕ್ಷ ಕುಟುಂಬಗಳಿಗೆ ವಿಸ್ತರಿಸಲಾಗುವುದು. ಭಾಗ್ಯಜ್ಯೋತಿ ಯೋಜನೆಯ ನಿಯಮದ ಪ್ರಕಾರ, ಮನೆಯು ಒಂದು ವಿದ್ಯುತ್ ಕಂಬಕ್ಕಿಂತ ಹೆಚ್ಚು ದೂರದಲ್ಲಿದ್ದರೆ ಅಂಥವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದಿಲ್ಲ. ಈ ನಿಯಮದಿಂದಾಗಿ ಎಷ್ಟೋ ಕುಟುಂಬಗಳು ವಿದ್ಯುತ್ ಸಂಪರ್ಕದಿಂದ ವಂಚಿತವಾಗಿರುವ ಸಂಗತಿ ನನಗೆ ತಿಳಿದಿದೆ. ಎರಡು ವಿದ್ಯುತ್ ಕಂಬಗಳ ದೂರದಲ್ಲಿರುವ ಮನೆಗಳಿಗೂ ಭಾಗ್ಯಜ್ಯೋತಿಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಕೂಲವಾಗುವಂತೆ ಈಗ ಅಸ್ತಿತ್ವದಲ್ಲಿರುವ ನಿಬಂಧನೆಯನ್ನು ಮಾರ್ಪಡಿಸಲಾಗುವುದು. ಇದರಿಂದ ಬಾಗ್ಯಜ್ಯೋತಿ ಮತ್ತು ಗ್ರಾಮೀಣ ವಿದ್ಯುತ್ ಯೋಜನೆಯು ವಿಸ್ತರಣೆಯಾಗುತ್ತಿದ್ದು 2000-2001ನೇ ಸಾಲಿನಲ್ಲಿ ರಾಜ್ಯಕ್ಕೆ 180 ಕೋಟಿ ರೂ.ಗಳ ವೆಚ್ಚ ತಗುಲಲಿದೆ. ರಾಜ್ಯದಲ್ಲಿ 18,000 ಹ್ಯಾಮ್ಲೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬೃಹತ್ ಕಾರ್ಯವನ್ನು ಆರ್‌ಇಸಿ ಸಂಸ್ಥೆಯ ನೆರವಿನೊಡನೆ ಮುಂದಿನ ಐದು ವರ್ಷಗಳಲ್ಲಿ ಪೂರೈಸಲು ಕೆಪಿಟಿಸಿಎಲ್ ಸಜ್ಜಾಗಿದೆ.

107. ಖಾಸಗಿ ವಿದ್ಯುತ್ ಯೋಜನೆಗಳಿಗಾಗಿ ಎಸ್‌ಕ್ರೋ ಸಾಮರ್ಥ್ಯವನ್ನು ಗೊತ್ತುಪಡಿಸಲು ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಎಸ್ಕ್ರೋ ಪರಿಕಲ್ಪನೆಯ ಬಗ್ಗೆಯೇ ಹಣಕಾಸು ಸಂಸ್ಥೆಗಳು ಅನುಮಾನ ವ್ಯಕ್ತಪಡಿಸುತ್ತಿವೆ. ನಮ್ಮ ನೀತಿ ಸ್ಪಷ್ಟವಾಗಿದೆ. ರಾಜ್ಯ ಸರ್ಕಾರದ ಖಾತರಿಯೊಡನೆ, ಉತ್ತಮ ವ್ಯವಹಾರ ಪರಂಪರೆ, ನಿರ್ವಹಣೆ ಸಾಮರ್ಥ್ಯ ಮತ್ತು ತಾಂತ್ರಿಕ ಪರಿಣತಿಯಿರುವ ಖಾಸಗಿ ವಿದ್ಯುತ್ ಉತ್ಪಾದಕರನ್ನು ನಾವು ಪ್ರೋತ್ಸಾಹಿಸುತ್ತೇವೆ.

ಸಾರಿಗೆ

108. ರಾಜ್ಯದಲ್ಲಿರುವ ಎಲ್ಲ 175 ತಾಲ್ಲುಕುಗಳ ಪ್ರತಿ ತಾಲೂಕಿನಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಗ್ರಾಮೀಣ ರಸ್ತೆ ಸುಧಾರಣೆಗೆ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ. ಈ ವರ್ಷ ಈ ವಿಶೇಷ ಕಾರ್ಯಕ್ರಮದ ಅಂಗವಾಗಿ 10,000 ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು. ವಿಶ್ವಬ್ಯಾಂಕ್‌ನ ಜೊತೆ ಮಾತುಕತೆಗಳು ಪ್ರಗತಿಯಲ್ಲಿದ್ದು ಬೃಹತ್ ಹೆದ್ದಾರಿಗಳ ಯೋಜನೆ ಅಂತಿಮ ಹಂತದಲ್ಲಿದೆ. ರಸ್ತೆ ರಹಿತ 78 ಗ್ರಾಮಗಳಿಗೆ ಈ ವರ್ಷ ಜಲ್ಲಿ ರಸ್ತೆ ಸಂಪರ್ಕ ಕಲ್ಪಿಸಲಾಗುವುದು. ರಾಜ್ಯದ ಹೆದ್ದಾರಿಗಳ ಸುಧಾರಣೆಗೆ ಹಾಗೂ 100 ಸೇತುವೆಗಳನ್ನು ನಿರ್ಮಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು 200 ಕೋಟಿ ರೂಗಳನ್ನು ವ್ಯಯಿಸಲಿದೆ.

109. ಖಾಸಗಿ ವಲಯದಿಂದ ಜಾರಿಗೊಳ್ಳುತ್ತಿರುವ ಬೆಂಗಳೂರು-ಮೈಸೂರು ಮೂಲಸೌಲಭ್ಯ ಹೆದ್ದಾರಿ ಯೋಜನೆಗೆ ಎಲ್ಲ ಮಂಜೂರಾತಿಗಳನ್ನು ನೀಡಲಾಗಿರುವ ಸಂಗತಿ ಮಾನ್ಯ ಸದಸ್ಯರಿಗೆ ಸಂತಸ ತರಬಹುದು. ರಾಜ್ಯ ಸರ್ಕಾರದ ಒತ್ತಾಯದ ಮೇರೆಗೆ ಈ ಯೋಜನೆಯ ಕಾಮಗಾರಿಯನ್ನು ಬೆಂಗಳೂರು ಮತ್ತು ಮಂಡ್ಯ ಎರಡೂ ಕಡೆ ಏಕಕಾಲದಲ್ಲಿ ಆರಂಭಿಸಲಾಗುವುದು.

110. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಮೂರು ನಿಗಮಗಳನ್ನಾಗಿ ವಿಭಜಿಸಿದ ಮೇಲೆ ನಿಗಮದ ಕಾರ್ಯ ನಿರ್ವಹಣೆಯಲ್ಲಿ ಸುಧಾರಣೆಯಾಗಿದೆ. ಆದರೂ ಇಲ್ಲಿ ಸಾರಿಗೆ ಕಾರ್ಯಚರಣೆ ಮತ್ತು ಆರ್ಥಿಕ ಸುಧಾರಣೆಗೆ ಇನ್ನೂ ಅವಕಾಶವಿದೆ. ಈ ನಿಗಮಗಳು ವಾಣಿಜ್ಯ ಸಂಸ್ಥೆಯ ಮಾದರಿಯಲ್ಲಿ, ಸ್ವಾಯತ್ತ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಡೀಸೆಲ್ ದರದಲ್ಲಿ ಆಗುವ ಹೆಚ್ಚಳವನ್ನು ಸರಿದೂಗಿಸಲು ಪ್ರಯಾಣದರ ನಿಗದಿಯನ್ನು ಆಯಾ ನಿಗಮಗಳಿಗೆ ಬಿಡಬೇಕು.

ಭೂಮಿ

111. ಆಧುನಿಕ ತಂತ್ರಜ್ಞಾನ, ಸಾಮಾನ್ಯ ಜನತೆಯ ಬದುಕನ್ನು ಉತ್ತಮಗೊಳಿಸಬೇಕು ಎಂದು ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಸಾಮಾಜಿಕ ಬದುಕಿಗೆ ಅನ್ವಯವಾಗುವಂಥ ತಂತ್ರಜ್ಞಾನ ಕ್ರೋಢೀಕರಿಸಲು ನಿರ್ದಿಷ್ಟ ಯೋಜನೆಗಳನ್ನು ಸರ್ಕಾರವು ರೂಪಿಸಲಿದೆ. ರಾಜ್ಯದ ಪ್ರತಿಯೊಬ್ಬ ರೈತನಿಗೂ 2001ನೇ ಮಾರ್ಚ್ 31 ರೊಳಗೆ ಕಂಪ್ಯೂಟರ್ ನಮೂನೆಯ ಆರ್‌ಟಿಸಿ ಲಭ್ಯ ವಾಗುತ್ತದೆಂದು ದೃಢ ವಿಶ್ವಾಸದಿಂದ ಈ ಸದನದಲ್ಲಿ ಭರವಸೆ ನೀಡುತ್ತೇನೆ.

ಜವಳಿ

112. ಮಾಹಿತಿ ತಂತ್ರಜ್ಞಾನವನ್ನು ಅಪ್ಪಿಕೊಳ್ಳುವ ಭರದಲ್ಲಿ, ಜವಳಿಯಂತಹ ಸಾಂಪ್ರದಾಯಿಕ ಉದ್ದಿಮೆಗಳ ಬಗ್ಗೆ ಉಪೇಕ್ಷೆ ತಾಳಬಾರದು. ಜವಳಿ ಉದ್ಯಮ ರಾಜ್ಯದಲ್ಲಿ ಬೆಳೆಯಲು ಇನ್ನೂ ಹೆಚ್ಚಿನ ಅವಕಾಶವಿದೆ. ಜವಳಿ ಉದ್ಯಮವನ್ನು ಆಧುನೀಕರಣಗೊಳಿಸಲು ಕೇಂದ್ರ ಸರ್ಕಾರವು ಹೊಸದಾಗಿ ಜಾರಿಗೊಳಿಸಿರುವ ***'ತಂತ್ರಜ್ಞಾನ ಉನ್ನತೀಕರಣ ನಿಧಿ'*** ಯಲ್ಲಿ ದೊರೆಯುವ ರಿಯಾಯಿತಿ ಅನುದಾನವನ್ನು ನಾವು ಬಳಸಿಕೊಳ್ಳುತ್ತೇವೆ. ಬಟ್ಟೆಗಳ ವೆಟ್ ಪ್ರೋಸೆಸಿಂಗ್ ಘಟಕಗಳು, ವಿದ್ಯುತ್ ಮಗ್ಗ ಸಮುಚ್ಚಯ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕ ಉತ್ಪನ್ನ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಿದ್ದೇವೆ. ಬೆಂಗಳೂರು ನಗರವು ಸಿದ್ಧಪಡಿಸಿದ ಉಡುಪುಗಳು ರಫ್ತಿನಲ್ಲಿ ಮಂಚೂಣಿಯಲ್ಲಿದೆ. ಅದರ ಅಗ್ರಸ್ಥಾನವನ್ನು ಬಲಪಡಿಸಲಾಗುವುದು. ವೈಟ್‌ಫೀಲ್ಡ್‌ನಲ್ಲಿ ಆಪರೆಲ್ ಎಕ್ಸ್‌ಪೋರ್ಟ್ ಪಾರ್ಕ್ ಸ್ಥಾಪಿಸಲಾಗುತ್ತಿದ್ದು ಇದು ಅಪಾರ ಉದ್ಯೋಗಾವಕಾಶ ಸೃಷ್ಟಿಸಲಿದೆ.

ಕೈಗಾರಿಕೆ

113. ಭಾರತ ಮತ್ತು ವಿದೇಶ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವ ತನ್ನ ಕ್ರಿಯಾತ್ಮಕ ಕಾರ್ಯವನ್ನು ರಾಜ್ಯ ಸರ್ಕಾರ ಮುಂದುವರಿಸುತ್ತದೆ. ಭಾರತೀಯ ಕೈಗಾರಿಕಾ ಒಕ್ಕೂಟದ ಸಹಯೋಗದೊಡನೆ ರಾಜ್ಯ ಸರ್ಕಾರವು 2000 ದ ಜೂನ್‌ನಲ್ಲಿ ಒಂದು ವಿಶ್ವ ಬಂಡವಾಳ ಹೂಡಿಕೆದಾರರ ಮೇಳವನ್ನು ಸಂಘಟಿಸುತ್ತಿದೆ. ರಾಜ್ಯವು ಕೇವಲ ಸಾಂಪ್ರದಾಯಿಕ ಕೈಗಾರಿಕೆಗಳಿಗಲ್ಲದೆ ಮೌಲ್ಯವರ್ಧಿತ ಸೇವೆಗಳಿಗೂ ಪ್ರಮುಖ ಸ್ಥಾನವಾಗುವ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಕರ್ನಾಟಕವು ಸಂಶೋಧನೆ ಮತ್ತು ಅಭಿವೃದ್ಧಿಕ್ರಿಯೆಗಳಿಗೆ ಬಂಡವಾಳ ಹೂಡಿಕೆಯ ಬೃಹತ್ ಕೇಂದ್ರವಾಗಿ ರೂಪುಗೊಳ್ಳುತ್ತಿದೆ.

ಜ್ಞಾನಾಧಾರಿತ ಕೈಗಾರಿಕೆಗಳು

114. ಸಾಮಾನ್ಯ ಜನರ ಸೇವೆಯನ್ನು ಗುರಿಯನ್ನಾಗಿರಿಸಿಕೊಂಡಿರುವ ಸಹಸ್ರಮಾನದ ಐ.ಟಿ ನೀತಿ 'ಮಾಹಿತಿ' ಯನ್ನು ಇತ್ತೀಚಿಗೆ ಘೋಷಿಸಿದ್ದೇವೆ. ಸಾಮಾಜಿಕ ಗುರಿ ಸಾಧನೆ ಹಾಗೂ ಆಡಳಿತ ಸುಧಾರಣೆಯ ದಿಕ್ಕಿನಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಳಸಲು ಬಯಸಿದ್ದೇವೆ.

115. ಸರ್ಕಾರವು ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ಕಾಲೇಜುಗಳನ್ನು ಪ್ರೋತ್ಸಾಹಿಸುತ್ತದೆ. ವೃತ್ತಿಪರರು ಆರಂಭಿಸುವ ಮಾಹಿತಿ ತಂತ್ರಜ್ಞಾನದ ಖಾಸಗಿ ವಿಶ್ವವಿದ್ಯಾಲಯಗಳನ್ನೂ ನಾವು ಬೆಂಬಲಿಸುತ್ತೇವೆ. ಇತರೆ ಶಿಸ್ತುಗಳನ್ನು ಮಾಹಿತಿ ತಂತ್ರಜ್ಞಾನದ ಖಾಸಗಿ ವಿಶ್ವವಿದ್ಯಾಲಯಗಳನ್ನೂ ನಾವು ಬೆಂಬಲಿಸುತ್ತೇವೆ. ಇತರೆ ಶಿಸ್ತುಗಳನ್ನು ಮಾಹಿತಿ ತಂತ್ರಜ್ಞಾನಕ್ಕೆ ಪರಿವರ್ತಿಸಲು ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಉತ್ತೇಜನ ನೀಡಲಾಗುತ್ತದೆ. ಈಗಿರುವ ಶಿಕ್ಷಣ ದರ್ಜೆಯನ್ನು ಸುಧಾರಿಸಲು ಮಾಹಿತಿ ತಂತ್ರಜ್ಞಾನ ಶಿಕ್ಷಣ ಮತ್ತು ತರಭೇತಿಯ ರಾಜ್ಯ ಪರಿಷತ್ ಒಂದನ್ನು ಸ್ಥಾಪಿಸಲಾಗುವುದು. ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಪಡೆಯುವ ವಿದ್ಯರ್ಥಿಗಳು ಸಂಖ್ಯೆಯನ್ನು 9,620 ರಿಂದ 20,000 ಕ್ಕೆ ಹೆಚ್ಚಿಸಲಾಗುವುದು.

116. ತೆರಿಗೆ ವಿಧಿಸುವ ಬಗ್ಗೆ ಇರುವ ಅನಿಶ್ಚಯತೆ ಬಗ್ಗೆ, ಕೈಗಾರಿಕೆಗಳಿಗೆ ಇರುವ ಆಂತಕವನ್ನು ಸರ್ಕಾರ ಅರಿತಿದೆ. ಮಾಹಿತಿ ತಂತ್ರಜ್ಞಾನ, ಸಂವಹನ, ಜೈವಿಕ ತಂತ್ರಜ್ಞಾನ ಮತ್ತು ಔಷಧ ಸಂಶೋಧನೆ ಸೇರಿದಂತೆ ಜ್ಞಾನಾಧಾರಿತ ಕೈಗಾರಿಕೆಗಳಿಗೆ ಐದು ವರ್ಷಗಳ ಕಾಲ ತೆರಿಗೆ ಸ್ಥಿರತೆಯನ್ನು ತರಲಾಗುವುದೆಂದು ಘೋಷಿಸಲು ಹರ್ಷಿಸುತ್ತೇನೆ.

117. ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕ ಅಗ್ರಪಟ್ಟ ಗಳಿಸಿರುವ ವಿಷಯ ಸರ್ವಮಾನ್ಯವಾಗಿದೆ. ಈಗ ರಾಜ್ಯವು ಜೈವಿಕ ತಂತ್ರಜ್ಞಾನದಲ್ಲಿ ಮುಂದಿನ ಪರಿವರ್ತನೆಯನ್ನು ತರಲಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಜೈವಿಕ ತಂತ್ರಜ್ಞಾನದ ಕ್ರಾಂತಿಯನ್ನು ಮುನ್ನಡೆಸಲು ಅಗತ್ಯದ ತರಬೇತಿ ಮತ್ತು ಜ್ಞಾನ ರಾಜ್ಯದಲ್ಲಿದೆ. ಅತ್ಯಂತ ಮುಖ್ಯವಾದ ಜೈವಿಕ ತಂತ್ರಜ್ಞಾನ ಕಂಪನಿಗಳು ಮತ್ತು ಉತ್ತಮ ಸಂಶೋಧನಾ ಕೇಂದ್ರಗಳು ನಮ್ಮಲ್ಲಿವೆ. ಈ ಜ್ಞಾನವನ್ನು ಪೋಷಿಸಬೇಕಾದ ವಿಧಾನ, ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ಹಾಗೂ ಬಳಕೆದಾರರಿಗೆ ಈ ತಂತ್ರಜ್ಞಾನವನ್ನು ವರ್ಗಾಯಿಸುವ ವಿಧಾನಗಳನ್ನು ರೂಢಿಸುವುದು ಹೇಗೆಂಬುದೇ ಈಗ ನಮ್ಮ ಮುಂದಿರುವ ಸವಾಲಾಗಿದೆ. ಜೈವಿಕ ತಂತ್ರಜ್ಞಾನದ ಪ್ರೋತ್ಸಾಹಕ್ಕೆ ತೆಗೆದುಕೊಳ್ಳಬೇಕಾದ ವಿಧಾನಗಳ ಬಗ್ಗೆ ಸಲಹೆ ನೀಡಲು ಒಂದು 'ದಾರ್ಶನಿಕ ತಂಡ' ವನ್ನು (ವಿಷನ್ ಗ್ರೂಪ್) ರಚಿಸಲಿರುವ ಬಗ್ಗೆ ತಿಳಿಸಲು ಸಂತೋಷಿಸುತ್ತೇನೆ.

118. ಸರ್ಕಾರವು ಎಸ್.ಟಿ.ಪಿ.ಐ. ನ ಸಹಯೋಗದೊಂದಿಗೆ ಐ.ಟಿ ಉದ್ಯಮಿಗಳಿಗಾಗಿ ಪೋಷಣಾ (ಇನ್‌ಕ್ಯುಬೇಷನ್) ಕೇಂದ್ರಗಳನ್ನು ಸ್ಥಾಪಿಸುತ್ತಿದೆ. ಇದರ ಜೊತೆಗೆ ಐಸಿಐಸಿಐನ ಸಹಯೋಗದೊಂದಿಗೆ ಒಂದು ಪೋಷಣಾ ಕೇಂದ್ರವನ್ನು ಮಾಹಿತಿ ತಂತ್ರಜ್ಞಾನಕ್ಕೂ ಮತ್ತು ಒಂದು ಕೇಂದ್ರವನ್ನು ಜೈವಿಕ ತಂತ್ರಜ್ಞಾನಕ್ಕಾಗಿಯೂ ಸ್ಥಾಪಿಸಲಾಗುವುದು. ಐಸಿಐಸಿಐ ಕಂಪನಿಯು ಬೆಂಗಳೂರಿನ ಇಂಡಿಯನ್

ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಪ್ರೊಫೆಸರ್ ಪೀಠವೊಂದನ್ನು ಸ್ಥಾಪಿಸಲಿದೆ ಎನ್ನುವ ಸಂಗತಿಯನ್ನು ತಿಳಿಸಲು ನನಗೆ ಸಂತಸವಾಗುತ್ತಿದೆ.

ಪ್ರವಾಸೋದ್ಯಮ

119. ನನ್ನ ಸರ್ಕಾರವು ಪ್ರವಾಸೋದ್ಯಮದಲ್ಲಿರುವ ಅಪಾರ ಉದ್ಯೋಗಾವಕಾಶವನ್ನು ಗುರುತಿಸಿದೆ. ಪ್ರವಾಸೋದ್ಯಮವು ಹಿಂದುಳಿದ ಪ್ರದೇಶಗಳಲ್ಲಿ ಬೆಳವಣಿಗೆಯನ್ನು ಉತ್ತೇಜಿಸುತ್ತಿದೆ. ಹಿಂದಿನ ಸರ್ಕಾರವು ಒಂದು ಪ್ರವಾಸೋದ್ಯಮ ನೀತಿಯನ್ನು ಘೋಷಿಸಿತ್ತು. ಈ ನೀತಿಯನ್ನು ಈಗ ನಿರ್ದಿಷ್ಟ ಯೋಜನೆಗಳಾಗಿ ಪರಿವರ್ತಿಸಲಾಗುವುದು. ಈ ವಲಯಕ್ಕೆ ಖಾಸಗಿಯವರನ್ನು ಕರೆತರಲು ನಾವು ನಮ್ಮೆಲ್ಲ ಪ್ರಯತ್ನಗಳನ್ನು ಮಾಡುತ್ತೇವೆ. ಪರಿಸರ ಪ್ರವಾಸೋದ್ಯಮ ಮತ್ತು ಕರಾವಳಿ ಪ್ರವಾಸೋದ್ಯಮಕ್ಕೆ ವಿಶೇಷ ಒತ್ತು ನೀಡಲಾಗುವುದು.

ಬೆಂಗಳೂರು

120. ಮಾನ್ಯರೆ, ಬೆಂಗಳೂರು ಅಭಿವೃದ್ಧಿ ಕಾರ್ಯಪಡೆಯನ್ನು ರಚಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. ರಾಜ್ಯದ ರಾಜಧಾನಿಯಲ್ಲಿ ಜೀವನ ಮಟ್ಟ ಸುಧಾರಣೆಯ ನಿಟ್ಟಿನಲ್ಲಿ ವಿವಿಧ ರಂಗಗಳಲ್ಲಿ ಕ್ಷಿಪ್ರ ಕಾರ್ಯಗಳನ್ನು ಕಾರ್ಯಪಡೆಯು ಆರಂಭಿಸಿದೆ. ಸರ್ಕಾರಿ-ಖಾಸಗಿ ಪಾಲುದಾರಿಕೆಗೆ ಇದೊಂದು ಅನುಕರಣೀಯ ಉದಾರಣೆಯೆಂದು ತಿಳಿಸಲು ಬಯಸುತ್ತೇನೆ. ಇಂಥ ಸಂಯೋಗವನ್ನು ನನ್ನ ಸರ್ಕಾರ ಇತರೆ ನಗರಗಳಲ್ಲಿ ಅನುಕರಿಸಲಿದೆ.

121. ಈಗಾಗಲೇ ಕಾರ್ಯಪಡೆಯು ಆರಂಭಿಸಿರುವ ಕಾರ್ಯಗಳ ಜೊತೆಗೆ ನಗರದ ಇಕ್ಕಟ್ಟಿನ ಪರಿಸ್ಥಿತಿಯ ನಿವಾರಣೆಗೆ ಎರಡು ಕ್ರಮಗಳನ್ನು ಮುಂದಿಡುತ್ತಿದ್ದೇನೆ. ಈಗಿರುವ ರೇಸ್‌ಕೋರ್ಸ್ ಅನ್ನು ಟರ್ಫ್‌ಕ್ಲಬ್ ಜೊತೆಯಲ್ಲಿ ನಗರ ಮಿತಿಯಿಂದಾಚೆಗಿನ ಪ್ರದೇಶಕ್ಕೆ ಸ್ಥಳಾಂತರಿಸುವ ಯೋಜನೆಯನ್ನು ಮುಂದಿಟ್ಟಿದ್ದೇನೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಈ ರೀತಿ ತೆರವಾದ ಜಾಗವನ್ನು ಯಾವುದೇ ನಿರ್ಮಾಣ ಕಾರ್ಯಗಳಿಗೆ ಬಳಸಿಕೊಳ್ಳದೆ, ನಗರದ ಆರೋಗ್ಯಕ್ಕೆ ಅಗತ್ಯವಾದ ಹಸಿರು ಬಯಲಾಗಿಯೇ ಉಳಿಸಿಕೊಳ್ಳಲಾಗುವುದೆಂದು ಸ್ಪಷ್ಟಪಡಿಸುತ್ತೇನೆ. ಇದೇ ರೀತಿಯಲ್ಲಿ ಸೂಕ್ತವಾದ ಪ್ರದೇಶಕ್ಕೆ ಸೆಂಟ್ರಲ್ ಜೈಲನ್ನು ಸ್ಥಳಾಂತರಿಸಲಾಗುವುದು.

122. ಸಾರ್ವಜನಿಕ ಸೇವೆಗಳ ದಕ್ಷತೆಯನ್ನು ಸುಧಾರಿಸಿ ಜನಪರ ಆಡಳಿತವನ್ನು ರೂಪಿಸಲು ಬೆಂಗಳೂರು ಮಹಾನಗರ ಪಾಲಿಕೆ ಅನೇಕ ಕ್ರಮಗಳನ್ನು ಆರಂಭಿಸಿದೆ. ಇವುಗಳಲ್ಲಿ ಸ್ವಯಂ ಆಸ್ತಿ ತೆರಿಗೆ ಘೋಷಣೆ, ವಲಯ ಮಟ್ಟದ ಆಡಳಿತ, ಕೊಳಗೇರಿಗಳನ್ನು ಬೃಹತ್ ಪ್ರಮಾಣದಲ್ಲಿ ಸುಧಾರಿಸುವುದು, ನಗರದ ಹಳೆಯ 'ಪೇಟೆ' ಗಳಿಗೆ ಕಾಯಕಲ್ಪ ಮುಂತಾದವು ಸೇರಿವೆ. ಅಗತ್ಯ ಸಂಪನ್ಮೂಲಗಳನ್ನು ರೂಢಿಸಲು ವಾಹನಗಳ ಮೇಲೆ 50 ರಿಂದ 100 ರೂಪಾಯಿ ಮೂಲಭೂತ ಸೌಲಭ್ಯ ಶುಲ್ಕ ಹಾಗೂ ಸಾಲಿಡ್ ವೇಸ್ಟ್ ನಿರ್ವಹಣೆಗೆ ಆಸ್ತಿ ತೆರಿಗೆಯಲ್ಲಿ ಶುಲ್ಕ ವಿಧಿಸುವ

ಮೂಲಕ ಸಂಗ್ರಹಿಸಲಾಗುವುದು. ಕರ್ನಾಟಕ ಪುರಸಭೆಗಳ ಕಾಯ್ದೆಗೆ ಈ ನಿಟ್ಟಿನಲ್ಲಿ ಬೇಗನೆ ತಿದ್ದುಪಡಿಗಳನ್ನು ತರಲಾಗುವುದು.

123. ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಸಂಗ್ರಹಣೆ ಪ್ರತಿ ವರ್ಷ ಶೇ. 2 ರಷ್ಟು ವೃದ್ಧಿಯಾಗುತ್ತಿತ್ತು. ಕಳೆದ ಆರು ತಿಂಗಳಲ್ಲಿ ನಮ್ಮ ನಿರಂತರ ದಣಿವರಿಯದ ಪ್ರಯತ್ನದಿಂದ ಆಸ್ತಿ ತೆರಿಗೆ ಸಂಗ್ರಹಣೆ ದ್ವಿಗುಣವಾಗಿದ್ದು ಮಾರ್ಚ್ ಅಂತ್ಯದ ವೇಳೆಗೆ 120 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. 2000-2001ನೇ ಸಾಲಿನಲ್ಲಿ ಆಸ್ತಿ ತೆರಿಗೆ ವೃದ್ಧಿಯು ಶೇ.50 ರಷ್ಟಾಗಲಿದೆ. ಈ ಪ್ರಕ್ರಿಯೆ ಮುಂದುವರಿಯಲಿದೆ.

124. ಸರ್ಕಾರಿ ಕಛೇರಿಗಳು ನಗರದಾದ್ಯಂತ ಹಂಚಿ ಹೋಗಿದ್ದು ಸರ್ಕಾರವು ಇವುಗಳಿಗಾಗಿ ವಾರ್ಷಿಕ 5.5 ಕೋಟಿ ರೂ.ಗಳ ಬಾಡಿಗೆಯನ್ನು ತೆರುತ್ತಿದೆ. ಈ ಎಲ್ಲ ಕಛೇರಿಗಳನ್ನು ಒಂದೇ ಕಟ್ಟಡದಡಿಯಲ್ಲಿ ತರುವ ಸಲುವಾಗಿ ನಾನು ವಿಧಾನಸೌಧ-ದಕ್ಷಿಣ ಬ್ಲಾಕ್‌ನ್ನು ನಿರ್ಮಿಸಲು ಉದ್ದೇಶಿಸಿದ್ದೇನೆ. ಇದು ಸಾರ್ವಜನಿಕರಿಗೆ ತುಂಬಾ ಉಪಯೋಗವಾಗಲಿದೆ. ಉದ್ದೇಶಿತ ನೂತನ ಕಟ್ಟಡವು ವಿಧಾನಸೌಧದ ವಾಸ್ತು ಸೌಂದರ್ಯಕ್ಕೆ ಹೊಂದಾಣಿಕೆಯಾಗುವಂತೆ ಇರುತ್ತದೆ.

ಆಡಳಿತ ಪಾರದರ್ಶಕತೆ

125. ಎಲ್ಲಾ ಹಂತಗಳಲ್ಲೂ ಪಾರದರ್ಶಕತೆ ತರಲು ನನ್ನ ಸರ್ಕಾರ ಬದ್ಧವಾಗಿದೆ. ಇದು ರಾಜ್ಯದ ಜನತೆಗೆ ಸರ್ಕಾರದ ಬಗ್ಗೆ ವಿಶ್ವಾಸ ಮೂಡಿಸುತ್ತದೆ. ಇದುವರೆವಿಗೂ ಮುಸುಕಿನಲ್ಲಿ ನಡೆಯುತ್ತಿದ್ದ ಆಡಳಿತ ವಿಧಾನವು ಜನರ ಕಣ್ಣಿಗೆ ಕಾಣುವಂತೆ ಮಾಡಲು ಮಾಹತಿ-ತಂತ್ರಜ್ಞಾನದ ಶಕ್ತಿಯನ್ನು ಬಳಸಿಕೊಳ್ಳಲಾಗುವುದು. ಈ ಅಧಿವೇಶನದಲ್ಲಿಯೇ ಮಾಹಿತಿ ಪಡೆಯುವ ಹಕ್ಕು ಮಸೂದೆಯನ್ನು ಮಂಡಿಸುತ್ತೇನೆ. ಹಿಂದಿನ ಅರ್ಥ ಸಚಿವರು ಕಳೆದ ವರ್ಷ ಮಂಡಿಸಿದ ಮುಂಗಡ ಪತ್ರದಲ್ಲಿ ಹೇಳಿರುವ "ಟೆಂಡರ್ ಮತ್ತು ಖರೀದಿಯಲ್ಲಿ ಪಾರದರ್ಶಕತೆ ಕುರಿತ ಕರ್ನಾಟಕ ಕಾಯ್ದೆ" ಯನ್ನು ನಾನು ಮತ್ತೊಮ್ಮೆ ಪ್ರಸ್ತಾಪಿಸುತ್ತೇನೆ. ರಾಜ್ಯದ ಜನತೆಗೆ ಒಳ್ಳೆಯದಾಗುವುದಾದರೆ ಅನ್ಯ ಪಕ್ಷಗಳ ನಾಯಕರೂ ಸೇರಿದಂತೆ ಬೇರೆಯವರ ಆಲೋಚನೆಗಳನ್ನು ಅಳವಡಿಸಿಕೊಳ್ಳಲು ನನಗೆ ಯಾವ ಸಂಕೋಚವೂ ಇಲ್ಲ.

126. ನಾನು ಎಲ್ಲ ಸರ್ಕಾರಿ ಕಛೇರಿಗಳಲ್ಲಿ ಹೊಸ ಕಾರ್ಯ ಶೈಲಿಯನ್ನು ಜಾರಿಗೆ ತರಲು ನಿರ್ಧರಿಸಿದ್ದೇನೆ. ಸರ್ಕಾರ ಜನರ ಜೊತೆ ಹೆಚ್ಚು ವಿನಯವಂತಿಕೆಯಿಂದ ಇರಬೇಕು. ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿ ಜನರಿಗೆ ಉತ್ತಮ ಸೇವೆ ಒದಗಿಸಬೇಕು. ಜಟಿಲವಾದ ನಿಯಮಗಳು ಮತ್ತು ನಿಯಂತ್ರಣಗಳ ನಡುವೆ ಕಾರ್ಯ ನಿರ್ವಹಿಸಬೇಕಾಗಿರುವ ಸರ್ಕಾರದ ಪರಿಸ್ಥಿತಿಯ ಬಗ್ಗೆ ನನಗೆ ಅರಿವಿದೆ. ವಿಧಾನಸೌಧದಲ್ಲಿನ ಒಂದು ಕಡತವು ಅಂತಿಮ ತೀರ್ಮಾನ ಕೈಗೊಂಡು ನಾಗರೀಕರ ಕೈ ತಲುಪಬೇಕಾದರೆ 15 ರಿಂದ 25 ಹಂತಗಳನ್ನು ದಾಟಬೇಕು. ಈ ಹಿನ್ನೆಲೆಯಲ್ಲಿ ಕರ್ನಾಟಕದ

ನಾಗರೀಕರಿಗೆ ಉತ್ತಮ ಸೇವೆ ಒದಗಿಸಲು ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಶಿಫಾರಸ್ಸು ಮಾಡಲು ಆಡಳಿತ ಸುಧಾರಣಾ ಆಯೋಗವೊಂದನ್ನು ಸರ್ಕಾರವು ರಚಿಸುತ್ತಿದೆ. ನಾನು ಸರ್ಕಾರಿ ನೌಕರರ ನಿಜವಾದ ಮತ್ತು ನ್ಯಾಯ ಸಮ್ಮತವಾದ ದೂರುಗಳ ಬಗ್ಗೆ ಸೂಕ್ಷ್ಮತೆಯಿಂದ ಆಲಿಸುತ್ತೇನೆ. ರಾಜ್ಯ ಸರ್ಕಾರದ ಅಧಿಕೃತ ವೇತನ ಸಮಿತಿ 1998 ರ ಶಿಫಾರಸ್ಸುಗಳಿಂದ ಉದ್ಭವಿಸುರುವ ಅಸಮತೆಗಳನ್ನು ನಿವಾರಿಸಬೇಕೆಂದು ಸರ್ಕಾರಿ ನೌಕರರು ಮುಂದಿಟ್ಟಿರುವ ಬೇಡಿಕೆಯನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲು ಉದ್ದೇಶಿಸಿದ್ದೇನೆ.

127. ಸರ್ಕಾರದ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸ್ವತಂತ್ರ ಸಂಸ್ಥೆಗಳ ಮೂಲಕ ಸಮಗ್ರ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಾನು ಜಾರಿಗೊಳಿಸುತ್ತೇನೆ. ಇದು ನಮ್ಮ ಯೋಜನೆಗಳನ್ನು ಜಾರಿಗೊಳಿಸುವ ಸಂಸ್ಥೆಗಳ ಗುಣಮಟ್ಟ ಸುಧಾರಿಸಲು ನೆರವಾಗುತ್ತದೆ.

128. ಸಭಾಧ್ಯಕ್ಷರೆ, ಅಮೂಲ್ಯವಾದ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಕ್ರಿಯಾಶೀಲ ಜಾಲವೇ ಕರ್ನಾಟಕದಲ್ಲಿದೆ. ಸ್ವಯಂ ಸೇವಾ ಸಂಸ್ಥೆಗಳು ಅಭಿವೃದ್ಧಿಯ ಪಾಲುದಾರರೆಂದು ನಾವು ಭಾವಿಸಿದ್ದೇವೆ. ಆ ಪ್ರಕಾರ, ಸ್ವಯಂ ಸೇವಾ ಸಂಸ್ಥೆಗಳಿಗಾಗಿ ನಾನು ಒಂದು **'ಸೇವಾ ಮಿತ್ರ'** ಎನ್ನುವ ಕೇಂದ್ರವನ್ನು ಸ್ಥಾಪಿಸುತ್ತಿದ್ದೇನೆ. ಈ ಕೇಂದ್ರವು ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿ ಎದುರಾಗುವ ಸಮಸ್ಯೆಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಪರವಾಗಿ ಬಗೆಹರಿಸಲು ಯತ್ನಿಸುತ್ತದೆ.

ಕನ್ನಡ ಅಭಿವೃದ್ಧಿ

129. ಜಾನಪದ ಲೋಕದ ಸಹಯೋಗದೊಡನೆ ರಾಮನಗರದ ಬಳಿ ಒಂದು ಮಾದರಿ ಕಲಾ ಸಮುಚ್ಛಯವನ್ನು ಸ್ಥಾಪಿಸಲಾಗುವುದು. ಈ ಸಮುಚ್ಛಯವು ನಮ್ಮ ಬಹುಮುಖಿ ಜಾನಪದ ಸಂಸ್ಕೃತಿಯನ್ನು ಸಂರಕ್ಷಿಸಲಿದೆ. ಅಲ್ಲದೆ ಪ್ರವಾಸಿ ತಾಣವಾಗಿ ಉದಯವಾಗಲಿದೆ.

130. ಮಾಹಿತಿ ನೀತಿಯ ಧ್ಯೇಯೋದ್ದೇಶಗಳಲ್ಲಿ ಕನ್ನಡಕ್ಕೆ ಪ್ರೋತ್ಸಾಹ ನೀಡುವುದು ಪ್ರಮುಖವಾಗಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಕನ್ನಡ ಅಭಿವೃದ್ಧಿ ಪ್ರಧಿಕಾರ, ಕನ್ನಡ ಗಣಕ ಪರಿಷತ್ ಹಾಗೂ ಕನ್ನಡ ಸಂಶೋಧಕರ ಸಹಕಾರದಿಂದ ಕರ್ನಾಟಕ ಸರ್ಕಾರವು ಎಲ್ಲಾ ಬಗೆಯ ಕನ್ನಡ ಸಾಫ್ಟ್‌ವೇರ್‌ಗಳಿಗೆ ಸಮಾನ ರೂಪಕ ಕೀ ಬೋರ್ಡ್ ರೂಪಿಸಿದೆ. ಕನ್ನಡ ಸಾಫ್ಟ್‌ವೇರ್ ಅಭಿವೃದ್ಧಿ ಕ್ಷಿಪ್ರಗತಿಯಲ್ಲಿ ಆಗುವಂತೆ ಮಾಡಲು ನಮೂನೆ ಮತ್ತು ಸಂಕೇತಗಳನ್ನು ನಿರ್ಧಿಷ್ಟಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುತ್ತಿದೆ.

131. ಕೇರಳ, ಮಹಾರಾಷ್ಟ್ರ, ಆಂದ್ರಪ್ರದೇಶ, ಗೋವ ಮತ್ತು ತಮಿಳುನಾಡು ಗಡಿ ಪ್ರದೇಶಗಳ ಕನ್ನಡಿಗರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಆಯೋಗವೊಂದನ್ನು ರಚಿಸಲ್ಲಿದ್ದೇವೆ. ಈ ಆಯೋಗವು ಮುಂದಿನ ನಾಲ್ಕು ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.

ಗೃಹ

132. ವಸತಿ ನಿರ್ಮಾಣಕ್ಕಾಗಿ, ವಿಶೇಷವಾಗಿ ಪೊಲೀಸರ ಗೃಹ ನಿರ್ಮಾಣಕ್ಕೆ ಈ ವರ್ಷ 160 ಕೋಟಿ ರೂಪಾಯಿಗಳನ್ನು ನೀಡಲು ಹುಡ್ಕೊ ಹಾಗೂ ಎಚ್.ಡಿ.ಎಫ್.ಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. ಮಾಹಿತಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿ ಪೊಲೀಸ್ ವ್ಯವಸ್ಥೆಯನ್ನು ಆಧುನೀಕರಣಗೊಳಿಸಲಾಗುವುದು. ರಾಜ್ಯ ಅಪರಾಧ ದಾಖಲೆ ಕಾರ್ಯಾಲಯವನ್ನು ಅಭಿವೃದ್ಧಿಪಡಿಸಲಾಗುವುದು. ಆರಂಭದಲ್ಲಿ ಬೆಂಗಳೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಿಗೆ ನೆಟ್‌ವರ್ಕ್ ಸಂಪರ್ಕ ಕಲ್ಪಿಸಲಾಗುವುದು. ಬೇಹುಗಾರಿಕೆ ವಿಭಾಗದ ಸಾಮರ್ಥ್ಯವನ್ನು ವೃದ್ಧಿಸಲಾಗುವುದು.

ರಾಜ್ಯದ ಹಣಕಾಸು

133. ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಹಣಕಾಸು ಪರಿಸ್ಥಿತಿ ಉತ್ತಮವಾಗಿಯೇ ಇದೆ. ಸದ್ಯಕ್ಕೆ ನಾವು ಆರ್ಥಿಕ ಬಿಕ್ಕಟ್ಟಿನ ಸ್ಥಿತಿಯಲ್ಲಿಲ್ಲ. ಆದರೆ ಆದರಿಂದ ಮೈಮರೆಯುವಂತೆಯೂ ಇಲ್ಲ. ಕೃಷ್ಣ ಭಾಗ್ಯ ಜಲ ನಿಗಮದ ಬಾಂಡ್‌ಗಳ ಮರುಪಾವತಿ ಹಾಗೂ ಐದನೇ ವೇತನ ಆಯೋಗದ ಶಿಫಾರಸ್ಸು ಜಾರಿಯಿಂದ ನಮ್ಮ ಆರ್ಥಿಕ ಪರಿಸ್ಥಿತಿ ಗಂಭೀರವಾಗಿದೆ. ಇದು ಮುಂದಿನ ಮೂರು ವರ್ಷಗಳ ಕಾಲ ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ತೀವ್ರ ಒತ್ತಡ ಹೇರಲಿದೆ. ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಜನರಿಗೆ ಮಾಹಿತಿ ನೀಡುವುದು ಅಗತ್ಯ. ಅನುತ್ಪಾದಕ ಮತ್ತು ಅಭಿವೃದ್ಧಿಯಲ್ಲದ ಬಾಬ್ತುಗಳಿಗೆ ಮಾಡುತ್ತಿರುವ ಖರ್ಚುಗಳನ್ನು ತೀವ್ರವಾಗಿ ತಗ್ಗಿಸಲು ಅಗತ್ಯವಾದ ಕ್ರಮಗಳನ್ನು ಒಮ್ಮತದಿಂದ ರೂಢಿಸಲೇಬೇಕಾಗಿದೆ. ಆದ್ದರಿಂದಲೇ ನಾನು ಮಾರ್ಚ್ 31 ರಂದು ರಾಜ್ಯದ ಹಣಕಾಸು ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಶ್ವೇತ ಪತ್ರ ಮಂಡಿಸುತ್ತಿದ್ದೇನೆ. ಸಾಮಾಜಿಕ ಮತ್ತು ಭೌತಿಕ ಮೂಲಸೌಲಭ್ಯ ಹಾಗೂ ಕೃಷಿಯಲ್ಲಿ ಬಂಡವಾಳ ಹೂಡುವ ರಾಜ್ಯದ ಸಾಮರ್ಥ್ಯವನ್ನು ವೃದ್ಧಿಸುವುದೇ ನಮ್ಮ ಆರ್ಥಿಕ ಪುನರ್ರಚನಾ ನೀತಿಯ ಧ್ಯೇಯವಾಗಿದೆ. ಮಧ್ಯಾವಧಿ ಹಣಕಾಸು ನಿರ್ವಹಣಾ ನೀತಿಯನ್ನು ಸದನದಲ್ಲಿ ಮುಂದೆ ಮಂಡಿಸಲಾಗುವುದು.

134. ಆದಾಯ ಕೊರತೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವ ಉದ್ದೇಶದಿಂದ ಇನ್ನು ಮುಂದೆ ಹಿಂದೆ ಸರಿಯುವಂತಿಲ್ಲ. 2004ನೇ ಇಸವಿ ವೇಳೆಗೆ ಆದಾಯ ಕೊರತೆಯನ್ನು ನಿರ್ಮೂಲನಗೊಳಿಸಲು ನಾನು ಉದ್ದೇಶಿಸಿದ್ದೇನೆ. ಇದರ ಜೊತೆಯಲ್ಲಿ ಆರ್ಥಿಕ ಕೊರತೆಯನ್ನು ಜಿಎಸ್‌ಡಿಪಿಯ ಶೇಕಡಾ 3 ರಷ್ಟಕ್ಕೆ ತಂದು ನಿಲ್ಲಿಸಿ ಸಾಕಷ್ಟು ಬಂಡವಾಳ ರೂಢಿಸುವ ಉದ್ದೇಶ ಸರ್ಕಾರಕ್ಕಿದೆ. ಇದು ಕೃಷಿ, ನೀರಾವರಿ, ಶಿಕ್ಷಣ ಮತ್ತು ಇತರ ಪ್ರಮುಖ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳ ಹೂಡಲು ಪ್ರೇರೇಪಿಸುತ್ತದೆ. ಪರಿಣಾಮವಾಗಿ ರಾಜ್ಯದ ಸಾಮಾನ್ಯ ಜನತೆಯ ಬದುಕು ಹಸನಾಗುತ್ತದೆ.

135. ರಾಜ್ಯವು ಈವರೆಗೆ ದೂರದೃಷ್ಟಿಯುಳ್ಳ ಸಾಲ ನೀತಿಯನ್ನು ಅನುಸರಿಸುತ್ತಾ ಬಂದಿದೆ.

ಸರ್ಕಾರಿ ಖಾತರಿಗಳ ಮೇಲೆ ನಿರ್ಬಂಧ ಹೇರುವ ಕಾಯಿದೆಯನ್ನು ಈಗಾಗಲೆ ಜಾರಿಗೊಳಿಸಿರುವುದು ಮಾನ್ಯ ಸದಸ್ಯರಿಗೆ ತಿಳದೇ ಇದೆ. ಆದ್ದರಿಂದ ನಾವು ಯಾವುದೇ ಪರಿಸ್ಥಿತಿಯಲ್ಲಿ ಹಣಕಾಸಿನ ದುಂದು ವೆಚ್ಚಕ್ಕೆ ಕೈ ಹಾಕಕೂಡದು. ನಮ್ಮ ಸಾಲ ಪಡೆಯುವ ಕಾರ್ಯಕ್ರಮ ಆದ್ಯತಾ ವಲಯಕ್ಕೆ ಮತ್ತು ಆಸ್ತಿ ನಿರ್ಮಾಣಕ್ಕೆ ಮಾತ್ರ ಸೀಮಿತಗೊಳ್ಳುತ್ತದೆ ಎನ್ನುವುದನ್ನು ನಾನು ಇಲ್ಲಿ ಹೇಳಲು ಇಚ್ಚಿಸುತ್ತೇನೆ.

136. ಕಳೆದ ಆರು ವರ್ಷಗಳಿಂದ ಎಂಬತ್ತು ಸಾವಿರ ಸರ್ಕಾರಿ ಹುದ್ದೆಗಳು ಖಾಲಿಯಿವೆ. 50-60 ರ ದಶಕದಲ್ಲಿ ಇದ್ದ ಪರಿಸ್ಥಿತಿ ಹಾಗೂ ಆಗಿನ ನಿಯಮಾನುಸಾರ ಸೃಷ್ಟಿಸಿದ್ದ ಉದ್ಯೋಗಗಳನ್ನು ಹೊಸ ನಿರ್ವಹಣಾ ವಿಧಾನ ಹಾಗೂ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಈಗ ಬದಲಾಯಿಸಬೇಕಾಗಿದೆ. ಈಗ ಖಾಲಿಯಿರುವ ಒಟ್ಟು ಹುದ್ದೆಗಳಲ್ಲಿ ಶೇ. 20 ರಷ್ಟನ್ನು ಉಳಿಸಿಕೊಂಡು ಶೇ. 80 ರಷ್ಟು ಹುದ್ದೆಗಳನ್ನು ರದ್ದುಮಾಡಲು ಬಯಸಿದ್ದೇನೆ. ನೇಮಕಾತಿಯನ್ನು ನಾವು ಸ್ಥಗಿತಗೊಳಿಸುತ್ತಿಲ್ಲ. ಆದರೆ ಮುಂದಿನ ನೇಮಕಾತಿಗಳು ಅವಶ್ಯಕತೆಯನ್ನು ಆಧರಿಸುತ್ತವೆ. ಇದನ್ನು ನಾನು ಪುನರುಚ್ಚರಿಸುತ್ತೇನೆ. ನಾವು ಉದ್ಯೋಗ ನೇಮಕಾತಿಯನ್ನು ಸ್ಥಗಿತಗೊಳಿಸುತ್ತಿಲ್ಲ. ಆದರೆ ಮುಂದಿನ ನೇಮಕಾತಿಗಳು ಅವಶ್ಯಕತೆಯನ್ನು ಆಧರಿಸಿ ಮಾತ್ರವೇ ನಡೆಯುತ್ತವೆ.

137. ನಮ್ಮ ಆದಾಯದ ಶೇ. 75 ಭಾಗವನ್ನು ಬದ್ಧತೆಯ ವೆಚ್ಚಗಳೇ ಕಬಳಿಸಿಬಿಡುತ್ತವೆ ಎಂದರೆ ಮಾನ್ಯ ಸದಸ್ಯರಿಗೆ ಆಶ್ಚರ್ಯವಾಗಬಹುದು. ನಮ್ಮ ಆದಾಯದಲ್ಲಿ ಶೇ. 50ರಷ್ಟು ಭಾಗ ವೇತನ ಮತ್ತು ಪಿಂಚಣಿಗಳಿಗೇ ಹೋಗುತ್ತದೆ. ಇದನ್ನು ನಾವು ನಿರಂತರವಾಗಿ ಹೊರಲಾಗುವುದಿಲ್ಲ. ಇದು ರಾಜ್ಯದ ಬಡಜನತೆಯ ಹಿತಾಸಕ್ತಿಗೆ ಮಾರಕವಾಗಿದೆ. ಸಮಾಜದ ಬಡವರು ಮತ್ತು ದುರ್ಬಲರು ಹಾಗೂ ರಾಜ್ಯದ ಹಿಂದುಳಿದ ಪ್ರದೇಶಗಳ ಅಗತ್ಯಗಳಿಗೆ ಅನುಗುಣವಾಗಿ ನಮ್ಮ ಸಾರ್ವಜನಿಕ ವೆಚ್ಚವನ್ನು, ನಾವು ಮಿತಿಗೊಳಿಸಿಕೊಳ್ಳಬೇಕು. ಇದು ಬಡತನ ನಿರ್ಮೂಲನೆಯ ದಿಕ್ಕಿನಲ್ಲಿ ಕೈಗೊಂಡ ಮಹಾನ್‌ಕಾರ್ಯ ಎನಿಸುತ್ತದೆ.

138. ಈ ಎಲ್ಲಾ ತೊಂದರೆಗಳ ನಡುವೆಯೂ, ನಮ್ಮ 2000-2001 ರ ವಾರ್ಷಿಕ ಯೋಜನಾ ವೆಚ್ಚವನ್ನು 7274 ಕೋಟಿ ರೂ.ಗಳಿಗೆ ನಿಗದಿಗೊಳಿಸಿರುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತಸವಾಗುತ್ತಿದೆ. 1999-2000ದ ಪರಿಷ್ಕೃತ ವಾರ್ಷಿಕ ಯೋಜನಾ ವೆಚ್ಚದ ಮೊತ್ತವಾದ 5231 ಕೋಟಿ ರೂ.ಗಳಿಗೆ ಇದನ್ನು ಹೋಲಿಸಿ ನೋಡಬಹುದಾಗಿದೆ. ಈ ಶೇಕಡಾ 40 ರ ಬೆಳವಣಿಗೆಯು ಈ ಹಿಂದೆ ಎಂದೂ ಆಗಿದ್ದಿಲ್ಲ. ಇದು ಗ್ರಾಮೀಣ ಕರ್ನಾಟಕದ ಬಗೆಗಿರುವ ನಮ್ಮ ಕಾಳಜಿ, ಮತ್ತು ಬದ್ಧತೆಯನ್ನು ಪ್ರತಿನಿಧಿಸುತ್ತದೆ. ನೀರಾವರಿ, ಗ್ರಾಮೀಣ ಅಭಿವೃದ್ಧಿ, ಸಾಮಾನ್ಯ ಶಿಕ್ಷಣ, ಆರೋಗ್ಯ ನೀರು ಪೂರೈಕೆ ಮತ್ತು ನೈರ್ಮಲ್ಯ ಹಾಗೂ ಸಮಾಜ ಕಲ್ಯಾಣ ಕ್ಷೇತ್ರಗಳಿಗೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದುನ್ನು ಅನುಬಂಧದಲ್ಲಿ ನೀವು ಗಮನಿಸಬಹುದಾಗಿದೆ.

139. 2001ನೇ ಏಪ್ರಿಲ್‌ನಿಂದ ಮೌಲ್ಯವರ್ಧಿತ ತೆರಿಗೆ ಜಾರಿಗೊಳಿಸುವ ಬಗ್ಗೆ ನಾನೀಗಾಗಲೇ ಹೇಳಿದ್ದೇನೆ. ವಿವರಣಾತ್ಮಕ ರಸ್ತೆ ನಕಾಶೆ ಸಿದ್ದಪಡಿಸಲು ತೆರಿಗೆ ಸುಧಾರಣೆ ಆಯೋಗವೊಂದನ್ನು

ರಚಿಸಲಾಗುತ್ತಿದೆ. ಎರಡನೇ **'ರಾಜ್ಯ ಆರ್ಥಿಕ ಆಯೋಗ'** ವನ್ನು ರಚಿಸುತ್ತಿರುವ ಮೊದಲ ರಾಜ್ಯ-ಕರ್ನಾಟಕ. ಸ್ಥಳೀಯ ಸಂಸ್ಥೆಗಳು ಧನಸಹಾಯದ ಮೇಲಿನ ಅವಲಂಬನೆಯನ್ನು ನೀಗಿಕೊಂಡು, ಸ್ವತಂತ್ರ ಆದಾಯದ ಮೂಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ವಿಧಾನಗಳನ್ನು ಪರಿಶೀಲಿಸುವುದರ ಜೊತೆಗೆ ರಾಜ್ಯದ ಸಂಪನ್ಮೂಲಗಳನ್ನು ಹಿಂದುಳಿದ ಹಾಗೂ ಅಭಿವೃದ್ಧಿ ವಂಚಿತ ಪ್ರದೇಶಗಳಿಗೆ ಹೇಗೆ ವಿವೇಚನಾಯುಕ್ತವಾಗಿ ಬಳಸಬೇಕು ಎನ್ನುವುದರ ಬಗ್ಗೆ ತಿಳಿವಳಿಕೆ ನೀಡಲು ಈ ಆಯೋಗವನ್ನು ರಚಿಸಲಾಗಿದೆ.

140. ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಗೆ ಸೇವಾ ವಲಯವು ಶೇ. 45 ರಷ್ಟು ಪಾಲನ್ನು ಸಲ್ಲಿಸುತ್ತಿದೆ. ಸೇವಾ ಕ್ಷೇತ್ರದ ಮೂಲಭೂತ ಸೌಕರ್ಯ ವೃದ್ಧಿಸಲು ಅಪಾರ ಹಣ ಹೂಡಿರುವ ರಾಜ್ಯ ಸರ್ಕಾರಕ್ಕೆ ಈ ವಲಯದ ಮೇಲೆ ತೆರಿಗೆ ಹಾಕಲು ಸಂವಿಧಾನಬದ್ಧ ಅಧಿಕಾರವಿಲ್ಲ. ಈ ನಿಟ್ಟಿನಲ್ಲಿ ಸಂವಿಧಾನ ತಿದ್ದುಪಡಿಗೆ ಒತ್ತಾಯಿಸಲು ನಾನು ಶೀಘ್ರದಲ್ಲಿಯೇ ಸರ್ವಪಕ್ಷಗಳ ನಿಯೋಗವೊಂದನ್ನು ಪ್ರಧಾನಿಗಳ ಬಳಿ ಕರೆದೊಯ್ಯಲಿದ್ದೇನೆ.

141. ಹನ್ನೊಂದನೇ ಹಣಕಾಸು ಆಯೋಗದ ವರದಿಗಾಗಿ ನಾವು ಕಾಯುತ್ತಿದ್ದೇವೆ. ಹಿಂದಿನ ಆಯೋಗಗಳು ಅನುಸರಿಸುತ್ತಿದ್ದ ಕೊರತೆಯನ್ನು ತುಂಬುವ ಧೋರಣೆಯಿಂದ ನಮಗೇನೂ ಉಪಯೋಗವಾಗಿಲ್ಲ. ಉತ್ತಮ ಆರ್ಥಿಕ ನಿರ್ವಹಣೆಯನ್ನು ಪಾಲಿಸಿಕೊಂಡು ಬರುತ್ತಿರುವ ಹಾಗೂ ಕಠಿಣ ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸುತ್ತಿರುವ ಕರ್ನಾಟಕದಂತಹ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಸೂಕ್ತ ರೀತಿಯಲ್ಲಿ ಕೊಡುಗೆ ನೀಡಬೇಕು. ಕೇಂದ್ರದಿಂದ ರಾಜ್ಯಗಳಿಗೆ ವರ್ಗಾವಣೆಯಾಗುವ ಹಣವನ್ನು ಪರ್ಯಾಯ ವರ್ಗಾವಣಾ ಸೂತ್ರಕ್ಕೆ ಅನುಸಾರವಾಗಿ ಶೇಕಡಾ 29 ರಿಂದ ಶೇಕಡಾ 40 ಕ್ಕೆ ಪೂರ್ವಾನ್ವಯವಾಗುವಂತೆ ಹೆಚ್ಚಿಸಿ ಬಿಡುಗಡೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರವನ್ನು ವಿನಂತಿಸುತ್ತೇವೆ.

142. ಮಾನ್ಯರೆ, ನಾನು ಈಗ ಒಂದು ಘೋಷಣೆ ಮಾಡಲು ಬಯಸುತ್ತೇನೆ. ನನ್ನ ಸಹೋದ್ಯೋಗಿಗಳು ಇದನ್ನು ಕಾತರದಿಂದ ಕಾಯುತ್ತಿದ್ದಾರೆನ್ನುವುದು ನನಗೆ ಗೊತ್ತು. ಹಾಲಿ ಇರುವ ಸರ್ಕಾರಿ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಒಳಗೊಳ್ಳದಿರುವ, ಆದರೆ ಜಾರಿಗೊಳಿಸಲೇಬೇಕಾಗಿರುವ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳ ವಿಶೇಷ ಅವಶ್ಯಕತೆ ಇರುತ್ತದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕರ ಪಾತ್ರ ಪ್ರಮುಖವಾಗಿದೆ. ಅವರು ತಮ್ಮ ಕ್ಷೇತ್ರದ ಜನರ ನಿಜವಾದ ಅವಶ್ಯಕತೆಗಳಿಗೆ ಸ್ಪಂದಿಸಬೇಕಾಗುತ್ತದೆ. ಆದ್ದರಿಂದ, ನಾನು ಶಾಸಕರ ಕ್ಷೇತ್ರ ಅಭಿವೃದ್ಧಿ ನಿಧಿಯನ್ನು ಯೋಜಿಸಲು ಗಂಭೀರವಾಗಿ ಪರಿಗಣಿಸುತ್ತಿದ್ದೇನೆ. ಈ ಬಗ್ಗೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು. "ಈ ವಿಷಯದ ಬಗ್ಗೆ ಪ್ರತಿ ಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ನಡೆಸಿ, ಅನಂತರ ಮಾರ್ಗಸೂಚಿ ಮತ್ತು ಮೊತ್ತದ ವಿವರಗಳನ್ನು ಅತಿ ಶೀಘ್ರದಲ್ಲಿಯೇ ಸದನದ ಮುಂದೆ ಇಡುತ್ತೇನೆ."

143. ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ.

ವಾಣಿಜ್ಯ ತೆರಿಗೆಗಳು

144. ಸರಕು ತೆರಿಗೆಗಳು ರಾಜ್ಯದ ಆದಾಯದ ಪ್ರಮುಖ ಮತ್ತು ದೃಢವಾದ ಮೂಲಗಳಾಗಿವೆ. ಗರಿಷ್ಟ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸಲು ತೆರಿಗೆ ಆಡಳಿತವನ್ನು ಸಜ್ಜುಗೊಳಿಸುವ ಜೊತೆಗೆ, ತೆರಿಗೆ ಸಾಧನಗಳು, ವಾಣಿಜ್ಯ ವಹಿವಾಟುದಾರರ ಆಯ್ಕೆಗಳ ಮೇಲೆ ಪ್ರಭಾವ ಬೀರದಂತೆ ಎಚ್ಚರ ವಹಿಸಬೇಕು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅರ್ಥ ವ್ಯವಸ್ಥೆಯಲ್ಲಿ ಕನಿಷ್ಠ ಹಸ್ತಕ್ಷೇಪ ಮಾಡುವ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಪದ್ಧತಿಯನ್ನು 1-4-2001 ರಿಂದ ಅಳವಡಿಸುವ ಆಶಯ ಹೊಂದಿರುತ್ತೇನೆ. ಮೌಲ್ಯವರ್ಧಿತ ಪದ್ಧತಿಯ ಅಳವಡಿಕೆಯಿಂದ ತೆರಿಗೆ ಮೂಲದ ವಿಸ್ತೀರ್ಣತೆ, ಸರಕುಗಳ ಮಾರಾಟದ ಹಂತಗಳಲ್ಲಿನ ಮೌಲ್ಯವರ್ಧನೆಯ ಅನುಕೂಲ ಪಡೆಯಲು, ಹಾಗೂ ಪ್ರಸ್ತುತ ತೆರಿಗೆ ಪದ್ಧತಿಯಲ್ಲಿ ಸುಧಾರಣೆ ತರಲು ಸಹಾಯಕವಾಗುತ್ತದೆ.

145. ನಮ್ಮ ರೈತರು ನೂತನ ತಂತ್ರಜ್ಞಾನವನ್ನು ವ್ಯವಸಾಯ ಮತ್ತು ತೋಟಗಾರಿಕೆಯಲ್ಲಿ ಅಳವಡಿಸಿಕೊಂಡರೆ, ಅವರ ಆದಾಯ ಮಟ್ಟವು ಉತ್ತಮವಾಗುವುದರಿಂದ ಆದಕ್ಕೆ ಪ್ರೋತ್ಸಾಹ ನೀಡುವುದು ಅತ್ಯಗತ್ಯ. ಉದ್ಯಮಶೀಲಕತೆಗೆ ಅಡ್ಡಿ ಇರುವ ಅಡೆತಡೆಗಳನ್ನು ನಿವಾರಿಸುವುದು ಅತ್ಯವಶ್ಯಕವಾಗಿದೆ. ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಪಾತ್ರ ಮಹತ್ವದಾಗಿದ್ದು ಈ ವಲಯಕ್ಕೆ ಬೆಂಬಲ ನೀಡಬೇಕಾಗಿದೆ. ರಫ್ತು ಮಾಡುವ ಕೈಗಾರಿಕೆಗಳು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರಬೇಕು. ವರ್ತಕ ವೃಂದ ಮತ್ತು ಸರ್ಕಾರದ ನಡುವಣ ಭಾಂದವ್ಯ ಪರಸ್ಪರ ನಂಬಿಕೆ, ಒಡಂಬಡಿಕೆ ಮತ್ತು ಗೌರವಯುತವಾಗಿರಬೇಕು. ಈ ಮೇಲ್ಕಂಡ ವಾಸ್ತವತೆಯನ್ನು ಗಮನದಲ್ಲಿಟ್ಟುಕೊಂಡು ತೆರಿಗೆ ಪರಿಷ್ಕರಣ ಕ್ರಮಗಳ ಜೊತೆ ತೆರಿಗೆ ಹೊರೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ರಿಯಾಯಿತಿ ಮತ್ತು ಪರಿಹಾರಗಳ ಜೊತೆ ಕೆಲವೊಂದು ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಮಾಡಲು ಪ್ರಯತ್ನಿಸಿದ್ದೇನೆ.

146. ಈಗ ನಾನು ವಿವಿಧ ತೆರಿಗೆ ಕಾಯ್ದೆಗಳಡಿಯಲ್ಲಿ ಮಾಡುವ ಕ್ರಮಗಳನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

147. ಮಾರಾಟ ತೆರಿಗೆ

ಅ. ತೆರಿಗೆ ದರದಲ್ಲಿ ಇಳಿತ

(1) ಕೃಷಿ ವಲಯಕ್ಕೆ ಪರಿಹಾರ-

ಕೃಷಿಯು ನಮ್ಮ ಅರ್ಥ ವ್ಯವಸ್ಥೆಯ ಬೆನ್ನೆಲುಬಾಗಿದೆ. ನಮ್ಮ ರೈತರು ಬೇಸಾಯ ಪದ್ಧತಿಯಲ್ಲಿ ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರೂ ಸಹ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ತಾಂತ್ರಿಕ ಪದ್ಧತಿಗಳನ್ನು ಅನುಸರಿಸಲು ಸಾಧ್ಯವಾಗಿಲ್ಲ. ಕೃಷಿ ವಲಯವನ್ನು ಆಧುನೀಕರಣ ಮಾಡಲು ಕೆಳಕಂಡ ವಿನಾಯಿತಿ ಮತ್ತು ಪರಿಹಾರವನ್ನು ನೀಡಲು ಪ್ರಸ್ತಾಪಿಸುತ್ತೇನೆ.

i) ರಾಸಾಯನಿಕ ಗೊಬ್ಬರಗಳು ಮತ್ತು ಅವುಗಳ ಮಿಶ್ರಣಗಳು, ಟ್ರಾಕ್ಟರ್ ಮತ್ತು ಅದರ ಟ್ರೈಲರ್‌ಗಳು, ಪವರ್ ಟಿಲ್ಲರ್ ಮತ್ತು ಅದರ ಟ್ರೈಲರ್‌ಗಳು, ಎಲ್ಲಾ ವಿಧದ ಪ್ರಮಾಣಿಸಿದ ಅಥವಾ ಪ್ರಮಾಣಿಸದ ಬಿತ್ತನೆ ಬೀಜಗಳು ಮತ್ತು ಪ್ರಮಾಣಿಸಿದ ಎಣ್ಣೆ ಬಿತ್ತನೆ ಬೀಜಗಳಿಗೆ ತೆರಿಗೆ ವಿನಾಯಿತಿ ನೀಡಲು,

ii) ಸ್ಪ್ರಿಂಕಲರ್ ಮತ್ತು ಹನಿನೀರಾವರಿ ಉಪಕರಣಗಳು ಮತ್ತು ನೀರವಾರಿಗೆ ಉಪಯೋಗಿಸುವ ಪಿ.ವಿ.ಸಿ ಪೈಪುಗಳ ಮೇಲೆ ಶೇ. 4 ಕ್ಕೆ, ಕ್ರಿಮಿ ನಾಶಕಗಳು ಮತ್ತು ಕೀಟ ನಾಶಕಗಳು ಹಾಗೂ ಸಸ್ಯ ಬೆಳವಣಿಗೆ ಪೋಶಕಗಳ ಮೇಲೆ ಶೇ.2 ಕ್ಕೆ ತೆರಿಗೆ ದರ ಇಳಿಸಲು ಪ್ರಸ್ತಾಪಿಸುತ್ತೇನೆ.

(2) ಮುಖ್ಯ ಮಂತ್ರಿಗಳ ಸಭೆಯ ತೀರ್ಮಾನುಸಾರ 1-1-2000 ದಿಂದ ಮಾರಟ ತೆರಿಗೆಯಲ್ಲಿ ರಾಷ್ಟ್ರಾದ್ಯಂತ ಕನಿಷ್ಠ ನೆಲ ಮಟ್ಟದ ತೆರಿಗೆ ದರಗಳು ಜಾರಿಗೆ ಬಂದರೂ ಸಹ, ಕೆಲವು ನೆರೆ ರಾಜ್ಯಗಳು ಕೆಲ ಸರಕುಗಳ ಮೇಲೆ ಕನಿಷ್ಠ ನೆಲ ಮಟ್ಟದ ತೆರಿಗೆ ದರಗಳಿಗಿಂತ ಕಡಿಮೆ ದರಗಳನ್ನು ನಿಗದಿ ಪಡಿಸಿವೆ. ಈ ಕಾರಣ ಕೆಲವು ತಿಂಗಳುಗಳಿಂದ ಪರ ರಾಜ್ಯಗಳಿಗೆ ವ್ಯಾಪಾರವು ವಲಸೆ ಹೋಗುತ್ತಿದೆ. ನಮ್ಮ ತೆರಿಗೆ ಮೂಲವನ್ನು ರಕ್ಷಿಸುವ ಸಲುವಾಗಿ ಖಾದ್ಯ ತೈಲಗಳು, ಎಣ್ಣೆ ಬೀಜಗಳು, ತೆಂಗಿನಕಾಯಿ, ಕೊಬ್ಬರಿ, ಆಟೋರಿಕ್ಷಾಗಳು, ಪ್ಲಾಸ್ಟಿಕ್ ಹರಳು, ಪ್ಲಾಸ್ಟಿಕ್ ಪೈಪ್‌ಗಳು, ಕರ್ಪೂರ ಮತ್ತು ಇನ್ನಿತರ ವಸ್ತುಗಳ ಮೇಲೆ ತೆರಿಗೆ ದರಗಳನ್ನು ಕಡಿಮೆ ಮಾಡಲು ಪ್ರಸ್ತಾಪಿಸುತ್ತೇನೆ. ಅಂತಹ ಸರಕುಗಳು ಮತ್ತು ಕಡಿಮೆಗೊಳಿಸಿದ ತೆರಿಗೆ ದರಗಳ ವಿವರಣೆಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

(3) ಸಮ ಮಟ್ಟದ ತೆರಿಗೆ ದರಗಳ ಬಗ್ಗೆ ರಚಿಸಲಾದ ಅರ್ಥ ಸಚಿವರುಗಳ ಸಮಿತಿಯು, ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ, ಕೆಲವು ಸರಕುಗಳ ಕನಿಷ್ಠ ನೆಲ ಮಟ್ಟದ ದರವನ್ನು ಪುನರ್ ನಿಗದಿಪಡಿಸಿದೆ. ಅದರನುಸಾರವಾಗಿ ಅಗರಬತ್ತಿ, ಪಶು ಆಹಾರ, ಹಿತ್ತಾಳೆ, ಕಂಚು ಮತ್ತು ತಾಮ್ರದ ಗೃಹೋಪಯೋಗಿ ಪಾತ್ರೆಗಳು, ಎಲ್ಲಾ ರೀತಿಯ ರಾಸಾಯನಿಕೆ ವಸ್ತುಗಳು, ಏಲಕ್ಕಿ, ಮೆಣಸು, ಹೊಲೆಯುವ ದಾರ ಇತ್ಯಾದಿ ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಕನಿಷ್ಠ ನೆಲ ಮಟ್ಟದ ತೆರಿಗೆ ದರಗಳ ಮಟ್ಟಕ್ಕೆ ತರಲು ಪ್ರಸ್ತಾಪಿಸುತ್ತೇನೆ. ಅಂತಹ ಸರಕುಗಳ ಮತ್ತು ತೆರಿಗೆ ತರಲು ಪ್ರಸ್ತಾಪಿಸುತ್ತೇನೆ. ಅಂತಹ ಸರಕುಗಳ ಮತ್ತು ತೆರಿಗೆ ದರಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.

(4) ಕೈಗಾರಿಕೆ ಮತ್ತು ವಾಣಿಜ್ಯ ವೃಂದದವರು, ಹಲವು ಸರಕುಗಳ ಮೇಲೆ ತೆರಿಗೆ ದರವನ್ನು ಕಡಿಮೆ ಮಾಡಲು ಮನವಿ ಮಾಡಿರುತ್ತಾರೆ. ಅವುಗಳನ್ನು ಪರಿಶೀಲಿಸಿದ ನಂತರ ಕಾಫಿ ಬೀಜ, ಎಕ್ಸಿಮ್ ಸ್ಕ್ರಿಪ್ ಮತ್ತು ಅಂತಹುದೇ ವಸ್ತುಗಳು, ಮಡಚುವ ಕೊಡೆಗಳು, ಸಿಡಿಸುವ ಗನ್ ಪೌಡರ್, ಆಯುರ್ವೇದ ಔಷಧಿ ತಯಾರು ಮಾಡಲು ಉಪಯೋಗಿಸುವ ತೊಗಟೆ, ಬೇರುಗಳು ಮುಂತಾದ ವಸ್ತುಗಳ ಮೇಲೆ ತೆರಿಗೆ ದರಗಳನ್ನು ಕಡಿಮೆ ಮಾಡಲು

ಪ್ರಸ್ತಾಪಿಸುತ್ತೇನೆ. ಅಂತಹ ವಸ್ತುಗಳ ಮತ್ತು ತೆರಿಗೆ ದರಗಳ ವಿವರಗಳನ್ನು ಅನುಬಂಧ - 4 ರಲ್ಲಿ ಒದಗಿಸಲಾಗಿದೆ.

ಆ. ಪರಿಹಾರ ಮತ್ತು ರಿಯಾಯಿತಿಗಳು

(1) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ರಿಯಾಯಿತಿ

ಅಧಿನಿಯಮ 5-ಎ ಅಡಿಯಲ್ಲಿ ಕೈಗಾರಿಕೆಗಳಿಗೆ ಮಾರಾಟ ಮಾಡುವ ಕಚ್ಚಾ ವಸ್ತುಗಳು ಮತ್ತು ಬಿಡಿ ಭಾಗಗಳ ಮೇಲೆ ಶೇ.3 ರಂತೆ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮಾರಾಟ ಮಾಡಿದಾಗ ಶೇ. 2 ರಂತೆ ರಿಯಾಯಿತಿ ತೆರಿಗೆ ದರವಿರುತ್ತದೆ. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಸಲುವಾಗಿ ಅವುಗಳು ಉತ್ಪಾದಿಸಿದ ಸರಕುಗಳನ್ನು ಇತರ ಕೈಗಾರಿಕಾ ಘಟಕಗಳಿಗೆ ಕಚ್ಚಾವಸ್ತುಗಳು ಮತ್ತು ಬಿಡಿಭಾಗಗಳಾಗಿ ಉಪಯೋಗಿಸಲು ಮಾರಾಟ ಮಾಡಿದಾಗ ಅಂತಹ ಮಾರಾಟದ ಮೇಲೆ ತೆರಿಗೆ ದರವನ್ನು ಶೇ.2 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

(2) ಕಚ್ಚಾ ಸಾಮಗ್ರಿಗಳು ಮತ್ತು ಬಿಡಿಭಾಗಗಳಿಗೆ ವಹಿವಾಟು ತೆರಿಗೆ ರಿಯಾಯಿತಿ

ಮೇಲಿನ ರಿಯಾಯಿತಿಯ ಜೊತೆಗೆ ಕೈಗಾರಿಕೆಗಳಿಗೆ ನಮೂನೆ 37 ರ ಮೇರೆಗೆ ಇನ್‌ಪುಟ್ -ಗಳನ್ನು ಮಾರಾಟ ಮಾಡಿದಾಗ ಅದರ ಮೇಲಿನ ವಹಿವಾಟು ತೆರಿಗೆಯನ್ನು ಶೇ.1 ರಂತೆ ವಿಧಿಸಲು ಪ್ರಸ್ತಾಪಿಸುತ್ತೇನೆ.

(3) ಚಲನ ಚಿತ್ರೋದ್ಯಮಕ್ಕೆ ರಿಯಾಯಿತಿ

ರಾಜ್ಯದ ಚಿತ್ರೋದ್ಯಮಕ್ಕೆ ಪ್ರೋತ್ಸಾಹ ನೀಡುವ ಅವಶ್ಯಕತೆ ಇದೆ. ಆದುದರಿಂದ ಫೀಚರ್ ಫಿಲ್ಮ್‌ಗಳ ಲೀಸಿಂಗ್ ಮೇಲೆ ತೆರಿಗೆ ವಿನಾಯಿತಿಯನ್ನು ನೀಡಲು ಪ್ರಸ್ತಾಪಿಸುತ್ತೇನೆ.

(4) ಕಾಫಿ ರಫ್ತುದಾರರಿಗೆ ಪರಿಹಾರ

ಸದ್ಯಕ್ಕೆ ರಫ್ತು ಆದೇಶದನುಸಾರ ರಫ್ತಿಗಾಗಿ ಖರೀದಿಸುವ ಕಾಫಿ ಬೀಜಕ್ಕೆ ತೆರೆಗೆ ವಿನಾಯಿತಿ ದೊರೆಯುತ್ತದೆ. ಕಾಫಿ ಬೆಳೆಗಾರರು ರಫ್ತು ಆದೇಶವಿಲ್ಲದೆಯೇ ಕಾಫಿಯನ್ನು ಖರೀದಿಸಿ ನಂತರ ಕಾಫಿಯನ್ನು 6 ತಿಂಗಳು ಒಳಗೆ ರಫ್ತು ಮಾಡಿದರೆ ಅಂತಹ ಕಾಫಿ ಖರೀದಿಗೆ ತೆರಿಗೆ ವಿನಾಯಿತಿ ನೀಡಲು ಮನವಿ ಮಾಡಿರುತ್ತಾರೆ. ರಫ್ತು ಉದ್ಯಮವನ್ನು ಉತ್ತೇಜಿಸುವುದಕ್ಕಾಗಿ ರಫ್ತು ಆದೇಶವಿಲ್ಲದೆ ಖರೀದಿಸಿದ ಕಾಫಿ ಬೀಜವನ್ನು 4 ತಿಂಗಳ ಅವಧಿಯೊಳಗೆ ರಫ್ತು ಮಾಡಿದರೆ ಖರೀದಿ ತೆರಿಗೆ ವಿನಾಯಿತಿ ನೀಡಲು ಹಾಗೂ ಈ ಸೌಲಭ್ಯವನ್ನು ಮೆಣಸು ಮತ್ತು ಏಲಕ್ಕಿಗೂ ಸಹ ನೀಡಲು ಪ್ರಸ್ತಾಪಿಸುತ್ತೇನೆ.

(5) ರಫ್ತು ಘಟಕಗಳಿಗೆ ಪರಿಹಾರ

ಸಧ್ಯಕ್ಕೆ ಶೇ. 100 ರಷ್ಟು ರಫ್ತು ಘಟಕಗಳು ಮತ್ತು ತಮ್ಮ ಉತ್ಪಾದನೆಯಲ್ಲಿ ಕನಿಷ್ಠ ಶೇ. 25

ರಪ್ಪನ್ನು ರಫ್ತು ಮಾಡುವ ಘಟಕಗಳು ಉಪಯೋಗಿಸುವ ಕಚ್ಚಾ ಸಾಮಗ್ರಿಗಳು ಮತ್ತು ಬಿಡಿ ಭಾಗಗಳ ಮೇಲೆ ಕೊಟ್ಟಿರುವ ಮಾರಾಟ ತೆರಿಗೆಯನ್ನು ಮರು ಪಾವತಿಮಾಡುವ ಸೌಲಭ್ಯ ಕಲ್ಪಿಸಲಾಗಿದೆ. ಈ ಸೌಲಭ್ಯವನ್ನು ಕೈಗಾರಿಕಾ ಘಟಕಗಳಿಗೆ ಯಾವುದೇ ಕನಿಷ್ಠ ರಫ್ತು ಪ್ರಮಾಣವನ್ನು ನಿಗದಿ ಪಡಿಸದೆ ಎಲ್ಲಾ ರಫ್ತುಗಳಿಗೂ ಅನ್ವಯವಾಗುವಂತೆ ಮರುಪಾವತಿ ಸೌಲಭ್ಯವನ್ನು ವಿಸ್ತರಿಸಲು ಪ್ರಸ್ತಾಪಿಸುತ್ತೇನೆ. ಪ್ರವೇಶ ತೆರಿಗೆಯಡಿಯಲ್ಲಿಯೂ ಸಹ ರಫ್ತು ಘಟಕಗಳಿಗೆ ಅನ್ವಯವಾಗುವ ಸೌಲಭ್ಯಗಳನ್ನು ಇಂತಹ ಕೈಗಾರಿಕಾ ಘಟಕಗಳಿಗೆ ವಿಸ್ತರಿಸಲು ಪ್ರಸ್ತಾಪಿಸುತ್ತೇನೆ. ಮರುಪಾವತಿಯ ಜೊತೆಗೆ ಅಂತಹ ಘಟಕಗಳು ತಾವು ಖರೀದಿಸಿದ ಕಚ್ಚಾ ವಸ್ತುಗಳು, ಬಿಡಿ ಭಾಗಗಳ ಮೇಲಿನ ಅರ್ಹವಾಗುವ ಮರುಪಾವತಿ ತೆರಿಗೆಯನ್ನು ತಾವು ರಾಜ್ಯ ಮಾರಾಟ ತೆರಿಗೆ ಮತ್ತು ಪ್ರವೇಶ ತೆರಿಗೆಯಡಿಯಲ್ಲಿ ಕೊಡಬೇಕಾದ ತೆರಿಗೆಯ ಕಡೆಗೆ ತಾತ್ಕಾಲಿಕವಾಗಿ ಹೊಂದಾಣಿಕೆ ಮಾಡಲು ಪ್ರಸ್ತಾಪಿಸುತ್ತೇನೆ. ಈ ಹೊಂದಾಣಿಕೆಯು ಸಂಭಂದಪಟ್ಟ ಕಾಯ್ದೆಯಡಿಯಲ್ಲಿ ಮಾಡುವ ಅಂತಿಮ ಕರನಿರ್ಧರಣೆಗೆ ಒಳಪಡುತ್ತದೆ.

(6) *ಇನ್ನಿತರ ಪರಿಹಾರಗಳು*

ಅ) ಆರ್‌ಸಿಸಿ ಕಂಬಗಳು ಮತ್ತು ಪೈಪ್‌ಗಳನ್ನು ತೆರಿಗೆಗೊಳಪಟ್ಟ ಸಿಮೆಂಟ್‌ನಿಂದ ತಯಾರಿಸಿ ಮಾರಾಟದ ಮೇಲೆ ತೆರಿಗೆ ಪಾವತಿ ಮಾಡುವ ಸಂದರ್ಭದಲ್ಲಿ ಅಂತಹ ವಸ್ತುಗಳ ಮೇಲೆ, ಸಿಮೆಂಟ್ ಮೇಲೆ ಪಾವತಿಯಾಗಿರುವ ಕರ್ನಾಟಕ ಮಾರಾಟ ತೆರಿಗೆಯಲ್ಲಿ ಶೇ. 3 ಕ್ಕಿಂತ ಹೆಚ್ಚಿಗೆ ಮಾರಾಟ ತೆರಿಗೆಯನ್ನು ಅಂತಹ ವಸ್ತುಗಳ ಮೇಲಿನ ಪಾವತಿ ಮಾಡಬೇಕಾದ ತೆರಿಗೆಯ ಕಡೆಗೆ ಮರುಪಾವತಿ ಇಲ್ಲದಂತೆ ಹೊಂದಾಣಿಕೆ ಮಾಡಲು;

ಆ) ಸುರಗಿ ಮತ್ತು ನೀಲಗಿರಿ ಮರಗಳನ್ನು ಸೆಕ್ಷನ್ 5-ಎ ಅಡಿಯಲ್ಲಿ ರಿಯಾಯಿತಿ ದರದಲ್ಲಿ ಖರೀದಿಸಲು;

ಇ) ಕೈಗಾರಿಕಾ ಘಟಕಗಳಿಗೆ ಸೆಕ್ಷನ್ 5-ಎ ಅಡಿಯಲ್ಲಿ ಕನ್ಸ್ಯೂಮಬಲ್ಸ್‌ಗಳನ್ನು (ಪೆಟ್ರೋಲಿಯಂ ಪದಾರ್ಥಗಳನ್ನು ಹೊರತುಪಡಿಸಿ.) ಖರೀದಿಸಲು;

ಈ) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ತೆರಿಗೆಗೆ ಒಳಪಟ್ಟ ವಸ್ತುಗಳಿಗೆ ಸೆಕ್ಷನ್ 5-ಸಿ ಅಡಿಯಲ್ಲಿ ವಿನಾಯಿತಿ ನೀಡಲು;

ಉ) ವಿಶ್ವಸಂಸ್ಥೆ ಮತ್ತು ಅದರ ವಿಶೇಷ ಸಂಸ್ಥೆಗಳಿಗೆ ಮಾರಾಟ ಮಾಡಿದ ಸರಕುಗಳ ಮೇಲಿನ ತೆರಿಗೆ ವಿನಾಯಿತಿ ನೀಡಲು;

ಊ) ಜೆಲ್ಲಿ ಉತ್ಪಾದಕರಿಗೆ ಯಂತ್ರ ಸಾಮರ್ಥ್ಯದನುಸಾರ ಹೊಂದಾಣಿಕೆ ತೆರಿಗೆ ಪದ್ಧತಿ ನೀಡಲು;

ಋ) ಮಹಿಳಾ ಕ್ಯಾಟರಿಂಗ್ ಉದ್ದಿಮೆದಾರರಿಗೆ ಹೊಂದಾಣಿಕೆ ತೆರಿಗೆ ಪದ್ಧತಿ ನೀಡಲು; ಮತ್ತು

ೠ) ಉದ್ದಿಮೆದಾರರ ನಿರ್ಧಿಷ್ಟ ತೊಡರುಗಳನ್ನು ನಿವಾರಿಸಲು ನಮೂನೆ 32-ಬಿ ಯನ್ನು ಪೂರ್ವಾನ್ವಯವಾಗಿ ತಿದ್ದುಪಡಿ ಮಾಡಲು;

ಪ್ರಸ್ತಾಪಿಸುತ್ತೇನೆ.

(7) ವಿನಾಯಿತಿಗಳು

i) ಕನಿಷ್ಠ ನೆಲ ಮಟ್ಟದ ತೆರಿಗೆ ದರಗಳು ಜಾರಿಗೆ ಬಂದನಂತರ, ಅಲ್ಯೂಮಿನಿಯಂ ಗೃಹೋಪಯೋಗಿ ಪಾತ್ರೆಗಳಿಗೆ ತೆರಿಗೆ ವಿಧಿಸಲಾಗಿದೆ. ಇದಕ್ಕೆ ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

ii) ಕನಿಷ್ಠ ನೆಲ ಮಟ್ಟದ ತೆರಿಗೆ ದರಗಳನ್ನು ಪುನರ್ ನಿಗದಿಪಡಿಸಿದ ಕಾರಣ ಬೈಸಿಕಲ್‌ಗಳು, ಅವುಗಳ ಸಂಯೋಜನೆಗಳು, ಬಿಡಿಭಾಗಗಳು, ಉಪಸಹಾಯಕಗಳು, ಟೈರ್ಸ್, ಟ್ಯೂಬ್ಸ್ ಮತ್ತು ಫ್ಲಾಪ್‌ಗಳಿಗೆ ಶೇ. 4 ರಂತೆ ತೆರಿಗೆ ವಿಧಿಸಲಾಗಿದೆ. ಬೆಲ್ಲದ ಮೇಲೆ ಮೂಲ ತೆರಿಗೆ ಮತ್ತು ವಹಿವಾಟು ತೆರಿಗೆ ಇರುತ್ತದೆ. ಈ ವಸ್ತುಗಳು ಜನ ಸಾಮಾನ್ಯರ ದೈನಂದಿಕ ಉಪಯೋಗ ವಸ್ತುಗಳಾದುದರಿಂದ ಅವುಗಳ ಮೇಲೆ ಎಲ್ಲ ಹಂತದ ವಹಿವಾಟು ತೆರಿಗೆಯಿಂದ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ. ಜೊತೆಗೆ ಹಳೆ ಚಿನ್ನ- ಬೆಳ್ಳಿ ಪದಾರ್ಥಗಳನ್ನು ಖರೀದಿಸಿ ಮತ್ತು ಅವುಗಳಿಂದ ನೂತನ ಚಿನ್ನ- ಬೆಳ್ಳಿ ಪದಾರ್ಥಗಳನ್ನು ತಯಾರಿಸಿ, ಅದರ ಮೇಲೆ ತೆರಿಗೆ ನೀಡಿದರೆ, ಅಂತಹ ಹಳೆಯ ಚಿನ್ನ-ಬೆಳ್ಳಿ ಪದಾರ್ಥಗಳ ಮೇಲೆ ವಹಿವಾಟು ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

iii) ಕೆಲವೊಂದು ಅವಧಿಗೆ ತೆಂಗಿನ ಸಿಪ್ಪೆ (1-4-97 ರಿಂದ 31-3-98), ಕಚ್ಚಾ ರೇಷ್ಮೆ ಮತ್ತು ಅದರ ನೂಲು (1-1-2000 ದಿಂದ 5-1-2000), ದೇಶಿ ಇಟ್ಟಿಗೆ ಮತ್ತು ಟೈಲ್ಸ್‌ಗಳು, ಸಂಸ್ಕರಿಸಿದ ಉಪ್ಪು, ಪುನರ್ ಬಳಕೆಯ ಇಂಧನದ ಉಪಕರಣಗಳು ಮತ್ತು ಸಾಗರ ಅಲೆಗಳು ಮತ್ತು ಸಾಗರ ಉಷ್ಣ ಶಕ್ತಿಯನ್ನು ಉಪಯೋಗಿಸಿಕೊಂಡು ಚಾಲಿತವಾಗುವ ಉಪಕರಣಗಳು (1-1-2000 ದಿಂದ), ತೆರಿಗೆಗೆ ಅರ್ಹವಾಗಿವೆ. ಜೊತೆಗೆ ಬಿತ್ತನೆ ಬೀಜಗಳ ತಯಾರಿಕೆಗೆ ಖರೀದಿ ಮಾಡುವ ಬೀಜಗಳ ಮೇಲೆ ವಹಿವಾಟು ತೆರಿಗೆ 1-4-93 ರಿಂದ 1-4-99 ರವರೆಗೆ ತಪ್ಪಾಗಿ ಅರ್ಥೈಸಿ, ವಹಿವಾಟು ತೆರಿಗೆ ವಿಧಿಸಲಾಗಿದೆ. ಈ ಎಲ್ಲ ವಸ್ತುಗಳ ಮೇಲೆ ಸೂಚಿಸಿರುವ ಕಾಲಾವಧಿಗಳಿಗೆ ವಿನಾಯಿತಿಯನ್ನು ನೀಡಲು ಮತ್ತು ಮುಂದುವರೆಸಲು ಪ್ರಸ್ತಾಪಿಸುತ್ತೇನೆ.

iv) ತೆಂಗಿನ ಸಿಪ್ಪೆ ನಾರು, ದಾರ ಮತ್ತು ಹಗ್ಗಗಳು, ಅವಲಕ್ಕಿ, ಮಂಡಕ್ಕಿ(ಪುರಿ),

ಜೇಡಿಮಣ್ಣು, ಗಾಜಿನ ಚಿಮಣಿ, ಲಾಟೀನುಗಳು, ಎಣ್ಣೆ ದೀಪಗಳು, ಹುಲ್ಲು, ರಾಗಿಹಿಟ್ಟು, ಅಕ್ಕಿರವೆ ಇವುಗಳ ಮೇಲೆ ಅಧಿಸೂಚನೆಗಳ ಮೂಲಕ ದೀರ್ಘಕಾಲದಿಂದ ತೆರಿಗೆ ವಿನಾಯಿತಿ ನೀಡಲಾಗಿದೆ. ಇವುಗಳನ್ನು ತೆರಿಗೆ ವಿನಾಯಿತಿ ಶೆಡ್ಯೂಲ್‌ನಲ್ಲಿ ಸೇರ್ಪಡಿಸಿ ವಿನಾಯಿತಿಗಳನ್ನು ಮುಂದುವರಿಸಲು ಪ್ರಸ್ತಾಪಿಸುತ್ತೇನೆ.

ಇ. ತೆರಿಗೆ ರಚನೆಯಲ್ಲಿ ಪರಿಷ್ಕರಣೆ

(1). ತೆರಿಗೆ ದರಗಳು

i) ವಾಷಿಂಗ್ ಮೆಷಿನ್‌ಗಳು, ನಿರ್ಯಾತ ಕ್ಲೀನರ್‌ಗಳು, ವೋಲ್ಟೇಜ್‌ಸ್ಟೆಬಿಲೈಜರ್‌ಗಳು ಇತ್ಯಾದಿಗಳಿಗೆ ಕನಿಷ್ಠ ನೆಲ ಮಟ್ಟದ ದರದನುಸಾರ ಶೇ. 12 ರಂತೆ ತೆರಿಗೆ ವಿಧಿಸಲಾಗಿದೆ. ಆದರೆ ಇಂತಹದೇ ಸರಕುಗಳಾದ ವಿದ್ಯುತ್ ಸಾಧನಗಳು ಒಂದೇ ಸ್ಥಳದಲ್ಲಿ ವ್ಯಾಪಾರವಾಗುವುದರಿಂದ ಹಾಗೂ ಅವುಗಳಿಗೆ ಕಡಿಮೆ ತೆರಿಗೆ ದರವಿರುವುದರಿಂದ, ವಸ್ತುಗಳ ವರ್ಗೀಕರಣದಲ್ಲಿ ಮತ್ತು ಲೆಕ್ಕ ಪತ್ರ ನಿರ್ವಹಿಸುವಾಗ ಆಗುವ ತಪ್ಪನ್ನು ನಿವಾರಿಸಲು ಅಂತಹ ಎಲ್ಲಾ ವಸ್ತುಗಳಿಗೂ ಒಂದೇ ತೆರಿಗೆ ದರ ಮತ್ತು ವಹಿವಾಟು ದರವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ಅಂತಹ ವಸ್ತುಗಳ ಮತ್ತು ತೆರಿಗೆ ದರಗಳ ವಿವರಗಳನ್ನು ಅನುಬಂಧ-5 ರಲ್ಲಿ ಒದಗಿಸಲಾಗಿದೆ.

ii) ಡೀಸಲ್ ಮೇಲೆ ಶೇ.20 ರಷ್ಟು ಮಾರಾಟ ತೆರಿಗೆ ಮತ್ತು ಶೇ. 5ರಷ್ಟು ಪ್ರವೇಶ ತೆರಿಗೆ ನಿಗದಿ ಪಡಿಸಲಾಗಿದೆ. ತೈಲ ಕಂಪನಿಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ಇದ್ದು, ಈ ವಿನಾಯಿತಿಯ ಕಾರಣ ಪೆಟ್ರೋಲ್ ಬಂಕ್‌ಗಳು ಮತ್ತು ಇತರ ಬಳಕೆದಾರರಲ್ಲಿ ಅವರು ಖರೀದಿಸುವ ಡೀಸಲ್ ಮೇಲೆ ಪ್ರವೇಶ ತೆರಿಗೆಯಪಾವತಿ ಮಾಡುವ ಹೊಣೆ ಉಂಟುಮಾಡಿರುತ್ತದೆ. ಇದನ್ನು ಪರಿಷ್ಕರಿಸಲು ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ. 15.5 ಕ್ಕೆ ಇಳಿಸಲು ಮತ್ತು ಶೇ. 4 ರಷ್ಟು ಪ್ರವೇಶ ತೆರಿಗೆಯನ್ನು ಎಲ್ಲರ ಮೇಲೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಈ ಪ್ರಸ್ತಾವನೆಯಿಂದ ಡೀಸಲ್ ಚಿಲ್ಲರೆ ಮಾರಾಟ ಬೆಲೆಯು ಸರಿಸುಮಾರು ಈಗಿರುವ ಬೆಲೆಯಲ್ಲಿಯೇ ಮುಂದುವರೆಯುತ್ತದೆ.

iii) ಗುಟ್ಕಾ ಮೇಲೆ ಈಗಿರುವ ಎರಡನೇ ಮತ್ತು ಮುಂದಿನ ಹಂತಗಳ ಮೇಲೆ ಇರುವ ಶೇ. 1 ರಷ್ಟು ವಹಿವಾಟು ತೆರಿಗೆ ದರವನ್ನು ರದ್ದು ಪಡಿಸಿ, ಮೂಲ ತೆರಿಗೆ ದರವನ್ನು ಶೇ. 15 ರಿಂದ ಶೇ. 16 ಕ್ಕೆ ಏರಿಸಲು ಪ್ರಸ್ತಾಪಿಸುತ್ತೇನೆ. ಈ ಪ್ರಸ್ತಾವನೆಯು ಎರಡನೇ ಮತ್ತು ಮುಂದಿನ ಹಂತಗಳಲ್ಲಿ ತಪ್ಪಿ ಹೋಗುತ್ತಿದ್ದ ತೆರಿಗೆಯನ್ನು ಮೊದಲ ಮಾರಾಟ ಹಂತದಲ್ಲಿ ಪಡೆಯುವ ಪ್ರಯತ್ನವಾಗಿರುತ್ತದೆ.

iv) ಐ.ಎಮ್.ಎಲ್. ಮೇಲೆ ಎಲ್ಲಾ ಹಂತಗಳಲ್ಲೂ ಶೇ.60 ರಂತೆ ತೆರಿಗೆ ಇದ್ದು,

ಕೊನೆಯ ಹಂತದಲ್ಲಿ ಶೇ.10 ರಷ್ಟು ತೆರಿಗೆ ಇರುತ್ತದೆ. ಈ ತೆರಿಗೆ ರಚನೆಯನ್ನು ಪರಿಷ್ಕರಣೆ ಮಾಡುವ ಅವಶ್ಯಕತೆ ಇದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸುವ ದಿಸೆಯಲ್ಲಿ ತೆರಿಗೆ ದರ ಹೆಚ್ಚಳ ಮಾಡುವ ಸಲುವಾಗಿ, ಮೊದಲ ಮತ್ತು ಕೊನೆಯ ಮಾರಾಟ ಹಂತದಲ್ಲಿ ಶೇ.115 ಮತ್ತು ಶೇ.10 ರ ಪ್ರಕಾರ ತೆರಿಗೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಮೊದಲ ಹಂತದಲ್ಲೇ ಎಲ್ಲ ತೆರಿಗೆಯ ಹೊರೆಯನ್ನು ಸೇರ್ಪಡಿಸಿರುವುದರಿಂದ ಮಧ್ಯಂತರ ಹಂತಗಳಲ್ಲಿ ತೆರಿಗೆ ನೀಡುವ ಹೊಣೆಗಾರಿಕೆ ಇರುವುದಿಲ್ಲ.

(2) *ವಹಿವಾಟು ತೆರಿಗೆ ಸುಧಾರಣೆ*

ವಹಿವಾಟು ತೆರಿಗೆಯಡಿಯಲ್ಲಿ, ಮೊದಲ ಐದು ಲಕ್ಷ ವಹಿವಾಟಿಗೆ ವಿನಾಯಿತಿ ಇರುತ್ತದೆ. ಈ ವಿನಾಯಿತಿಯು ಕೆಲವು ಉದ್ದಿಮೆದಾರರು ವಿನಾಯಿತಿ ಮಿತಿಯಲ್ಲಿಯೇ ಇರಲು ಅವಕಾಶ ಮಾಡಿಕೊಟ್ಟಿದೆ. ಆದುದರಿಂದ ಮೊದಲ 5 ಲಕ್ಷಕ್ಕೆ ಇರುವ ವಹಿವಾಟು ತೆರಿಗೆ ವಿನಾಯಿತಿಯನ್ನು ರದ್ದುಪಡಿಸುಲು ಪ್ರಸ್ತಾವಿಸುತ್ತೇನೆ. ಈ ಕ್ರಮವು ತೆರಿಗೆ ಮೂಲವನ್ನು ವಿಸ್ತರಿಸುವುದಲ್ಲದೆ ಮೌಲ್ಯವರ್ಧಿತ ತೆರಿಗೆಯನ್ನು ಅಳವಡಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ವಹಿವಾಟು ತೆರಿಗೆಯಲ್ಲಿ ಮೂರು ಹಂತ ರೂಪದ ಬದಲಾಗಿ ಎರಡು ಹಂತ ರೂಪದಲ್ಲಿ ಅಂದರೆ 1000 ಲಕ್ಷದವರೆಗೆ ಶೇ. 1.5 ರಂತೆ ಮತ್ತು 1000 ಲಕ್ಷಕ್ಕೂ ಮಿಗಿಲಾದ ವಹಿವಾಟಿಗೆ ಶೇ. 3 ರಂತೆ ತೆರಿಗೆ ವಿಧಿಸುವ ಪದ್ಧತಿಯನ್ನು ಜಾರಿಪಡಿಸಲು ಪ್ರಸ್ತಾಪಿಸುತ್ತೇನೆ. ಆದರೆ ಮೊಟ್ಟ ಮೊದಲಿಗೆ 1000 ಲಕ್ಷ ವಹಿವಾಟನ್ನು ಮೀರುವ ವರ್ತಕರುಗಳಿಗೆ ಆ ವರ್ಷದಲ್ಲಿ ಮಾತ್ರ ಮೊದಲ 1000 ಲಕ್ಷ ವಹಿವಾಟಿಗೆ ಶೇ. 1.5 ರಂತೆ ವಹಿವಾಟು ತೆರಿಗೆ ವಿಧಿಸುವ ಸೌಲಭ್ಯವನ್ನು ಕಲ್ಪಿಸಲು ಮತ್ತು ಅದನ್ನು ಮೀರಿದ ವಹಿವಾಟಿಗೆ ಶೇ. 3 ರಂತೆ ವಹಿವಾಟು ತೆರಿಗೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಎರಡನೇ ಮಾರಾಟ ಮತ್ತು ಮುಂದಿನ ಹಂತದ ಮಾರಾಟದ ಮೇಲಿನ ವಹಿವಾಟು ತೆರಿಗೆ ದರದಲ್ಲಿ ಯಾವಬದಲಾವಣೆಯೂ ಇರುವುದಿಲ್ಲ.

(3) *ತೆರಿಗೆ ಕಾಯ್ದೆಯಲ್ಲಿ ಪರಿಷ್ಕರಣೆ*

i) ಮಾರಾಟ ತೆರಿಗೆಯಲ್ಲಿ ಬ್ರಾಂಡ್ ನೇಮ್‌ಗೆ ನೀಡಿರುವ ಅರ್ಥವನ್ನು 1-4-99 ರಲ್ಲಿ ಇದ್ದಂತೆ ಪುನರ್‌ಸ್ಪಷ್ಟತೆ ನೀಡಲು;

ii) ಉತ್ತೇಜನ ಮತ್ತು ರಿಯಾಯಿತಿ ನೀತಿಯಡಿಯಲ್ಲಿ ಕೊಡಲ್ಪಟ್ಟಿರುವ ಅರ್ಹತಾ ಪತ್ರದಲ್ಲಿ ದೋಷ ಅಥವಾ ಸರಿಯಿಲ್ಲವೆಂದು ಭಾವಿಸಿ, ಅದರ ಇತ್ಯರ್ಥಕ್ಕೆ ರಚಿತವಾದ ಸಮಿತಿಗೆ ಪ್ರಸ್ತಾವನೆ ಮಾಡಿದ ಸಂದರ್ಭಗಳಲ್ಲಿ, ಅಂತಹ ಸಂದರ್ಭಗಳಲ್ಲಿ ಕರನಿರ್ಧಾರಣಾ ಕಾಲಮಿತಿ ಪರಿಗಣನೆಗೆ ಹೊರತುಪಡಿಸಲು;

iii) ಸೆಕ್ಷನ್ 12ಬಿ (4) ಪ್ರಕಾರ ದಂಡ ಪ್ರಕ್ರಿಯೆಯನ್ನು ತಿದ್ದುಪಡಿಮಾಡಿ ಅದರಡಿಯಲ್ಲಿ ವಿಧಿಸುವ ದಂಡವನ್ನು ತಿಂಗಳಿಗೆ ಶೇ.2 ರಂತೆ ನಿಗದಿಪಡಿಸಲು;

iv) ಸೆಕ್ಷನ್12-ಸಿ ಪ್ರಕಾರ ಸಂಕ್ಷಿಪ್ತ ಕರನಿರ್ಧರಣೆಗೆ ಅರ್ಹವಾಗುವ ವರ್ತಕರುಗಳಿಗೆ, ನಮೂನೆಗಳು ಮತ್ತು ಪಟ್ಟಿಗಳನ್ನು ಸಲ್ಲಿಸಲು ಕರನಿರ್ಧರಣೆಯ ಪೂರ್ವ ಅಥವಾ ವರುಷ ಮುಗಿದ ಆರು ತಿಂಗಳ ಒಳಗೆ ಸಲ್ಲಿಸಲು ಅವಕಾಶ ಮಾಡಲು;

v) ಸೆಕ್ಷನ್12-ಸಿ ಯಡಿಯಲ್ಲಿರುವ ವಹಿವಾಟು ಮಿತಿಯನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಒಟ್ಟು ವಹಿವಾಟು 50 ಲಕ್ಷ ರೂ. ಮತ್ತು ಇತರ ವರ್ತಕರಿಗೆ 40 ಲಕ್ಷ ರೂ.ಗೆ ಹೆಚ್ಚಿಸಲು;

vi) ಸೆಕ್ಷನ್ 13 (2) ರ ಪ್ರಕಾರ ಪ್ರತಿ ತಿಂಗಳು ಕೊಡಬೇಕಾದ ಬಡ್ಡಿಯನ್ನು ಶೇ. 2 ರಂತೆ ಒಂದೇ ದರದಲ್ಲಿ ನಿಗದಿಪಡಿಸಲು;

vii) ಸೆಕ್ಷನ್19-ಎಎ (1) (ii) ರ ಅನ್ವಯ ಅಧಿಸೂಚನೆಯನ್ನು ಹೊರಡಿಸುವಾಗ ಷರತ್ತುಗಳನ್ನು ನಿಗದಿಪಡಿಸಲು;

viii) ಸೆಕ್ಷನ್ 19-ಎ ರಡಿಯಲ್ಲಿ ಸರ್ಕಾರ ಮತ್ತು ಜಿಲ್ಲಾ ಪಂಚಾಯತ್ ಮಾತ್ರ ತೆರಿಗೆಯನ್ನು ಮೂಲದಲ್ಲಿ ಕಡಿತಪಡಿಸಲು;

ix) ಸೆಕ್ಷನ್ 22-ಬಿ ಯಡಿಯಲ್ಲಿ ಪ್ರಾರಂಭಿಸಿದ ಪ್ರಕರಣಗಳನ್ನು ಇತ್ಯಾರ್ಥಗೊಳಿಸಲು 31-3-2000 ದವರೆಗೆ ಇರುವ ಕಾಲಾವಧಿಯನ್ನು 31-3-2001 ರ ವರೆಗೆ ವಿಸ್ತರಿಸಲು;

x) ಸಧ್ಯದಲ್ಲಿ ವಿಧಿಸುವ ದಂಡವನ್ನು ಕನಿಷ್ಠ ತೆರಿಗೆಯ ಅರ್ಧ ಮೊತ್ತದ ಬದಲಾಗಿ, ಕನಿಷ್ಠ ಕಾಲು ಭಾಗ ತೆರಿಗೆ ಮತ್ತು ಗರಿಷ್ಠ ಅರ್ಧ ಭಾಗ ತೆರಿಗೆ ಮಿತಿಯನ್ನು ಸೆಕ್ಷನ್ 28-ಎ (4) ರಲ್ಲಿ ಅಳವಡಿಸಲು;

xi) ಹೊರದೇಶದಿಂದ ರಾಜ್ಯಕ್ಕೆ ಆಮದಾಗಿ ಬಂದು ಹೊರಹೋಗುವ ಸರಕುಗಳಿಗೆ ಟ್ರಾನ್ಸಿಟ್ ಪಾಸ್ ಅನ್ನು ನಿಗದಿಪಡಿಸಲು;

xii) ಬ್ರಾಂಡ್ ನೇಮ್ ಸರಕುಗಳಲ್ಲಿ ಸೇರ್ಪಡೆಯಾಗುವ ಮೌಲ್ಯವನ್ನು ತೆರಿಗೆಗೆ ಒಳಪಡಿಸಲು;

xiii) ತೆರಿಗೆ ಪಾವತಿಯಲ್ಲಿ ತೀವ್ರ ವಿಳಂಬ ಮಾಡುವ ವರ್ತಕರ ಫೋಟೋಗಳನ್ನು ಮತ್ತು ತೆರಿಗೆ ಬಾಕಿ ವಿವರಗಳನ್ನು ಪತ್ರಿಕೆಯಲ್ಲಿ ಪ್ರಕಟಣೆ ಮಾಡುವ ಅವಕಾಶ ಕಲ್ಪಿಸಲು;

xiv) ಐದನೇ ಷೆಡ್ಯೂಲ್‌ನ ಕ್ರಮ ಸಂಖ್ಯೆ 7-ಎ ಮತ್ತು 42-ಎ ಅಡಿಯಲ್ಲಿ ಕೊಡಲ್ಪಡುವ ಮಾನ್ಯತಾ ಪತ್ರ ನೀಡಲು ಜಂಟಿ ಆಯುಕ್ತರುಗಳಿಗೆ ಅಧಿಕಾರ ನೀಡಲು;

xv) ಕರ್ನಾಟಕ ನ್ಯಾಯಮಂಡಳಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿವಿಷನ್ ಪೆಟಿಷನ್ ಸಲ್ಲಿಸಲು 60 ದಿನಗಳಿಂದ 120 ದಿನಗಳವರೆಗೆ ಕಾಲಾವಕಾಶ ವಿಸ್ತರಿಸಲು;

xvi) ವ್ಯಾಪಾರದ ವರ್ಗಾವಣೆಯಾದಾಗ, ವರ್ಗಾವಣೆಯ ನಂತರ ಅದರ ಪೂರ್ವಾವಧಿಗೆ ಸಂಭಂದಪಟ್ಟಂತೆ ಬರುವ ತೆರಿಗೆ ಮತ್ತು ಇತರ ಬಾಧ್ಯತೆಗಳನ್ನು ವರ್ಗಾವಣೆ ಮಾಡುವ ಮತ್ತು ವರ್ಗಾಯಿಸಿಕೊಳ್ಳುವ ವ್ಯಕ್ತಿಗಳಿಂದ ವಸೂಲಿ ಮಾಡಲು;

xvii) ಗರಿಷ್ಠ 7.5 ಲಕ್ಷ ವಹಿವಾಟು ಇರುವ ವರ್ತಕರುಗಳು ನಮೂನೆ 3 ಮತ್ತು ತೆರಿಗೆಯನ್ನು ತ್ರೈಮಾಸಿಕವಾಗಿ ಸಲ್ಲಿಸಲು; ಮತ್ತು

xviii) ಕರ್ನಾಟಕ ಮಾರಾಟ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಕರ್ನಾಟಕ ಪ್ರವೇಶ ತೆರಿಗೆ, ಕಾಯ್ದೆಯಡಿಯಲ್ಲಿ ಬಾಕಿ ಇರುವ ಕರನಿರ್ಧರಣೆಗಳಲ್ಲಿ, ಒಂದು ಬಾರಿ ಕ್ರಮವಾಗಿ, ವಾರ್ಷಿಕ ವಹಿವಾಟು ರೂ. 5 ಲಕ್ಷಕ್ಕೂ ಮೀರದಿರುವ ಪ್ರಕರಣಗಳಲ್ಲಿ 31-3-98 ವರ್ಷಾಂತ್ಯಕ್ಕೆ, 31-3-99 ರ ಒಳಗೆ ನಮೂನೆ 4 ನ್ನು ಸಲ್ಲಿಸಿದ್ದರೆ, ಅದರ ಆಧಾರದ ಮೇಲೆ ಯಾವುದೇ ಷರತ್ತುಗಳಿಲ್ಲದೆ ಅಂತಿಮಗೊಳಿಸಲು ಮತ್ತು ವಾರ್ಷಿಕ ವಹಿವಾಟು 15 ಲಕ್ಷಗಳಿಗೂ ಮೀರದಿರುವ ಪ್ರಕರಣಗಳಲ್ಲಿ 31-3-98 ವರ್ಷಾಂತ್ಯಕ್ಕೆ, 31-3-99 ರ ಒಳಗೆ ನಮೂನೆ 4 ನ್ನು ಸಲ್ಲಿಸಿದ್ದರೆ ಹಾಗೂ ಹಿಂದಿನ ಎರಡು ವರ್ಷಗಳಲ್ಲಿ ಅವರು ಸಲ್ಲಿಸಿದ ನಮೂನೆ 4ನ್ನು ಒಪ್ಪಿಕೊಂಡಿದ್ದರೆ ಮತ್ತು ಶಾಸನಬದ್ಧ ನಮೂನೆಗಳನ್ನು ಸಲ್ಲಿಸಿದ ಪಕ್ಷದಲ್ಲಿ, ನಮೂನೆ 4 ರ ಆಧಾರದ ಮೇಲೆ ಕರನಿರ್ಧರಣೆ ಅಂತಿಮಗೊಳಿಸಲು;

ಪ್ರಸ್ತಾಪಿಸುತ್ತೇನೆ.

ಈ. ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

i) ತೆರಿಗೆ ದರಗಳಲ್ಲಿ ಹೆಚ್ಚಳ

ತೆರಿಗೆ ಸಂಪನ್ಮೂಲ ಕ್ರೋಢೀಕರಿಸುವ ಉದ್ದೇಶದಿಂದ ಬ್ಯಾಟರಿ ಮತ್ತು ಒಣ ಸೆಲ್ ಬ್ಯಾಟರಿಗಳು, ಕ್ಯಾಸೆಟ್ ಟೇಪ್ ರೆಕಾರ್ಡರ್ಸ್ (ಧ್ವನಿ ಮತ್ತು ಚಿತ್ರ) ಮತ್ತು ಅವುಗಳ ಬಿಡಿ ಭಾಗಗಳು, ವಿದ್ಯುತ್ ಸಾಧನಗಳು, ಮಿನರಲ್ ವಾಟರ್, ಗ್ರಾನೈಟ್ ಕಲ್ಲುಗಳು ಇತ್ಯಾದಿ ವಸ್ತುಗಳ ಮೇಲೆ ತೆರಿಗೆ ದರ ಹೆಚ್ಚಿಸಲು ಪ್ರಾಸ್ತಾಪಿಸುತ್ತೇನೆ. ಅಂತಹ ವಸ್ತುಗಳ ಮತ್ತು ತೆರಿಗೆ ದರಗಳ ವಿವರಗಳನ್ನು ಅನುಬಂಧ-6 ರಲ್ಲಿ ಒದಗಿಸಲಾಗಿದೆ.

ii) ವಿನಾಯಿತಿಗಳ ರದ್ದತಿ

ನಿರ್ದಿಷ್ಟ ವಸ್ತುಗಳನ್ನು ಕ್ಯಾಂಟೀನ್ ಸ್ಟೋರ್ಸ್‌ಗಳಿಗೆ ಮಾರಾಟ ಮಾಡಿದಾಗ ಶೇ. 4 ರಂತೆ ತೆರಿಗೆ ವಿಧಿಸಲಾಗುತ್ತಿದೆ. ಕ್ಯಾಂಟೀನ್ ಸ್ಟೋರ್ಸ್ ಇಲಾಖೆಗೆ ಮಾರಾಟವಾಗುವ

ಎಲ್ಲಾ ವಸ್ತುಗಳ ಮೇಲೆ ಶೇ.4 ಅಥವಾ ಮತ್ತು ಅದಕ್ಕಿಂತ ಕಡಿಮೆ ದರವಿದ್ದರೆ ಅದರಂತೆ ವಿಧಿಸಲು ಪ್ರಸ್ತಾಪಿಸುತ್ತೇನೆ.

iii) ಬೀರ್ ಮೇಲೆ ತೆರಿಗೆ ಏರಿಕೆ

1-4-99 ರಲ್ಲಿ ಬೀರ್ ಮೇಲಿನ ತೆರಿಗೆಯನ್ನು ಮೊದಲ ಹಂತದಲ್ಲಿ ಶೇ.55 ರಿಂದ 45 ಕ್ಕೆ ಮತ್ತು ಕೊನೆಯ ಹಂತದ ತೆರಿಗೆಯನ್ನು ಶೇ.10 ರಿಂದ 5 ಕ್ಕೆ ಇಳಿಸಲಾಗಿತ್ತು. ಬೀರ್ ತಯಾರಿಕರು ಸಲ್ಲಿಸಿದ್ದ ಮನವಿಯಲ್ಲಿ ಸದರಿ ತೆರಿಗೆ ಇಳಿತದಿಂದ ಹೆಚ್ಚಿನ ಪ್ರಮಾಣದ ವ್ಯಾಪಾರವಾಗಿ ಯಾವುದೇ ರೀತಿಯಲ್ಲಿ ರಾಜ್ಯಕ್ಕೆ ಧಕ್ಕೆಯಾಗುವುದಿಲ್ಲ ಎಂದು ತಿಳಿಸಲಾಗಿತ್ತು. ಆದರೆ 1999-2000 ವರ್ಷದಲ್ಲಿ ಈ ಕ್ರಮದಿಂದ ರಾಜ್ಯಸ್ವಕ್ಕೆ ಹಾನಿ ಉಂಟಾದ ಕಾರಣ ಬೀರ್ ಮೇಲಿನ ಮೊದಲ ಹಂತದ ತೆರಿಗೆ ಶೇ. 55 ಕ್ಕೆ ಮತ್ತು ಕೊನೆ ಹಂತದ ತೆರಿಗೆಯನ್ನು ಶೇ. 10ಕ್ಕೆ ನಿಗದಿಪಡಿಸಲು ಪ್ರಸ್ತಾಪಿಸುತ್ತೇನೆ.

148. ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 1979

(1) ಬೈಸಿಕಲ್, ಟಾಂಡೆಮ್ ಸೈಕಲ್, ಸೈಕಲ್ ಸಂಯೋಜನೆಗಳು, ಸೈಕಲ್ ರಿಕ್ಷಾಗಳು, ಪರಾಂಬುಲೇಟರ್ಸ್ ಮತ್ತು ಮಕ್ಕಳ ತ್ರಿಚಕ್ರ ಬೈಸಿಕಲ್‌ಗಳಲ್ಲಿ ಉಪಯೋಗಿಸುವ ಟೈರ್ಸ್, ಟ್ಯೂಬ್ಸ್‌ಗಳು ಮತ್ತು ಗಾಳಿ ಮಿಲ್‌ಗಳು ಮತ್ತು ಅದರ ಬಿಡಿಭಾಗಗಳು, ಉಪಸಾಧನಗಳಿಗೆ ವಿನಾಯಿತಿ ನೀಡಲು;

(2) ಲಿಫ್ಟ್‌ಗಳು, ಎಲಿವೇಟರ್ಸ್‌ಗಳು, ಎಸ್ಕಲೇಟರ್‌ಗಳು ಮತ್ತು ಅವುಗಳ ಬಿಡಿಭಾಗಗಳು ಮತ್ತು ಉಪಸಾಧನಗಳು, ಎಲ್ಲಾ ರೀತಿಯ ಫಿಲ್ಮ್‌ಗಳು, ಫೋಟೋಗ್ರಾಫಿಕ್ ಪೇಪರ್ ಮೇಲೆ ಶೇ.5 ರಂತೆ ಮತ್ತು ಇಥೈಲ್ ಆಲ್ಕೋಹಾಲ್ ಮತ್ತು ನ್ಯೂಟ್ರಲ್ ಸ್ಪಿರಿಟ್ ಮೇಲೆ ಶೇ.4 ರಂತೆ ತೆರಿಗೆ ವಿಧಿಸಲು;

(3) ಸಕ್ಕರೆ ಮೇಲೆ ತೆರಿಗೆಯನ್ನು ಶೇ. 1 ರಿಂದ 2 ಕ್ಕೆ ಹೆಚ್ಚಿಸಲು;

(4) ಸಕ್ಕರೆ ಮೇಲೆ ಮೂಲದಲ್ಲಿ ತೆರಿಗೆ ಕಡಿತ ಮಾಡುವ ಸೆಕ್ಷನ್ 9-ಎ ಯನ್ನು ತೆಗೆದುಹಾಕಲು;

(5) ರಾಜ್ಯ ಸರ್ಕಾರವನ್ನು ಹೊರತುಪಡಿಸಿ, ಸರ್ಕಾರಿ ಇಲಾಖೆಗಳು ಪ್ರವೇಶ ತೆರಿಗೆ ನೀಡುವಂತೆ ತಿದ್ದುಪಡಿ ಮಾಡಲು; ಮತ್ತು

(6) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957 ರಲ್ಲಿ ಇರುವಂತೆ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯ ಕೆಲವು ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಲು;

ಪ್ರಸ್ತಾಪಿಸುತ್ತೇನೆ.

149. ಕರ್ನಾಟಕ ಕೃಷಿ ವರಮಾನ ತೆರಿಗೆ, 1957

(1) ಸಧ್ಯಕ್ಕೆ 50 ಎಕರೆ ಹೊಂದಿರುವ ವ್ಯಕ್ತಿಗಳಿಗೆ ಹೊಂದಾಣಿಕೆ ಪದ್ದತಿಯಲ್ಲಿ ತೆರಿಗೆ ನೀಡುವ ಅವಕಾಶವಿದೆ. ತೆರಿಗೆ ಪದ್ದತಿಯನ್ನು ಸರಳೀಕರಣ ಮಾಡಲು ಹೊಂದಾಣಿಕ ಪದ್ದತಿಯನ್ನು 150 ಎಕರೆಯವರೆಗೆ ಎಲ್ಲ ವ್ಯಕ್ತಿಗಳಿಗೆ (ಕಂಪನಿಗಳನ್ನು ಹೊರತುಪಡಿಸಿ) ಈ ಕೆಳಕಂಡಂತೆ ವಿಸ್ತರಿಸಲು ಪ್ರಸ್ತಾಪಿಸುತ್ತೇನೆ.

ಕ್ರ.ಸಂ.	ಭೂ ವಿಸ್ತೀರ್ಣ	ಹೊಂದಾಣಿಕೆ ತೆರಿಗೆ ದರ
1.	1 ಎಕರೆಯಿಂದ - 100 ಎಕರೆಯವರಿಗೆ, 50 ಎಕರೆಗಿಂತ ಹೆಚ್ಚು ಹೊಂದಿದ್ದು 100 ಎಕರೆ ದಾಟದೇ ಇರುವ ವ್ಯಕ್ತಿಗಳಿಗೆ;	ರೂ.1150 ಪ್ರತಿ ಎಕರೆಗೆ
2.	1 ಎಕರೆಯಿಂದ - 150 ಎಕರೆಯವರಿಗೆ, 100 ಎಕರೆಗಿಂತ ಹೆಚ್ಚು ಹೊಂದಿದ್ದು 150 ಎಕರೆ ದಾಟದೇ ಇರುವ ವ್ಯಕ್ತಿಗಳಿಗೆ;	ರೂ.1250 ಪ್ರತಿ ಎಕರೆಗೆ

ಮೇಲಿನ ಹೊಂದಾಣಿಕೆ ತೆರಿಗೆ ನೀಡುವ ವ್ಯಕ್ತಿಗಳು ಅವರ ಎಲ್ಲಾ ಭೂವಿಸ್ತೀರ್ಣದ ಮೇಲೆ, ಯಾವುದೇ ವಿನಾಯಿತಿ ಇಲ್ಲದೆ ತೆರಿಗೆ ಪಾವತಿ ಮಾಡಬೇಕಾಗುತ್ತದೆ.

(2) i) ಸೆಕ್ಷನ್ 18(2-ಎ) (ಬಿ) ಯಡಿಯಲ್ಲಿ ಬಡ್ಡಿಯನ್ನು ಯಾವ ಕಾಲದಿಂದ ಲೆಕ್ಕ ಮಾಡಬೇಕೆಂಬುದನ್ನು,

ii) ಸೆಕ್ಷನ್ 17ರಡಿಯಲ್ಲಿ ಆಯುಕ್ತರು, ತಮ್ಮ ಆಧೀನದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೆ ಕಾರ್ಯವ್ಯಾಪ್ತಿ ನೀಡಲು, ಮತ್ತು

iii) ಸೆಕ್ಷನ್ 35ರಡಿಯಲ್ಲಿ ಆಯುಕ್ತರಿಗೆ, ಅಪರ ಆಯುಕ್ತರುಗಳ ಆದೇಶಗಳನ್ನು ಸ್ವಯಂ ಪರಿಷ್ಕರಣೆ ಮಾಡುವ ಅಧಿಕಾರ ನೀಡಲು;

ತಿದ್ದುಪಡಿ ಮಾಡಲು ಪ್ರಸ್ತಾಪಿಸುತ್ತೇನೆ.

150. ವಿಲಾಸ ತೆರಿಗೆ

(1). ಕಲ್ಯಾಣ ಮಂಟಪಗಳು, ತೆರಿಗೆ ತಪ್ಪಿಸುವ ಸಲುವಾಗಿ, ವಸೂಲು ಮಾಡುವ ಮೊತ್ತವನ್ನು ವಿಭಜಿಸುವುದನ್ನು ತಡೆಗಟ್ಟಲು ಕಾನೂನಿಗೆ ಸೂಕ್ತ ತಿದ್ದುಪಡಿ, ವಿನಾಯಿತಿ ಗರಿಷ್ಠ ಪರಿಮಿತಿಯನ್ನು ರೂ. 2000 ಕ್ಕೆ ಇಳಿಸಲು, ಮತ್ತು ಕಲ್ಯಾಣಮಂಟಪಗಳು ವಸೂಲು ಮಾಡುವ ಎಲ್ಲ ಮೊತ್ತದ ಮೇಲೆ ಶೇ.15 ರಂತೆ ತೆರಿಗೆ ವಿಧಿಸಲು;

(2). ಹೋಟೆಲ್‌ಗಳ ವ್ಯಾಪ್ತಿಯಲ್ಲಿ ಪೂರ್ವಾನ್ವಯವಾಗಿ ಕ್ಲಬ್‌ಗಳನ್ನು ಸೇರಿಸಲು;

(3). ದೂರವಾಣಿ ಕರೆ ಮೊತ್ತ ಮತ್ತು ಲಾಂಡ್ರಿ ಮೊತ್ತಗಳನ್ನು ವಿಲಾಸ ತೆರಿಗೆ ಪರಿವ್ಯಾಪ್ತಿಯಿಂದ ತೆಗೆಯಲು; ಮತ್ತು

(4). ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಹೋಟಲ್‌ಗಳಿಗೆ ವಿಧಿಸುವ ವಿಲಾಸ ತೆರಿಗೆ ದರದ ಗರಿಷ್ಠ ಮಿತಿಯನ್ನು ಶೇ.15 ರಿಂದ ಶೇ. 12.5 ಕ್ಕೆ ಇಳಿಸಲು;

ಪ್ರಸ್ತಾಪಿಸುತ್ತೇನೆ.

151. ಕರ್ನಾಟಕ ಮನರಂಜನಾ ತೆರಿಗೆ, 1958

(1) ಕನ್ನಡ ಚಿತ್ರಗಳಿಗೆ ವಿನಾಯಿತಿಯನ್ನು 2000-2001 ವರುಷಕ್ಕೆ ಮುಂದುವರೆಸಲು;

(2) ಮನರಂಜನಾ ತೆರಿಗೆ ದರವನ್ನು ಕನ್ನಡ ಚಿತ್ರಗಳಿಗೆ ಹೊರೆತುಪಡಿಸಿ ಶೇ.100 ಕ್ಕೆ ಹೆಚ್ಚಿಸಲು;

(3) ಸೆಕ್ಷನ್ 7 ರಡಿಯಲ್ಲಿ ನೀಡುವ ವಿನಾಯಿತಿಯ ಗರಿಷ್ಟ ಮಿತಿಯಾದ ಶೇ.100ನ್ನು ಶೇ.50 ಕ್ಕೆ ಇಳಿಸಲು;

(4) ಜಂಟಿ ಆಯುಕ್ತರುಗಳಿಗೆ ಸ್ವಯಂ ಪರಿಷ್ಕರಣ ಅಧಿಕಾರ ನೀಡಲು; ಮತ್ತು

(5) ಸೆಕ್ಷನ್ 4-ಎಎ ಅಡಿಯಲ್ಲಿ ಸೇವಾ ಶುಲ್ಕಗಳ ಮಿತಿಯನ್ನು 25 ಮತ್ತು 50 ಪೈಸೆಯಿಂದ, ಕ್ರಮವಾಗಿ 50 ಪೈಸೆ ಮತ್ತು 1 ರೂ.ಗಳಿಗೆ ಹೆಚ್ಚಿಸಲು;

ಪ್ರಸ್ತಾಪಿಸುತ್ತೇನೆ.

152. ಮೈಸೂರು ಜೂಜು ತೆರಿಗೆ, 1932

(1) ಬೆಂಗಳೂರು ಟರ್ಫ್ ಕ್ಲಬ್‌ಗೆ ರೂ. 800 ಲಕ್ಷ ಮತ್ತು ಮೈಸೂರು ರೇಸ್ ಕ್ಲಬ್‌ಗೆ ರೂ. 30 ಲಕ್ಷ ಟೋಟಲೈಜೇಟರ್ ಹೊಂದಾಣಿಕೆ ತೆರಿಗೆ ನಿಗದಿ ಪಡಿಸಲು; ಮತ್ತು

(2) ತೆರಿಗೆ ಪಾವತಿಯಲ್ಲಿ ವಿಳಂಬವಾದಾಗ ಅಥವಾ ಕೊಡದೇ ಇದ್ದ ಪಕ್ಷದಲ್ಲಿ ಶೇ. 2 ರಂತೆ ದಂಡ ವಿಧಿಸಲು;

ಪ್ರಸ್ತಾಪಿಸುತ್ತೇನೆ.

153. ಅಧಿಸೂಚನೆಗಳ ಪುನರ್ ವಿಮರ್ಶೆ

ವಿವಿಧ ಕಾಯ್ದೆಗಳಡಿಯಲ್ಲಿ ಚಾಲ್ತಿಯಲ್ಲಿರುವ ತೆರಿಗೆ ಮತ್ತು ವಹಿವಾಟು ತೆರಿಗೆ ಸಂಬಂಧಪಟ್ಟ ವಿನಾಯಿತಿ ಮತ್ತು ಇಳಿತಗಳ ಅಧಿಸೂಚನೆಗಳನ್ನು ಪುನರಾವಲೋಕನ ಮಾಡಿರುತ್ತೇನೆ. ಅನುಬಂಧ-7 ರಲ್ಲಿ ನಮೂದಿಸಿರುವ ಸರಕುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಸ್ತುಗಳಿಗೆ ಚಾಲ್ತಿಯಲ್ಲಿರುವ ತೆರಿಗೆ ವಿನಾಯಿತಿ ಮತ್ತು ಇಳಿತ ದರಗಳ ಅಧಿಸೂಚನೆಗಳನ್ನು ಪರಿಷ್ಕರಿಸಿದ ವಹಿವಾಟು ತೆರಿಗೆಯನ್ನು ಒಳಗೊಂಡಂತೆ ಮುಂದುವರಿಸಲು ಪ್ರಸ್ತಾಪಿಸುತ್ತೇನೆ.

154. ಕರಸಮಾಧಾನ ಯೋಜನೆ

ಮಾರಾಟ ತೆರಿಗೆ, ಪ್ರವೇಶ ತೆರಿಗೆ ಮತ್ತು ವ್ಯವಸಾಯ ವರಮಾನ ತೆರಿಗೆಗಳಡಿಯಲ್ಲಿ ಹಲವು ಕರನಿರ್ಧರಣಾ ಆದೇಶಗಳು ಬಹಳ ಕಾಲದವರೆಗೆ ಮನವಿ ಪ್ರಾಧಿಕಾರಣಗಳು ಮತ್ತು ನ್ಯಾಯಾಲಯಗಳ ಮುಂದೆ ಬಾಕಿ ಇದ್ದು ಅಂತಹ ಪ್ರಕರಣಗಳಲ್ಲಿ ಬರಬೇಕಾದ ತೆರಿಗೆ ಮೊತ್ತವು ತಡೆಯಾಜ್ಞೆಗೊಳಪಟ್ಟಿರುವುದರಿಂದ ವಸೂಲಾಗದೆ ಇರುತ್ತದೆ ಮತ್ತು ಕೆಲವು ಪ್ರಕರಣಗಳಲ್ಲಿ ಹಲವಾರು ಕಾರಣಗಳಿಂದ ತೆರಿಗೆ ಬಾಕಿ ಇರುತ್ತದೆ. ಇಂತಹ ಪ್ರಕರಣಗಳನ್ನು ಅಂತಿಮಗೊಳಿಸಲು ಮತ್ತು ಅವುಗಳಿಂದ ಬರಬೇಕಾದ ತೆರಿಗೆ ಮೊತ್ತವನ್ನು ಆದಷ್ಟು ಬೇಗ ವಸೂಲು ಮಾಡುವ ದೃಷ್ಟಿಯಿಂದ ಈ ಕೆಳಕಂಡ ಯೋಜನೆಗಳನ್ನು ಒಂದು ಬಾರಿಯ ಕ್ರಮವಾಗಿ ಸಂಬಂಧಪಟ್ಟ ಕರಧಾತರಿಗೆ ನೀಡಲು ಪ್ರಸ್ತಾಪಿಸುತ್ತೇನೆ.

(1) ಯಾವುದೇ ಪ್ರಕರಣದಲ್ಲಿ ಕರನಿರ್ಧರಣೆಯಾಗಿದ್ದು, ಅಂತಹ ಆದೇಶವು ದಿನಾಂಕ 27.3.2000 ರಂದು, 5 ವರ್ಷಗಳಿಗೂ ಹೆಚ್ಚು ಕಾಲ ಮನವಿ ಪ್ರಾಧಿಕಾರಿಗಳು ಮತ್ತು ನ್ಯಾಯಾಲಯಗಳ ಮುಂದೆ ಇತ್ಯರ್ಥವಾಗದೇ ಇದ್ದು, ಅಂತಹ ಕರಧಾತರು 30.9.2000 ದೊಳಗೆ ತಮ್ಮ ಮನವಿಗಳನ್ನು ಹಿಂತೆಗೆದುಕೊಂಡು ಕರನಿರ್ಧರಣಾ ಆದೇಶದ ಪ್ರಕಾರ ಬಾಕಿ ಇರುವ ತೆರಿಗೆಯನ್ನು ಪಾವತಿಸಿದರೆ, ಆ ಮೊತ್ತದ ಮೇಲೆ ಬರುವ ಎಲ್ಲ ವಿಧವಾದ ದಂಡವನ್ನು ಮನ್ನ ಮಾಡಲಾಗುವುದು.

(2) ದಿನಾಂಕ 27.3.2000 ರಂದು, ಯಾವುದೇ ಪ್ರಕರಣದಲ್ಲಿ 31.3.98 ನೇ ಸಾಲಿನ -ವರೆಗೆ ಕರನಿರ್ಧರಣೆಯಾಗಿದ್ದು ಅಂತಹ ಕರನಿರ್ಧರಣೆಯನ್ವಯ ತೆರಿಗೆ ಮತ್ತು ಇತರೆ ಮೊತ್ತಗಳು ಬಾಕಿ ಇದ್ದ ಪಕ್ಷದಲ್ಲಿ ಆ ಮೊತ್ತ ಮತ್ತು ಅದರ ಜೊತೆಗೆ ಬಾಕಿ ಇರುವ ದಂಡ ಮತ್ತು ಬಡ್ಡಿಯನ್ನು ದಿನಾಂಕ 31.7.2000 ದೊಳಗೆ ಶೇ. 50 ರಷ್ಟು ಪಾವತಿ ಮಾಡಿದಲ್ಲಿ ಉಳಿದ ಮೊತ್ತವನ್ನು ಮನ್ನ ಮಾಡಲಾಗುವುದು.

ಮೇಲ್ಕಂಡ ಕ್ರಮಗಳಿಂದ ವ್ಯಾಪಾರ ಮತ್ತು ಕೈಗಾರಿಕಾ ವೃಂದದಿಂದ ಉತ್ತಮ ತರಿಗೆ ಅನುವರ್ತನೆಯ ಜೊತೆ ಪರಿಣಾಮಕಾರಿ, ಉತ್ತಮ ಮತ್ತು ಪಾರದರ್ಶಕ ತೆರಿಗೆ ಆಡಳಿತ ಅನುಷ್ಠಾನವಾಗುತ್ತದೆ ಎಂದು ಆಶಿಸುತ್ತೇನೆ.

155. ತತ್ಸಂಬಂಧ ತಿದ್ದುಪಡಿಗಳು

ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳ ಜೊತೆ ಇತರೆ ಪರಿಷ್ಕರಣಾ ತಿದ್ದುಪಡಿ ಬದಲಾವಣೆಗಳ ವಿವರಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

156. ನೆರೆಹೊರೆಯ ರಾಜ್ಯಗಳಲ್ಲಿರುವ ಸನ್ನದು ಶುಲ್ಕದೊಡನೆ ಸಾಮ್ಯತೆಯನ್ನು ಉಂಟು ಮಾಡುವುದಕ್ಕಾಗಿ, ಡಿಸ್ಟಿಲರಿ, ಬ್ರೀವರಿ, ವೈನರಿಗಳು, ಮದ್ಯವನ್ನು ಸೀಸೆಗಳಿಗೆ ತುಂಬುವುದು, ಸಗಟು ಮದ್ಯದ ಸನ್ನದುಗಳು, ಚಿಲ್ಲರೆ ಮದ್ಯದ ಸನ್ನದುಗಳು ಮೊದಲಾದ ಸನ್ನದುಗಳ ಮೇಲಿನ ಶುಲ್ಕವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ-VIII ರಲ್ಲಿ ನೀಡಲಾಗಿದೆ.

157. ಸಾರಾಯಿ ಮೇಲಿನ ಶುಲ್ಕವನ್ನು ಬಲ್ಕ್ ಲೀಟರಿಗೆ 17 ರೂಪಾಯಿಗಳಿಂದ 20 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ರಾಜ್ಯದಲ್ಲಿ ಸೀಸೆಗಳಿಗೆ ತುಂಬುವ ಮದ್ಯದ ಲೇಬಲ್‌ಗಳ ಅನುಮೋದನಾ ಶುಲ್ಕವನ್ನು 4,000 ರೂ.ಗಳಿಂದ 10,000 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಹಾಗೆಯೇ ರಾಜ್ಯದ ಹೊರಗೆ ಸೀಸೆಗೆ ತುಂಬಲಾದ ಆದರೆ ಕರ್ನಾಟಕ ರಾಜ್ಯದಲ್ಲಿ ಮಾರಾಟವಾಗುವ ಮದ್ಯದ ಲೇಬಲ್‌ಗಳ ಅನುಮೋದನಾ ಶುಲ್ಕವನ್ನು 10,000 ರೂಪಾಯಿಗಳಿಂದ 25,000 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಮೇಲ್ಕಂಡ ಮೂರು ಪ್ರಸ್ತಾವನೆಗಳನ್ನು ಮುಂದಿನ ಅಬಕಾರಿ ವರ್ಷದ ಪ್ರಾರಂಭದಿಂದ ಅಂದರೆ 1-7-2000 ದಿಂದ ಜಾರಿಗೆ ತರಲಾಗುವುದು. ಕಾಕಂಬಿ ಆಧಾರಿತ ಮದ್ಯಸಾರದಿಂದ ತಯಾರು ಮಾಡಿದ ಮದ್ಯ ಹಾಗೂ ಮಾಲ್ಟ್ ಆಧಾರಿತ ಮದ್ಯಸಾರದಿಂದ ತಯಾರು ಮಾಡಿದ ಮದ್ಯಗಳ ಮೇಲೆ ವಿಧಿಸಲಾಗುತ್ತಿರುವ ಬೇರೆ ಬೇರೆ ಶುಲ್ಕಗಳ ಸುವ್ಯವಸ್ಥೆಗೊಳಿಸುವ ಉದ್ದೇಶದಿಂದ ಎರಡು ರೀತಿಯ ಮದ್ಯಗಳ ಮೇಲೆ ಬಲ್ಕ್ ಲೀಟರಿಗೆ 45 ರೂಪಾಯಿಯಂತೆ ಏಕರೂಪದ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸಲಾಗಿದೆ. ಭಾರತೀಯ ತಯಾರಿಕಾ ಮದ್ಯ (ಬೀರನ್ನು ಹೊರತುಪಡಿಸಿ) ಗಳ ಮೇಲೆ ವಿಧಿಸುವ ಲೀಟರ್ ಫೀಯನ್ನು ಲೀಟರಿಗೆ 20 ರೂಪಾಯಿನಿಂದ 30 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಮಾರುವ ಬೀರ್ ಮೇಲೆ ಬಲ್ಕ್ ಲೀಟರಿಗೆ 1-50 ರೂಪಾಯಿ ಲೀಟರ್ ಫೀ ಶುಲ್ಕವನ್ನು ವಿಧಿಸಲು ಪ್ರಸ್ತಾವಿಸಲಾಗಿದೆ.

158. ಸ್ಥಳೀಯ ಬಳಕೆಗಾಗಿ ಹಾಗೂ ರಫ್ತು (ಸೇವನಾರ್ಹವಲ್ಲದ ಉದ್ದೇಶ) ಮಾಡುವ ಸಲುವಾಗಿ ಸರಬರಾಜು ಮಾಡುವ ರೆಕ್ಟಿಫೈಡ್ ಸ್ಪಿರಿಟ್‌ನ ಮೇಲೆ ವಿಧಿಸುವ ಶುಲ್ಕವನ್ನು ಲೀಟರಿಗೆ 1 ರೂಪಾಯಿನಿಂದ 2 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಆದರೆ, ಸ್ಥಳೀಯ ಡಿಸ್ಟಿಲರಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರೆಕ್ಟಿಫೈಡ್ ಸ್ಪಿರಿಟ್‌ನ ಮೇಲೆ ವಿಧಿಸುವ ಆಮದು ಶುಲ್ಕವನ್ನು ಬಲ್ಕ್ ಲೀಟರಿಗೆ 1 ರೂಪಾಯಿನಿಂದ 3 ರೂಪಾಯಿಗಳಿಗೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ. ಸ್ಥಳೀಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಬೀರ್ ಮೇಲೆ ವಿಧಿಸುವ ಆಮದು ಶುಲ್ಕವನ್ನು ಲೀಟರಿಗೆ 3 ರೂಪಾಯಿನಿಂದ 6 ರೂಪಾಯಿಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಹಾಗೆಯೇ ಭಾರತೀಯ ತಯಾರಿಕಾ ಮದ್ಯದ ಮೇಲಿನ ಆಮದು ಶುಲ್ಕವನ್ನು ಲೀಟರ್‌ಗೆ 5 ರೂ.ನಿಂದ 10 ರೂ.ಗಳಿಗೆ ಏರಿಸಲು ಪ್ರಸ್ತಾವಿಸಲಾಗಿದೆ. ಅದೇ ಕಾರಣಕ್ಕಾಗಿ ಬೀರ್ ಮೇಲೆ ರಫ್ತು ಶುಲ್ಕವನ್ನು ಬಲ್ಕ್ ಲೀಟರಿಗೆ 1 ರೂ.ನಿಂದ 50 ಪೈಸೆಗೆ ಇಳಿಸಲು ಪ್ರಸ್ತಾವಿಸಲಾಗಿದೆ.

159. ಮದ್ಯದ ಅಂಗಡಿಗಳನ್ನು ವಿವೇಚನಾರಹಿತವಾಗಿ ಸ್ಥಳಾಂತರಿಸುವ ಪ್ರವೃತ್ತಿಯನ್ನು ನಿಯಂತ್ರಿಸುವ ಉದ್ದೇಶದಿಂದ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಮದ್ಯದ ಅಂಗಡಿಯನ್ನು ಸನ್ನದುದಾರರ ಕೋರಿಕೆಯಂತೆ ಸ್ಥಳಾಂತರಿಸಲು ಅನುಮತಿಯನ್ನು ನೀಡುವುದಕ್ಕೆ ಸನ್ನದು ಶುಲ್ಕದ ಶೇಕಡಾ 25 ರಷ್ಟು ಶುಲ್ಕವನ್ನು ವಿಧಿಸಲು ಪ್ರಸ್ತಾವಿಸಲಾಗಿದೆ.

160. ಮೇಲ್ಕಂಡ ಕ್ರಮಗಳಿಂದಾಗಿ ನಿವ್ವಳ 100 ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲವನ್ನು ಆರ್ಥಿಕ ವರ್ಷದಲ್ಲಿ ನಿರೀಕ್ಷಿಸಲಾಗಿದೆ.

161. ಅಬಕಾರಿ ಇಲಾಖೆಯಲ್ಲಿ ಸ್ವಾತಂತ್ರ್ಯ ಪೂರ್ವದಿನ (ಅಂದರೆ 1946) ಗಳಿಂದಲೂ 306 ಕೋಟಿ ರೂ.ಗಳಷ್ಟು ಬಾಕಿ ಮೊತ್ತವು ಇರುತ್ತದೆ. ಬಾಕಿ ಹಣದ ಮೇಲಿನ ಬಡ್ಡಿಯು ವರ್ಷದಿಂದ ವರ್ಷಕ್ಕೆ ಏರುತ್ತಿದ್ದು ಪ್ರಸ್ತುತ 142 ಕೋಟಿ ಅಸಲು ಮತ್ತು ಅದರ ಮೇಲಿನ ಬಡ್ಡಿಯು 164 ಕೋಟಿ ರೂಪಾಯಿಗಳಾಗಿದ್ದು ಬಡ್ಡಿಯು ಅಸಲಿಗಿಂತ ಹೆಚ್ಚಾಗಿರುವುದನ್ನು ಸೂಚಿಸುತ್ತದೆ. ಹಳೇ ಬಾಕಿಯನ್ನು ವಸೂಲಿ ಮಾಡುವುದು ತುಂಬಾ ಕಷ್ಟಕರವಾಗಿರುತ್ತದೆ. ಪ್ರಸ್ತುತ ನನ್ನ ಸರ್ಕಾರವು ***"ಕರ ವಿವಾದ ಸಮಾಧಾನ"*** ಯೋಜನೆಯಂತಹ ಯೋಜನೆಯನ್ನು ಹಾಕಿಕೊಂಡು ಬಾಕಿಯನ್ನು ವಸೂಲಿ ಮಾಡಲು ದೃಢ ನಿರ್ಧಾರ ಮಾಡಿರುತ್ತದೆ. ಆದುದರಿಂದ, ಸುಸ್ತಿದಾರರು ಬಾಕಿಯಿರುವ ಅಸಲು ಹಣವನ್ನು ಪಾವತಿ ಮಾಡಲು ಮುಂದೆ ಬಂದಲ್ಲಿ ಬಡ್ಡಿ ಹಣವನ್ನು ಮನ್ನಾ ಮಾಡಲು ಯೋಜನೆಯನ್ನು ಜಾರಿಗೆ ತರಲು ಪ್ರಸ್ತಾವಿಸಲಾಗಿದೆ. ಈ ಯೋಜನೆಯು ಕೇವಲ ಮೂರು ತಿಂಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ ಹಾಗೂ ಈ ಕ್ರಮದಿಂದ ತ್ವರಿತವಾಗಿ ಬಾಕಿ ಹಣವನ್ನು ವಸೂಲಿ ಮಾಡಲು ಶಕ್ಯವಾಗುತ್ತದೆಂದು ನಿರೀಕ್ಷಿಸಲಾಗಿದೆ.

162. ಮೂರ್ತೆದಾರರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಪಾನೀಕರಿಗೆ ಉತ್ತಮವಾದ ಸೇಂದಿಯನ್ನು ದೊರಕಿಸುವ ಉದ್ದೇಶದಿಂದ ಸೇಂದಿಯನ್ನು ಮೂರ್ತೆದಾರರ ಸಹಕಾರಿ-ಸಂಘಗಳ ಮೂಲಕವಾಗಿ ಮಾರಾಟ ಮಾಡುವ ಯೋಜನೆಯನ್ನು ಕೆಲವು ವರ್ಷಗಳ ಹಿಂದೆ ಜಾರಿಗೆ ತರಲಾಗಿತ್ತು. ಆದರೆ ಉತಾರು ಮಾಡುತ್ತಿರುವ ಮರಗಳ ಸಂಖ್ಯೆಯು ಗಣನೀಯವಾಗಿ ಕ್ಷೀಣಿಸಿದ್ದರಿಂದ ಈ ಯೋಜನೆಯು ಮೂರ್ತೆದಾರರಿಗೆ ಲಾಭದಾಯಕವಾಗಿ ಪರಿಣಮಿಸಿರುವುದಿಲ್ಲ. ಆದ್ದರಿಂದ ಸೇಂದಿಯನ್ನು ಮಾರಾಟ ಮಾಡುವ ಹಕ್ಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡುವ ಹಿಂದಿನ ಪದ್ಧತಿಯಂತೆಯೇ ವಿಲೇವಾರಿ ಮಾಡಲು ಪ್ರಸ್ತಾವಿಸಲಾಗಿದೆ. ಆದರೆ ಪ್ರಾರಂಭದಲ್ಲಿ ಈ ಬದಲಾವಣೆಯನ್ನು ಗುಲ್ಬರ್ಗಾ ಜಿಲ್ಲೆಯ ಸೇಡಂ, ಚಿಂಚೋಳಿ, ಚಿತ್ರಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿಯೂ, ರಾಯಚೂರು ಜಿಲ್ಲೆಯ ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿಯೂ 2000-2001ನೇ ಅಬಕಾರಿ ವರ್ಷದಿಂದ ಜಾರಿಗೆ ತರಲಾಗುತ್ತದೆ.

ಮುದ್ರಾಂಕ ಮತ್ತು ನೋಂದಣಿ

ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ಮತ್ತು ಸಂಘಗಳ ನೋಂದಾಣಿ ಶುಲ್ಕ

163. ರೈತಾಪಿ ಜನಾಂಗಕ್ಕೆ ಮತ್ತು ಇತರೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸಹಾಯವಾಗುವಂತೆ

ಕ್ರಯ ಪತ್ರಗಳಿಗೆ ಮುದ್ರಾಂಕ ಶುಲ್ಕದ ದರ ಕಡಿಮೆಗೊಳಿಸಲು ಪ್ರಸ್ತಾಪಿಸುತ್ತೇನೆ. ಈ ರಿಯಾಯ್ತಿಯು ಬೆಂಗಳೂರು ಮಹಾ ನಗರಾಭಿವೃದ್ಧಿ ಪ್ರಾಧಿಕಾರದ (ಬಿ.ಎಂ.ಆರ್.ಡಿ.ಎ.) ವ್ಯಾಪ್ತಿಗೆ ಅನ್ವಯವಾಗುವುದಿಲ್ಲ. ಹಾಲಿ ಮುದ್ರಾಂಕ ಶುಲ್ಕದ ದರವು ಶೇಕಡ 10 ರಷ್ಟು ಎಲ್ಲಾ ಪ್ರದೇಶಗಳಲ್ಲಿ ಇರುತ್ತದೆ. ಬಿ.ಎಂ.ಆರ್.ಡಿ.ಎ. ಸರಹದ್ದಿನಲ್ಲಿರುವ ಆಸ್ತಿಗಳನ್ನು ಹೊರತುಪಡಿಸಿ ಇತರೆ ನಗರ ಪ್ರದೇಶಗಳಲ್ಲಿರುವ ಆಸ್ತಿಗಳಿಗೆ ಮುದ್ರಾಂಕ ಶುಲ್ಕದ ದರದಲ್ಲಿ ಶೇಕಡಾ 1 ರಷ್ಟು ಕಡಿತವನ್ನು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ತಿಗಳಿಗೆ ಶೇಕಡ 2 ರಷ್ಟು ಮುದ್ರಾಂಕ ಶುಲ್ಕದ ಪ್ರಮಾಣವನ್ನು ಕಡಿತಗೊಳಿಸಲಾಗುವುದರಿಂದ ರೈತರಿಗೆ ಸಾಕಷ್ಟು ಅನುಕೂಲವಾಗುವುದು.

